ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 17

ರೂ. 5/-


ಏಪ್ರಿಲ್ 26, 2009

ಜನಶಕ್ತಿ

ಕನ್ನಡ ವಾರಪತ್ರಿಕೆ



ಮಂಗಳೂರು : ತೃತೀಯ ರಂಗದ ಬೃಹತ್ ರ್‍ಯಾಲಿ



ದಕ್ಷಿಣ ಕನ್ನಡ : ನೈಜ ರಾಜಕೀಯ ಚರ್ಚೆಗೆ ಸಿದ್ಧರಿಲ್ಲದ ಕಾಂಗ್ರೆಸ್ - ಬಿಜೆಪಿಗಳು

ರಾಜಕೀಯ ಮ್ಯಾಚ್ ಫಿಕ್ಸಿಂಗ್ !



ಖಂಡನೀಯ ನಕ್ಸಲ್ ಹಿಂಸೆ

ಬಿಜೆಪಿ V/s ಕಾಂಗ್ರೆಸ್ ಎಂಬ ವಾದ

ಸಮಾಜೋತ್ಸವ, ಶೋಭಾ ಯಾತ್ರೆಗಳಲ್ಲಿ ಮೊದಲು ತೊಡಗಿದವರು ಯಾರು ? - ಅಮೃತ ಸೋಮೇಶ್ವರ ಪ್ರಶ್ನೆ

ಕೋಲಾರ ಕ್ಷೇತ್ರದಲ್ಲಿನ ಅವಕಾಶಗಳನ್ನು ಸಮರ್ಥವಾಗಿ ಬಳಕೆ ಮಾಡಿಕೊಳ್ಳಲು ಜೆಡಿ(ಎಸ್) ಪಕ್ಷ ಪ್ರಯತ್ನಿಸಬೇಕಾದ ಅಗತ್ಯವಿದೆ. ಕಾಂಗ್ರೆಸ್, ಬಿಜೆಪಿ ಎರಡೂ ಪಕ್ಷಗಳ ಅಭ್ಯರ್ಥಿಗಳ ಬಗೆಗೆ ಜನ ಬೇಸತ್ತಿದ್ದಾರೆ.

ಕೋಲಾರ : ಮೂರನೇ ಶಕ್ತಿಗೆ ಅವಕಾಶವಿದೆ

ಮುರುಳಿಕೃಷ್ಣ

ಟೋಮಾಟೊಗೆ ಬೆಲೆ ಸಿಗದಿರುವುದು. ಕುಡಿಯಲು ಶುದ್ಧ ನೀರು ದೊರೆಯದಿರುವುದು, ರಸ್ತೆ, ಚರಂಡಿ ಇಲ್ಲದಿರುವುದು, ಶಿಕ್ಷಣ, ನಿರುದ್ಯೋಗ, ಕನಿಷ್ಠ ಕೂಲಿ ದೊರೆಯದಿರುವುದು ಕೋಲಾರದಲ್ಲಿ ನಡೆಯುತ್ತಿರುವ ಲೋಕಸಭೆ ಚುನಾವಣೆಯ ಪ್ರಮುಖ ವಿಷಯಗಳೇ ಅಲ್ಲ. ಒಮ್ಮೆ ಹಳ್ಳಿಗಳಿಗೆ ಪ್ರವೇಶಿಸಿದರೆ ಜನತೆ ಈ ಎಲ್ಲ ಸಮಸ್ಯೆಗಳನ್ನು ಒಂದೊಂದಾಗಿ ಬಿಚ್ಚಿ ಹೇಳುತ್ತಾರೆ. ಹಳ್ಳಿಗಳಲ್ಲಿ ಕೆಲಸವಿಲ್ಲದೆ ಕೃಷಿ ಕೂಲಿಕಾರ್ಮಿಕರು ಉದ್ಯೋಗ ಅರಸಿ ಪಟ್ಟಣಗಳತ್ತ ವಲಸೆ ಹೊರಟಿದ್ದಾರೆ. ಕೆಲವು ಗ್ರಾಮಗಳಲ್ಲಿ ಉದ್ಯೋಗ ಖಾತರಿ ಯೋಜನೆ ಜಾರಿಯಾಗಿದ್ದರೆ ಇನ್ನು ಕೆಲವು ಗ್ರಾಮಗಳಲ್ಲಿ ಇನ್ನೂ ಚಾಲನೆಯನ್ನೇ ಪಡೆದಿಲ್ಲ. ಕುಡಿಯುವ ನೀರಿಗಾಗಿ ಮಹಿಳೆಯರು ಉರಿಬಿಸಿಲಲ್ಲಿ ಒಂದೆರಡು ಮೈಲಿ ಅಲೆಯುವಂತಾಗಿದೆ. ಒಂದು ಎಕರೆ ಟೋಮಾಟೊ, ಆಲೂಗಡ್ಡೆ ಬೆಳೆಯಲು ಲಕ್ಷಾಂತರ ರೂ. ಸುರಿಯುವ ರೈತ ಬೆಳೆ ಬಂದ ನಂತರ ಲಾಭದಾಯಕ ಬೆಲೆ ಸಿಗದೆ ರಸ್ತೆಯಲ್ಲಿ ಸುರಿಯುತ್ತಿದ್ದಾನೆ. ಇಂತಹ ಜ್ವಲಂತ ಸಮಸ್ಯೆಗಳು ಲೋಕಸಭೆ ಚುನಾವಣೆಯ ಪ್ರಮುಖ ಅಜೆಂಡಾ ಆಗದಿರುವುದು ವಿಷಾದನೀಯ.

'ಇಲ್ಲಿನ ಅಭ್ಯರ್ಥಿಗಳ ಪ್ರಮುಖ ವಿಷಯಗಳೆಂದರೆ ಜಾತಿ-ಉಪಜಾತಿ, ಹಣ, ಹೆಂಡ, ವೈಯಕ್ತಿಕ ಆರೋಪ ಮತ್ತು ಪ್ರತ್ಯಾರೋಪ ಇವೇ ಪ್ರಮುಖ ಚುನಾವಣಾ ಅಜೆಂಡಾಗಳು. ಕಳೆದ 20 ವರ್ಷಗಳಿಂದ ಕೋಲಾರ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಕೆ.ಎಚ್. ಮುನಿಯಪ್ಪ ಕೊಡುಗೆ ಹೇಳಿಕೊಳ್ಳುವಂತದೇನೂ ಇಲ್ಲ. ಬಿಜೆಪಿ ಇದನ್ನು ತನ್ನ ಪ್ರಚಾರ ಸಾಮಗ್ರಿಯಾಗಿ ಮಾಡಿಕೊಂಡಿರುವುದು ವಾಸ್ತವವೇ ಆಗಿದೆ. ಬಿಜೆಪಿ ಅಭ್ಯರ್ಥಿ ವೀರಯ್ಯ ಅಟ್ರಾಸಿಟಿ ಕೇಸ್‌ಗಳನ್ನು ಹಾಕಿಸುತ್ತಾರೆ ಹಾಗಾಗಿ ಮತ ಹಾಕಬೇಡಿ ಎಂಬುದು ಕಾಂಗ್ರೆಸ್‌ನ ರಾಜಕೀಯ ಅಸ್ತ್ರ. ಇನ್ನು ಜಾತ್ಯತೀತ ದಳ ಅಭ್ಯರ್ಥಿ ಚಂದ್ರಣ್ಣನದು, ದೇವೇಗೌಡ ಮತ್ತು ಕುಮಾರ ಸ್ವಾಮಿ ಗೌಡರಾಗಿದ್ದು ಎಲ್ಲ ಒಕ್ಕಲಿಗರ ಮತ ನಮಗೇ ಎಂಬುದು ಅವರ ಲೆಕ್ಕಾಚಾರ. ಚಂದ್ರಣ್ಣ ರಾಜಕಾರಣಕ್ಕೆ ಹೊಸಬರಲ್ಲದಿದ್ದರೂ ಕೋಲಾರ ಕ್ಷೇತ್ರಕ್ಕಂತೂ ಹೊಸಬರು. ಕೆಎಚ್ ಮತ್ತು ವೀರಯ್ಯ ಪರಿಸ್ಥಿತಿ ಹಾಗಲ್ಲ. ಇವರಿಬ್ಬರೂ ಕ್ಷೇತ್ರಕ್ಕೆ ಚಿರಪರಿಚಿತರೆ. ಆದರೆ ಇವರಿಬ್ಬರ ಕಲ್ಯಾಣ ಗುಣಗಳತ್ತ ಒಮ್ಮೆ ನೋಟ ಹರಿಸಿದರೆ ಕೋಲಾರಕ್ಕೆ ಇಂತಹ ಜನಪ್ರತಿನಿಧಿಗಳ ಅಗತ್ಯವೇ ಎಂಬ ಪ್ರಶ್ನೆ ಮೂಡುತ್ತದೆ.

ದಲಿತರ ವಿಭಜಿಸಿದ್ದು ಹಣದ ರಾಜಕೀಯ

ದಲಿತರನ್ನು ಜಾತಿ ಉಪಜಾತಿಗಳಾಗಿ ವಿಭಜಿಸಿದ್ದು, ಲೋಕಸಭೆ ಸದಸ್ಯರ ಕ್ಷೇತ್ರಾಭಿವೃದ್ಧಿ ನಿಧಿಯನ್ನು ತಮ್ಮ ಚೇಲಾಗಳ ಜೇಬು ತುಂಬಿಸಿದ್ದು, ಕೆಜಿಎಫ್‌ನ ಬಿಜಿಎಂಎಲ್ ಖಾಸಗಿಯವರಿಗೆ ಮಾರಾಟ ಮಾಡಲು ಬೇಕಾದ ಎಲ್ಲ ತಂತ್ರಗಳನ್ನು ರೂಪಿಸಿ ಅಲ್ಲಿನ ಕಾರ್ಮಿಕರನ್ನು ಬೀದಿಪಾಲು ಮಾಡಿದ್ದು ಕೆಎಚ್ ಅವರ ಸಾಧನೆ.

ಇಷ್ಟೇ ಅಲ್ಲ ಜಿಲ್ಲೆಯ ರಾಜಕಾರಣದಲ್ಲಿ ಕಾಂಗ್ರೆಸ್ ಮತ್ತು ಜನತಾ ಪರಿವಾರ ಎರಡರಲ್ಲೂ ಒಡಕುಂಟು ಮಾಡಿದ್ದು ಅವರ ಮತ್ತೊಂದು ಸಾಧನೆ. ಅದಕ್ಕಾಗಿಯೇ ಈಗ ನೀರು ಅವರ ಬುಡಕ್ಕೇ ಹರಿಯುತ್ತಿದೆ.

ಕಂಬಾಲಪಲ್ಲಿಯಲ್ಲಿ ಏಳು ಮಂದಿ ದಲಿತರನ್ನು ಹಾಡು ಹಗಲೇ ಜೀವಂತ ಸುಟ್ಟು ಹಾಕಿದಾಗ ಆರೋಪಿಗಳಿಗೆ ಶಿಕ್ಷೆಯಾಗಬೇಕೆಂದು ಕೆಎಚ್ ಅಪ್ಪಿತಪ್ಪಿಯೂ ಒಮ್ಮೆಯೂ ಪ್ರಸ್ತಾಪ ಮಾಡಿರಲಿಲ್ಲ. ಈಗ ನಾನು ದಲಿತರ ಪ್ರತಿನಿಧಿ ಎಂದು ಓಡಾಡುತ್ತಿದ್ದಾರೆ. ಇದಕ್ಕಾಗಿ ಯಥೇಚ್ಚವಾಗಿ ಹಣವನ್ನೂ ಸುರಿಯುತ್ತಿದ್ದಾರೆ. ರಾತ್ರೋರಾತ್ರಿ ಅವರಿವರ ಮನೆ ಬಾಗಿಲಿಗೆ ಭೇಟಿ ನೀಡಿ ಹಣದ ಆಮಿಷ ಒಡ್ಡಿ ಮತ ಯಾಚಿಸುತ್ತಿದ್ದಾರೆ. ಕಳೆದ ಐದು ಚುನಾವಣೆಗಳಲ್ಲಿ ಗುಪ್ತಗಾಮಿನಿಯಾಗೇ ಕಾರ್ಯಾಚರಣೆ ನಡೆಸುತ್ತಾ ಬಂದಿರುವ ಕೆಎಚ್ ಈಗಲೂ ಅದೇ ತಂತ್ರವನ್ನು ಅಳವಡಿಸಿಕೊಂಡಿದ್ದಾರೆ.

ಅನುದಾನ ಲೂಟಿ

ಇನ್ನು ಸಮಾಜಕ್ಕೆ ವೀರಯ್ಯನವರ ಕೊಡುಗೆಯಂತೂ ಏನೂ ಇಲ್ಲ. ಹಲವಾರು

ಸೋಲಬೇಕಾದವರು



ಕೆ.ಎಚ್.ಮುನಿಯಪ್ಪ




ವೀರಯ್ಯ

ಶಾಲೆಗಳನ್ನು ಮಾಡಿಕೊಂಡು ಕೇಂದ್ರ ಸರ್ಕಾರದಿಂದ ದೊರೆಯುವ ಅನುದಾನವನ್ನು ಲೂಟಿ ಮಾಡುತ್ತಿರುವುದೇ ಅವರ ಸಾಧನೆ. ದಲಿತ ಮುಖಂಡನೆಂದು ಹೇಳಿಕೊಂಡು ಓಡಾಡುತ್ತಿದ್ದಾನೆ. ಆದರೆ ಯಡಿಯೂರಪ್ಪ ಉಪಮುಖ್ಯಮಂತ್ರಿ ಯಾದಾಗ ಅವರ ಕೊಠಡಿಯಲ್ಲಿದ್ದ ಅಂಬೇಡ್ಕರ್ ಭಾವಚಿತ್ರವನ್ನು ಕಿತ್ತೆಸೆದಾಗ ತುಟಿಪಿಟಿಕ್ಕೆನ್ನಲಿಲ್ಲ. ಬದಲಿಗೆ ಯಡಿಯೂರಪ್ಪವರಿಗೆ ಬೆಂಬಲವಾಗಿ ನಿಂತಿದ್ದರು. ದಲಿತ ಸಂಘಟನೆಗಳೆಲ್ಲ ಯಡಿಯೂರಪ್ಪ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದರೆ ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರ ಸಮಿತಿ (ಡಿಎಚ್‌ಎಎಸ್) ಮುಖಂಡನಾಗಿದ್ದ ವೈ.ಸಂಪಂಗಿ (ಹಾಲಿ ಕೆಜಿಎಫ್ ಶಾಸಕ) ಯನ್ನು ಜೊತೆ ಹಾಕಿಕೊಂಡು ಯಡಿಯೂರಪ್ಪ ಪರ ನಿಂತು 'ಬೇಷ್' ಎನಿಸಿಕೊಂಡಿದ್ದರು. ಈ ಋಣಕ್ಕಾಗಿಯೇ ಯಡಿಯೂರಪ್ಪನವರು ವೀರಯ್ಯನನ್ನು ಅಂಬೇಡ್ಕರ್ ಅಭಿವೃದ್ಧಿ ನಿಗಮ ಅಧ್ಯಕ್ಷರನ್ನಾಗಿ ಮಾಡಿದ್ದು, ವೈ. ಸಂಪಂಗಿಗೆ ಕೆಜಿಎಫ್ ಟಿಕೆಟ್ ನೀಡಿದ್ದು. ಸಂಪಂಗಿ ಶಾಸಕರ ಭವನದಲ್ಲೇ 5 ಲಕ್ಷ ರೂ. ಲಂಚ ಸ್ವೀಕರಿಸಿದಾಗ ನೇರವಾಗಿ ಲೋಕಾಯುಕ್ತರ ಬಲೆಗೆ ಸಿಕ್ಕಿದಾಗ ಅವರ ಬೆಂಬಲಕ್ಕೆ ನಿಂತದ್ದು ವೀರಯ್ಯ. ಪೊಲೀಸರಿಗೆ ಶರಣಾಗದಂತೆ ಆಸ್ಪತ್ರೆಗಳಲ್ಲೇ ಮಲಗಿಸಿ ಜಾಮೀನು ಪಡೆಯುವಲ್ಲಿ ಯಶಸ್ವಿಯಾಗಿದ್ದರು. ವೀರಯ್ಯನದು ಮಂಡ್ಯ ಜಿಲ್ಲೆಯ ಕಾಡುಕೊತ್ತನಹಳ್ಳಿ. ಅಲ್ಲಿನವರನ್ನು ಒಮ್ಮೆ ವಿಚಾರಿಸಿದರೆ ಆತನ ಸಾಧನೆಗಳನ್ನು ಹಾಡಿಹೊಗಳುವುದನ್ನು ಕೇಳಬೇಕು. ಆಗ ತಿಳಿಯುತ್ತದೆ ವೀರಯ್ಯನಿಗೆ ಮತ ಹಾಕಬೇಕೊ ಬೇಡವೊ ಎನ್ನುವುದು. ಇನ್ನು ಆತ ಅಂಬೇಡ್ಕರ್ ಅಭಿವೃದ್ಧಿ ನಿಗಮ ಅಧ್ಯಕ್ಷನಾಗಿ ಕೋಲಾರಕ್ಕೆ ನೀಡಿರುವ ಕೊಡುಗೆ ಏನೂ ಇಲ್ಲ. ಇದಕ್ಕೆ ಬದಲಾಗಿ ಸರ್ಕಾರದ ಯೋಜನೆಗಳನ್ನು ಅವರ ಚೇಲಾಗಳ ಜೇಬು ತುಂಬಿಸಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಸ್ತ್ರೀಶಕ್ತಿ ಸಂಘಗಳು, ಸ್ವಸಹಾಯ ಸಂಘಗಳ ಮಹಿಳೆಯರನ್ನು ಭೇಟಿಯಾಡುತ್ತಿದ್ದಾರೆ. ರಾತ್ರೋರಾತ್ರಿ ಅವರ ಮನೆಗಳಿಗೆ ಭೇಟಿ ನೀಡಿ ಹಣದ ಆಮಿಷ ಒಡ್ಡಿ ಮತ ಕೀಳುವ ಕಾಯಕದಲ್ಲಿ ತೊಡಗಿದ್ದಾರೆ.

ಒಳ್ಳೆಯ ಅವಕಾಶವಿದೆ. ಆದರೆ....

ಇವರಿಬ್ಬರಿಗೂ ಹೋಲಿಸಿದರೆ ಜಾತ್ಯತೀತ ದಳ ಅಭ್ಯರ್ಥಿ ಚಂದ್ರಣ್ಣ ಉತ್ತಮ. ಆದರೆ ದಳದವರು ಪ್ರಚಾರಕ್ಕೆ ತೀವ್ರವಾಗಿ ಇಳಿದಿದ್ದೇ ಇಲ್ಲ. ಒಳ್ಳೆಯ ಅವಕಾಶವಿದೆ ಆದರೆ ಅದನ್ನು ಎನ್‌ಕ್ಯಾಷ್ ಮಾಡಿಕೊಳ್ಳುವಲ್ಲಿ ದಳ ಹಿಂದೆ ಬಿದ್ದಿದೆ. ಕೋಲಾರ ಲೋಕಸಭೆ ಕ್ಷೇತ್ರದ ಮುಸ್ಲಿಂ ಸಮುದಾಯದಲ್ಲಿ ಬಹುತೇಕ ಮಂದಿ ಜೆಡಿಎಸ್‌ಗೆ ಮತ ಚಲಾಯಿಸಲು ನಿರ್ಧರಿಸಿದ್ದಾರೆ. ಅವರ ಮತಗಳೇ ನಿರ್ಣಾಯಕ ಅಲ್ಲದಿದ್ದರೂ ಒಂದು ರೀತಿಯ ಟ್ರೆಂಡ್ ಸೃಷ್ಟಿಸಿರುವುದಂತೂ ಗ್ಯಾರಂಟಿ. ರೈತ ಸಮುದಾಯವಂತೂ ಕಾಂಗ್ರೆಸ್ ಮತ್ತು ಬಿಜೆಪಿಗೆ ಮತಹಾಕುವ ಪರಿಸ್ಥಿತಿಯಲ್ಲಿಲ್ಲ. ಅವರ ಸಂಪೂರ್ಣ ಒಲವು ತೃತೀಯ ಪರ್ಯಾಯದ ಅಭ್ಯರ್ಥಿಯತ್ತ ಇದೆ. ಆದರೆ ಅವರನ್ನೇ ಸಂಘಟಿಸಿ ತಮ್ಮತ್ತ ಸೆಳೆದುಕೊಳ್ಳುವ ತಾಕತ್ತ[illegible] ಜೆಡಿಎಸ್ ತೋರಿಸಬೇಕಾಗಿದೆ. ತೃತೀಯ ಪರ್ಯಾಯದ ಇತರ ಪಕ್ಷಗಳಾದ ಸಿಪಿಎಂ, ಸಿಪಿಐ ಸೇರಿದಂತೆ ಹಲವಾರು ವರ್ಗಗಳ[illegible] ಜೊತೆಗೂಡಿಸಿಕೊಂಡು ಈ ಚುನಾವಣೆಯನ್ನು ನಿರ್ಣಾಯಕ ಹೋರಾಟವಾಗಿ ಮುನ್ನಡೆಸಬೇಕಾಗಿದೆ. ಏಕೆಂದರೆ ಕೇಂದ್ರದಲ್ಲಿ ಯಾವುದೇ ಒಂದು ಪಕ್ಷ ಬಹುಮತ ಪಡೆಯಲು ಸಾಧ್ಯವಿಲ್ಲದ ಪ್ರಸಕ್ತ ಸನ್ನಿವೇಶದಲ್ಲಿ ಪ್ರತಿಯೊಂದು ಲೋಕಸಭೆ ಸ್ಥಾನವೂ ತನ್ನದೇ ಆದ ಪ್ರಾಮುಖ್ಯತೆ ಹೊಂದಿರುತ್ತದೆ. ಹಾಗಾಗಿ ಮತದಾರರು ಒಂದು ಕ್ಷಣ ಯಾಮಾರಿದರೂ ಅಪಾಯವಂತೂ ಕಟ್ಟಿಟ್ಟ ಬುತ್ತಿಯೇ ಸರಿ.

ಕ್ಷೇತ್ರದಲ್ಲಿ ಸುತ್ತಾಡಿದರೇ ಮಿಶ್ರಪ್ರತಿಕ್ರಿಯೆ ದೊರೆಯುತ್ತದೆ. ಕೆಲವು ತಾಲೂಕುಗಳಲ್ಲಿ ಬಿಜೆಪಿ ಮುಂದಿದ್ದರೆ, ಕೆಲವೆಡೆ ಕಾಂಗ್ರೆಸ್ ಮತ್ತು ಜೆಡಿಎಸ್ ಮುಂದಿದೆ. ಅಂತಿಮವಾಗಿ ಮತದಾರರ ಒಲವು ಎತ್ತ ಸಾಗುತ್ತದೆ ಕಾದುನೋಡಬೇಕಾಗಿದೆ.



'ಭಯೋತ್ಪಾದನೆಯ ನಿಗ್ರಹ ಹೇಗೆ ಸಾಧ್ಯ? ಈ ಕಿರುಪುಸ್ತಕವನ್ನು ತಾವು ಬರೆದಿದ್ದೀರಿ ಅದನ್ನು ನಾನು ಓದಿದ್ದೇನೆ. ಅಲ್ಲದೇ ಅದನ್ನು ನಮ್ಮ ವಕೀಲರ ಮಧ್ಯದಲ್ಲಿ ಮಾರಿದ್ದೇನೆ. ನಿಮ್ಮ ಈ ಕಿರುಹೊತ್ತಿಗೆ ಬಹಳ ಚೆನ್ನಾಗಿ ಬಂದಿದೆ. ಯಾವುದೇ ಸಂಶಯ ಉಳಿಯದಂತೆ ಎಲ್ಲ ಪ್ರಶ್ನೆಗಳಿಗೆ ತಾವು ಉತ್ತರಿಸಿದ್ದೀರಿ. ಇದನ್ನು ಓದಿದ ಮೇಲೆ ಭಯೋತ್ಪಾದಕರ ಬಗ್ಗೆ ಜನಸಾಮಾನ್ಯರಲ್ಲಿ ಒಂದು ಹೊಸ ದೃಷ್ಟಿಕೋನವನ್ನು ಕೊಡುತ್ತದೆ. ಈ ರೀತಿ ತಾವು ಉಳಿದ ವಿಷಯಗಳ ಬಗ್ಗೆಯೂ ಬರೆಯುತ್ತೀರೆಂದು ನಂಬಿರುವೆ.

ಜೆ.ಎ. ಹಿರೇಮಠ, ವಕೀಲರು
ಹಾವೇರಿ

ಸಂಪಾದಕೀಯ

ನಕ್ಸಲೀಯರ ಹಿಂಸಾಚಾರ ಖಂಡನೀಯ

15ನೇ ಲೋಕಸಭೆಗಾಗಿ ನಡೆಯುತ್ತಿರುವ ಸಾರ್ವತ್ರಿಕ ಚುನಾವಣೆಯ ಮೊದಲ ಹಂತದ ಮತದಾನ ಸಂದರ್ಭದಲ್ಲಿ ನಕ್ಸಲೀಯರು ನಡೆಸಿದ ಹಿಂಸಾಚಾರಕ್ಕೆ ಐದು ಜನ ಚುನಾವಣಾ ಅಧಿಕಾರಿಗಳು, 13 ಮಂದಿ ಭದ್ರತಾ ಸಿಬ್ಬಂದಿ ಹಾಗೂ ಇಬ್ಬರು ನಾಗರೀಕರು ಬಲಿಯಾಗಿದ್ದಾರೆ. ನಕ್ಸಲೀಯರ ಹಾವಳಿ ಇರುವ ಛತ್ತೀಸ್‌ಗಡ, ಒರಿಸ್ಸಾ, ಬಿಹಾರ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ಈ ಹಿಂಸಾಚಾರ ನಡೆದಿದೆ. ಇದು ಇನ್ನೊಂದು ರೀತಿಯ ಭಯೋತ್ಪಾದನೆಯೇ ಆಗಿದ್ದು ಖಂಡನಾರ್ಹವೂ ಆಗಿದೆ. ಚುನಾವಣೆಗಳಲ್ಲಿ ಮತದಾನವನ್ನು ಬಹಿಷ್ಕರಿಸಬೇಕೆಂಬ ತಮ್ಮ ಅಭಿಪ್ರಾಯವನ್ನು ಬಲವಂತವಾಗಿ ಜನರ ಮೇಲೆ ಹೇರುವ ಈ ಕ್ರಮ ಸರ್ವಥಾ ಸಮರ್ಥನೀಯವಲ್ಲ. ಇಂತಹ ನಕ್ಸಲೀಯರಿಗೆ ಬೌದ್ಧಿಕ ಬೆಂಬಲ ನೀಡುವುದು ಸಹ ಖಂಡನೀಯ.


ಇಂದು ದೇಶದಲ್ಲಿ ಇರುವುದು ನಿಜವಾದ ಪ್ರಜಾಪ್ರಭುತ್ವವಲ್ಲ, ಇದು ಬಂಡವಾಳಶಾಹಿ ಪ್ರಜಾಪ್ರಭುತ್ವ. ಇಲ್ಲಿ ಮತ ಪಡೆದು ಆಯ್ಕೆಯಾಗುವವರು ಹಲವರು ಲೂಟಿಕೋರರು, ಜನದ್ರೋಹಿಗಳು, ಕೋಮುವಾದಿಗಳು. ಇವರು ತಮ್ಮ ಲೂಟಿ ನಡೆಸಲು ಜನತೆಯ ಮೇಲೆ ಹಿಂಸೆಯನ್ನು ಹೇರುತ್ತಾರೆ' ಎಂಬ ನಕ್ಸಲೀಯರ ಪ್ರತಿಪಾದನೆ ಸುಳ್ಳಲ್ಲ. ಅವರ ಆರೋಪಗಳಲ್ಲಿ ಸತ್ಯಾಂಶಗಳಿವೆ. ಆದರೆ ಇವರು ವ್ಯವಸ್ಥೆಯನ್ನು ಸರಿಪಡಿಸಲು ಅನುಸರಿಸುತ್ತಿರುವ ದಾರಿ ವಿನಾಶಕಾರಿ. ಅದು ಕ್ರಾಂತಿಕಾರಿ ದಾರಿಯಲ್ಲ. ಕ್ರಾಂತಿ ಎಂದರೆ ವರ್ಗ ಶತ್ರುಗಳನ್ನು ವರ್ಗ ಹೋರಾಟದಲ್ಲಿ ಸೋಲಿಸಬೇಕು. ವರ್ಗ ಹೋರಾಟದಲ್ಲಿ ಗೆಲ್ಲಲು ವರ್ಗ ಸಂಘಟನೆಗಳನ್ನು [illegible]ಬೇಕು. ಕೇವಲ ಕೆಲವರು ಎಲ್ಲೋ ಕಾಡಿನಲ್ಲಿ ಅವಿತುಕೊಂಡಿದ್ದು ಜನರನ್ನು ಹತ್ಯೆ ಮಾಡುವ ಮೂಲಕ ಸಮಾಜ ಪರಿವರ್ತನೆ ಸಾಧ್ಯವಿಲ್ಲ.

ದೇಶದ ಜನ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಂಬಿದ್ದಾರೆ. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆ ಅನೇಕ ದೋಷಗಳಿಂದ ಕೂಡಿದ್ದರೂ ಜನರಿಗೆ ಆ ವ್ಯವಸ್ಥೆಯ ಬಗ್ಗೆ ನಂಬಿಕೆ ಇದೆ. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯ ಲೋಪದೋಷಗಳನ್ನು, ಆದರ ಇತಿಮಿತಿಗಳನ್ನು ಜನತೆ ತಮ್ಮ ಸ್ವಂತ ಅನುಭವದಿಂದ ಅರ್ಥ ಮಾಡಿಕೊಳ್ಳಬೇಕು. ಆಗ ಮಾತ್ರ ಅವರು ವ್ಯವವಸ್ಥೆಯ ಬದಲಾವಣೆಗಾಗಿ ನಡೆಯುವ ಹೋರಾಟದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುತ್ತಾರೆ. ಆಗ ಮಾತ್ರ ಶೋಷಿತರ ವಿಮೋಚನಾ ಹೋರಾಟ ಯಶಸ್ವಿಯಾಗುತ್ತದೆ.

ನಕ್ಸಲೀಯರು ವರ್ಗ ಶತ್ರುಗಳನ್ನು ನಾಶ ಮಾಡುವ ಹೆಸರಿನಲ್ಲಿ ವರ್ಗ ಹೋರಾಟಕ್ಕಾಗಿ ಶೋಷಿತ ಜನವಿಭಾಗಗಳನ್ನು ಸಂಘಟಿಸುತ್ತಿರುವ ಎಡಪಕ್ಷಗಳ ಕಾರ್ಯಕರ್ತರ ಮೇಲೂ ದಾಳಿ ಮಾಡುತ್ತಾರೆ. ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ವಿರುದ್ಧ ತೃಣಮೂಲ ಕಾಂಗ್ರೆಸ್ ಮೊದಲಾದ ಬಲಪಂಥೀಯ ಶಕ್ತಿಗಳೊಂದಿಗೆ ಕೈ ಜೋಡಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ದೇಶದ ಬಂಡವಾಳಶಾಹಿ ಚೌಕಟ್ಟಿನೊಳಗೆ ಕೆಲಸ ಮಾಡುತ್ತಾ ಶೋಷಿತ ಜನರಿಗೆ ಅಲ್ಪಸ್ವಲ್ಪ ಪರಿಹಾರಗಳನ್ನೊದಗಿಸುತ್ತಾ ಅವರ ಪ್ರಜ್ಞೆಯನ್ನು ಎತ್ತರಿಸುವ ಕೆಲಸ ಮಾಡುತ್ತಾ ಬಂದಿದೆ. ಅಂತಹ ಒಂದು ಪ್ರಗತಿಪರ ಸರ್ಕಾರವನ್ನು ದುರ್ಬಲಗೊಳಿಸಿ ಸಾಧಿಸುವುದೇನಿದೆ?

ನಕ್ಸಲೀಯರ ದಾರಿ ಸ್ವಯಂ ವಿನಾಶದ ದಾರಿ. ಅನೇಕ ಜನ ಕ್ರಾಂತಿಕಾರಿ ಯುವಕರು, ಯುವತಿಯರು ಈ ದಾರಿಗೆ ಭಾವನಾತ್ಮಕವಾಗಿ ಆಕರ್ಷಿತರಾಗಿ ನಾಶವಾಗಿದ್ದಾರೆ. ಇದರಿಂದಾಗಿ ಭಾರತದ ಕ್ರಾಂತಿಯ ಉದ್ದೇಶ ಸಫಲವಾಗಿಲ್ಲ. ಇಂತಹ ವಿನಾಶಕಾರಿ ದಾರಿಯನ್ನು ಬಿಟ್ಟು ಶೋಷಿತ ಜನತೆಯನ್ನು ಅವರ ಆರ್ಥಿಕ ಸಾಮಾಜಿಕ ಪ್ರಶ್ನೆಗಳ ಆಧಾರದಲ್ಲಿ ಸಂಘಟಿಸುವ ಕೆಲಸಕ್ಕೆ ನಕ್ಸಲೀಯರು ಬಂದು ಸೇರಿಕೊಳ್ಳುವುದು ಅಗತ್ಯವಿದೆ.

ಸರ್ಕಾರಗಳು ಸಹ ನಕ್ಸಲೀಯ ಸಮಸ್ಯೆಯನ್ನು ಕೇವಲ ಕಾನೂನು ವ್ಯವಸ್ಥೆಯ ಪ್ರಶ್ನೆಯಾಗಿ ನೋಡಬಾರದು ಎಂದು ಒತ್ತಾಯಿಸುವುದು ಅಗತ್ಯವಿದೆ. ನಿರಂತರ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಗುಡ್ಡಗಾಡು ಪ್ರದೇಶಗಳ ಜನಗಳ ನೈಜ ಅಭಿವೃದ್ಧಿಗೆ ಒಂದು ಆರ್ಥಿಕ, ಸಾಮಾಜಿಕ ಕಾರ್ಯಕ್ರಮ ರೂಪಿಸಿ ಜಾರಿ ಮಾಡುವಂತೆ ಸಾರ್ವಜನಿಕ ಒತ್ತಡವನ್ನು ಹೆಚ್ಚಿಸಬೇಕಾಗಿದೆ. ಚುನಾವಣೆಗಳಂತಹ ಸಂದರ್ಭದಲ್ಲಿ ಅಮಾಯಕರು ಇಂತಹ ಹಿಂಸಾಚಾರಕ್ಕೆ ಸಿಲುಕಿ ಪ್ರಾಣ ಕಳೆದುಕೊಳ್ಳುವುದನ್ನು ತಡೆಗಟ್ಟಬೇಕಾಗಿದೆ. ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನಕ್ಸಲೀಯರು ಚುನಾವಣಾ ಬಹಿಷ್ಕಾರಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಮತದಾರರಿಗೆ, ಚುನಾವಣಾ ಸಿಬ್ಬಂದಿಗೆ ಗರಿಷ್ಠ ಪ್ರಮಾಣದ ಭದ್ರತಾ ವ್ಯವಸ್ಥೆ ಮಾಡುವಲ್ಲಿ ಚುನಾವಣಾ ಆಯೋಗ ಆದ್ಯತೆಯ ಗಮನ ನೀಡಬೇಕಾಗಿದೆ.


ನಕ್ಸಲ್ ಬೆದರಿಕೆ ನಿರ್ಲಕ್ಷಿಸಿ ಮತದಾನಕ್ಕೆ ನಿಂತಿರುವ ಮಹಿಳೆಯರ ದೊಡ್ಡ ಸಾಲು


ಬಿಜೆಪಿ V/S ಕಾಂಗ್ರೆಸ್ ಎಂಬ ವಾದ

ಈ ವಾರ

ಇಂತಹದ್ದೊಂದು ಅಭಿಪ್ರಾಯಗಳು ಹಲವು ರಾಜ್ಯದ ಚಿಂತಕರಲ್ಲಿದೆ. ಈ ಲೋಕಸಭಾ ಚುನಾವಣೆಯಲ್ಲಿನ ಪ್ರಮುಖ ವಿಷಯಗಳೇನು? ಯಾರನ್ನೂ ಬೆಂಬಲಿಸಬೇಕು? ಭವಿಷ್ಯದಲ್ಲಿ ರೂಪುಗೊಳ್ಳಲಿರುವ ಸರ್ಕಾರ ಎಂತಹದ್ದಿರಬೇಕು ಎಂಬಿತ್ಯಾದಿ ವಿಷಯಗಳ ಬಗ್ಗೆ ಎಲ್ಲರೂ ಒಂದು ದನಿಯಾಗಿ ನಿಲುವು ವ್ಯಕ್ತಪಡಿಸದಿದ್ದರೂ ಭಿನ್ನ ಅಭಿಪ್ರಾಯಗಳಂತೂ ಇವೆ.

ಮೊನ್ನೆ ಕಾಂಗ್ರೆಸ್ ಪಕ್ಷದ ವೆಬ್‌ಸೈಟ್‌ನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಚಿಂತಕ ಡಾ:ಯು.ಆರ್.ಅನಂತಮೂರ್ತಿ ಯುವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಗಮನಾರ್ಹವೇ. 'ಬಾಬ್ರಿ ಮಸೀದಿ ಧ್ವಂಸ, ಗುಜರಾತ್‌ನ ನರಮೇಧ ಮಂಗಳೂರಿನಲ್ಲಿ ಧಾಳಿಗಳಂತಹ ದುರಾಡಳಿತದಿಂದ ದೇಶವನ್ನಾದರೂ ರಕ್ಷಿಸಬಲ್ಲ ಶಕ್ತಿ ಇರುವುದೇ ಕಾಂಗ್ರೆಸ್ ಪಕ್ಷಕ್ಕೆ: ಆದರ ಜನರಿಂದ ದೂರಗೊಳಿಸಬೇಕು ಎಂಬುದು ನಿಸ್ಸಂಶಯ. ಆದರೆ ಪ್ರಶ್ನೆ ಇರುವುದು. ಇಂತಹ ಪ್ರಮುಖ ಸವಾಲನ್ನು ಕಾಂಗ್ರೆಸ್ ಪಕ್ಷ ಎದುರಿಸುವುದೇ? ಎದುರಿಸುತ್ತಿದೆಯೇ? ಎಂಬುದಾಗಿದೆ. ಕೋಮುವಾದಿಗಳು ಇಷ್ಟೊಂದು ಭೀಕರ ಸ್ವರೂಪದಲ್ಲಿ ಬೆಳೆಯಲು, ಬೆದರಿಕೆ ಒಡ್ಡಲು ಕಾಂಗ್ರೆಸ್‌ನ ಪ್ರಧಾನಪಾಲು ಎಷ್ಟು ಎಂಬುದು?

ಇಲ್ಲಿ ಕಳೆದ ಐದು ವರ್ಷಗಳ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದಲ್ಲಿ ಆಡಳಿತ ಮೌಲ್ಯಮಾಪನ ಅತೀ ಅಗತ್ಯವಿದೆ. 2004ರ ಲೋಕಸಭಾ ಚುನಾವಣೆಗೂ, 2009ರ ಲೋಕಸಭಾ ಚುನಾವಣೆಗೂ ಹಲವು ಪ್ರಮುಖ ವ್ಯತ್ಯಾಸದ, ಹೊಸ ಬೆಳವಣಿಗೆಗಳ


ಬಾಬರಿ ಮಸೀದಿ ನಾಶಕ್ಕೆ ಅವಕಾಶ ಕೊಟ್ಟವರು ಯಾರು ?

ನೇತೃತ್ವದಲ್ಲಿ ಇತರೆ ಜಾತ್ಯಾತೀತ ಶಕ್ತಿಗಳು ಸೇರಿ ಕೇಂದ್ರದಲ್ಲಿ ಸರ್ಕಾರ ರಚಿಸಬೇಕು. ಮುಂದುವರೆದ ಅವರು ಜೆಡಿ(ಎಸ್) ಮತ್ತು ಕಮ್ಯುನಿಸ್ಟ್ ಜೊತೆಗಿನ ಸಂಬಂಧ ಉಳಿಸಿಕೊಳ್ಳಬೇಕು ಎಂದಿದ್ದಾರೆ'. ಇದರಾಚೆಯಲ್ಲಿಯೂ ಇನ್ನೂ ಕೆಲವು ಪ್ರಗತಿಪರರು ಕೆಲವೆಡೆ ಅಭ್ಯರ್ಥಿಯ 'ಕ್ರಿಯಾಶೀಲತೆ' ನೋಡಿ ಬೆಂಬಲಿಸಬಹುದು ಎಂಬುದು ಬಂದಿದೆ. ಇಲ್ಲಿಯೂ ಸಾಮಾನ್ಯ ಅಂಶ ಕಾಂಗ್ರೆಸ್ ಪಕ್ಷದಿಂದಲೇ ಆಯ್ಕೆಯಾಗಿದೆ.

ಡಾ॥ ಯು.ಆರ್.ಅವರಾಗಲೀ, ಇತರೆ ಪ್ರಗತಿಪರ ಗೆಳೆಯರಾಗಲೀ ಕೋಮುವಾದದ ಹಿಂದಿನ ಫ್ಯಾಶಿಸ್ಟ್ ಸ್ವರೂಪವನ್ನು ಅರಿತು ಆದರ ವಿರುದ್ಧ ಗಟ್ಟಿ ಧ್ವನಿ ಎತ್ತಿದವರು, ಎದುರಿಸುತ್ತಿರುವವರು ಎಂಬುದರಲ್ಲಿ ಅನುಮಾನವಿಲ್ಲ. ಕೋಮುವಾದವೂ ಒಂದು ಗಂಡಾಂತರಕಾರಿಯದ್ದೆ. ಅದನ್ನು ಸೋಲಿಸಿ ವಿದ್ಯಾಮಾನಗಳಿವೆ. 2004ರ ಸ್ಥಿತಿಯಲ್ಲಿಯೇ 2009ರಲ್ಲಿ ನಿಂತು ಯೋಚಿಸಲು ಆಗಲಾರದು.

2004ರ ಚುನಾವಣೆಗಳನ್ನು ಎದುರಿಸುವಾಗ ಅಂದು ಬಿಜೆಪಿ ನೇತೃತ್ವದ ಎನ್.ಡಿ.ಎ.ಯ ಆರು ವರ್ಷಗಳ ಭೀಕರ ಆಡಳಿತದ, ಅನುಭವವಿತ್ತು. ಅದರ ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿಗಳು ಭಾರತದ ಪ್ರಜಾಸತ್ತಾತ್ಮಕ, ಧರ್ಮ ನಿರಪೇಕ್ಷಿತ, ಬಹುಸಂಸ್ಕೃತಿಯ ವೈವಿಧ್ಯತೆಯ ಅಡಿಪಾಯಕ್ಕೆ ಭಾರಿ ಏಟು ಕೊಡುತ್ತಿತ್ತು. ಹೀಗಾಗಿ ಒಟ್ಟಾರೆ ಶತಾಯುಗತಾಯು ಏನೆಲ್ಲಾ ಪ್ರಯತ್ನದಿಂದ ಕೇಂದ್ರದಲ್ಲಿ ಅಧಿಕಾರ ಹಿಡಿದಿದ್ದ ಬಿಜೆಪಿಯನ್ನು ಅಲ್ಲಿಂದ ಸೋಲಿಸಿ ಜಾತ್ಯಾತೀತ ಸರ್ಕಾರವನ್ನು ಸ್ಥಾಪಿಸಬೇಕಿತ್ತು. ಎಡಪಕ್ಷಗಳು ಇದನ್ನು ಸರಿಯಾಗಿ ಗ್ರಹಿಸಿದವು ಮತ್ತು ಆ ದಿಕ್ಕಿನಲ್ಲಿ ಹೋರಾಟವನ್ನು ತೀವ್ರಗೊಳಿಸಿದವು. ಮತ್ತು ಸೂಕ್ತವಾದ ಚುನಾವಣಾ ತಂತ್ರವನ್ನು

ಪುಟ 4 ನೋಡಿ

ಬಿಜೆಪಿ V/S ಕಾಂಗ್ರೆಸ್ ಎಂಬ ವಾದ

ಪುಟ 3 ರಿಂದ

ಅನುಸರಿಸಿದವು.

ಅಂದು ದೇಶದ ಜನತೆಯ 'ಹಿತಾನುಭವ'ವು ವಾಜಪೇಯಿ-ಬಿಜೆಪಿಗಿಂತ ಭಿನ್ನವಾಗಿತ್ತು. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆಯೇ ರಾಜಕೀಯ ಧೃವೀಕರಣ ಆಗಬೇಕೆಂಬುದನ್ನು ತಿರಸ್ಕರಿಸಲ್ಪಟ್ಟಿತು. ಹೀಗಾಗಿ ಜನತೆಯು ಬಿಜೆಪಿ ಹಾಗೂ ಮಿತ್ರಪಕ್ಷಗಳನ್ನು ಸೋಲಿಸಿದರು. ಕಾಂಗ್ರೆಸ್ ಸ್ವಲ್ಪ ಹೆಚ್ಚಿನ ಸ್ಥಾನ ಪಡೆಯಿತಾದರೂ ಒಂದೇ ಪಕ್ಷವೇ ಅಧಿಕಾರ ರಚಿಸಲು ಅಸಾಧ್ಯವಾಗಿತ್ತು. ಹೀಗಾಗಿ ಎಡಪಕ್ಷಗಳು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಬಾಹ್ಯ ಬೆಂಬಲ ನೀಡಿದ್ದವು. ಉದಾರೀಕರಣದ ಆರ್ಥಿಕ ನೀತಿಗಳು, ಮತ್ತು ಕೋಮುವಾದದ ವಿರುದ್ಧ ಅಂಶಗಳು ಹೊಸ ಸ್ಕರ್ಕಾರದ ಮುಂದಿದ್ದವರು. ವಿಶೇಷವಾಗಿ ಭಾರತದ ಸಾರ್ವಭೌಮತೆ, ಸ್ವಾವಲಂಬನೆ, ಸ್ವಾತಂತ್ರ್ಯವನ್ನು ಸಂರಕ್ಷಿಸುವ ವಿದೇಶಾಂಗ ನೀತಿಯು ಸಹ ಪ್ರಮುಖವಾಗಿದ್ದು ವಿಶೇಷವಾಗಿದೆ.

ಆದರೆ ಕಾಂಗ್ರೆಸ್ ಒಂದು ಮೈತ್ರಿ ಕೂಟದ ಸರ್ಕಾರವನ್ನು ನಡೆಸುವಾಗ, ಒಪ್ಪಿದ ನೀತಿಗಳಿಗೆ ಬದ್ಧವಾಗದೇ ತನ್ನ ವರ್ಗ ನೀತಿಗಳನ್ನೇ ಜಾರಿಗೊಳಿಸಲು ಯತ್ನಿಸಿದ್ದು, ಕಣ್ಣೆದುರೇ ಇದೆ ಮಾತ್ರವಲ್ಲ. ಕೋಮುವಾದೀ ಶಕ್ತಿಗಳ ದುರಾಡಳಿತದಲ್ಲಿ ಬದ್ಧತೆ ಆಡಳಿತ, ಇನ್ನೊಂದೆಡೆಯಲ್ಲಿ ಇಡೀ ಸಮಾಜಕ್ಕೆ ಬೆರೆಸಿಬಿಟ್ಟಿದ್ದ ಕೋಮುದ್ವೇಷದ ಫ್ಯಾಶಿಸ್ಟ್ ವಿಷವನ್ನು ತೆಗೆದುಹಾಕಲು ದೊರೆತ ಅವಕಾಶವನ್ನು ಬಳಸಿಕೊಳ್ಳಲೇ ಇಲ್ಲ. ಈ ಅವಧಿಯಲ್ಲಿ ಎದ್ದು ಬಂದ ಹಾಗೂ ಆದ್ಯತೆ ನೀಡಬೇಕಾದ ಪ್ರಮುಖ ವಿಷಯಗಳ ಬಗ್ಗೆ ಸುಮಾರು 52ಕ್ಕೂ ಹೆಚ್ಚಿನ ಬಾರಿ ಜಾರಿಗೊಳಿಸಬಹುದಾದ ನಿರ್ದಿಷ್ಟ ಪರ್ಯಾಯ ನೀತಿಗಳನ್ನು ಎಡಪಕ್ಷಗಳು ನೀಡುತ್ತಲೇ ಬಂದರೂ ಅದನ್ನು ಕಾಂಗ್ರೆಸ್ ಪರಿಗಣಿಸಲೇ ಇಲ್ಲ. ಅಂತಿಮವಾಗಿ ಪರಮಾಣು ಒಪ್ಪಂದದ ವಿಷಯದಲ್ಲಿ ಕಾಂಗ್ರೆಸ್‌ನ ನಿರ್ಲಜ್ಜತನ, ಹಾಗೂ ಭಾರತವನ್ನು ಅಮೇರಿಕಾದ ಅಡಿಯಾಳಾಗಿಸುವುದನ್ನು ಪ್ರತಿಭಟಿಸಿ ಸೈದ್ಧಾಂತಿಕ ನಿಲುವಿನ ಆಧಾರದಲ್ಲಿ ಎಡಪಕ್ಷಗಳ ಬೆಂಬಲ ಹಿಂತೆಗೆದುಕೊಂಡಿದ್ದು ಇತಿಹಾಸ. ಈ ಹಿನ್ನೆಲೆಯಲ್ಲಿಯೇ ಒಂದು ಪರ್ಯಾಯ ಜಾತ್ಯಾತೀತ ಸಕಾರದ ರಚನೆಗೆ ಎಡಪಕ್ಷಗಳೂ ಸೇರಿ ಮೂರನೇ ಪರ್ಯಾಯದ ಪ್ರಯತ್ನಗಳು ನಡೆದಿರುವುದು ಅನಿವಾರ್ಯ. ಆದ್ದರಿಂದಲೇ ಬಿಜೆಪಿ-ಕಾಂಗ್ರೆಸ್ ಪಕ್ಷಗಳ ನಡುವಿನ ಧೃವೀಕರಣದ ಮಾನಸಿಕ ಸ್ಥಿತಿಯಿಂದ ಹೊರಬರುವುದು ಅತ್ಯಗತ್ಯ.

ಇಂದೂ ಕೋಮುವಾದಿಗಳ ಅಪಾಯ, ಬೆದರಿಕೆ ಇದ್ದೇ ಇದೆ. ಆದರೆ ಅದನ್ನು ಕಾಂಗ್ರೆಸ್ ಎದುರಿಸಲು ಸಾಧ್ಯವಿಲ್ಲ, ಮತ್ತು ಕಾಂಗ್ರೆಸ್ ವೈಫಲ್ಯಗಳಿಂದಲೇ ಬಿಜೆಪಿ ಬೆಳೆಯುತ್ತಿದೆ ಎಂಬುದು ಗಮನಿಸಬೇಕು. ಬಾಬ್ರಿ ಮಸೀದಿ ಧ್ವಂಸ ಯೋಜನೆ ಹಂತ ಹಂತವಾಗಿ ಜಾರಿಗೊಳ್ಳಲು ಸಹಕರಿಸಿದವರು ಯಾರು ಎಂಬುದು ದೇಶಕ್ಕೆ ಗೊತ್ತು. ಇನ್ನೂ ಗುಜರಾತ್‌ನ ನರಮೇಧದ ಸಂದರ್ಭದಲ್ಲಿ, ಮತ್ತು ಪೂರ್ವದಲ್ಲಿಯೂ ಕಾಂಗ್ರೆಸ್ ಪಕ್ಷಕ್ಕೆ ಬಲವಿದ್ದರೂ ಎದುರಿಸದೇ, ತನ್ನನ್ನು ಖಾವೀಕರಣ ಮಾಡಿಕೊಂಡಿದ್ದು ಇತ್ತೀಚಿನ ಅನುಭವ. ಇನ್ನು ಮಂಗಳೂರಿನಲ್ಲಿ ಕರಾವಳಿಯಲ್ಲಿ ಸಂಘ ಪರಿವಾರದ ಅಟ್ಟಹಾಸವನ್ನು ಎದುರಿಸಿದ ಒಂದು ಉದಾಹರಣೆ ಕಾಂಗ್ರೆಸ್ ನಾಯಕರ್‍ಯಾರಾದರೂ ಹೇಳಬೇಕು. ಬದಲಾಗಿ 'ಹಿಂದೂ' ಹಿಂದುತ್ವವಾಗಿ ಬಹುತೇಕ ಕಾಂಗ್ರಸ್ಸಿಗರು ಪರಿವರ್ತನೆಯಾಗಿರುವುದರ ಅರಿವಾದರೂ ಕಾಂಗ್ರೆಸ್ ನಾಯಕರಿಗಿದೆಯೇ? ತಾನು ಏನೊಂದೂ ಮಾಡದೇ ಬಿಜೆಪಿ ಬಗೆಗಿನ ಅತೃಪ್ತಿ ಬಳಸಿಕೊಂಡರೆ ಸಾಕು ಎಂಬ ಕಾಂಗ್ರೆಸ್‌ನ 'ಸುಖ ಸಿದ್ಧಾಂತ' ಇತ್ತೀಚಿನ ದಿನಗಳಲ್ಲಿ ನಿಚ್ಚ... ಕಾಣುತ್ತಿಲ್ಲವೇ?

ಇನ್ನೂ ಒಂದು ಅಂಶವೆಂದರೆ; ಬಿಜೆಪಿ ಸಹ ಬಲಯುತವಾಗಿರುವುದು ... ರಾಜ್ಯಗಳಲ್ಲಿ. ಅದರಲ್ಲಿ ಕರ್ನಾಟಕವೂ ... ಉಳಿದೆಡೆ ಅದರ ಮಿತ್ರರೂ ಜೆ... ಉಳಿಯಲಿಲ್ಲ. ಇತ್ತೀಚಿನ ಕೆಲವು ಚುನಾವಣೆಗಳಲ್ಲಿ ಅದರ ನಿಜ ಹ... ಬಯಲಾಗಿದೆ. ಕಾಂಗ್ರೆಸ್‌ನ ವಿರುದ್ಧ ಅತೃಪ್ತಿಯೂ ಪ್ರಕಟಗೊಂಡಿದೆ. ಮೂರನೇಯ ಪರ್ಯಾಯದತ್ತ ಗಣನೀಯವಾಗಿ ಮತ ನೀಡಿದ್ದಾರೆ. ಇಂದಿನ ಭಾರತದಲ್ಲಿ ನಡೆಯುತ್ತಿ... ಬದಲಾವಣೆಯ ವಸ್ತು ಸ್ಥಿತಿ.

ಆದ್ದರಿಂದ ಭಾರತದಂತಹ ದೇಶದಲ್ಲಿ ... ಪ್ರಗತಿಪರ ಶಕ್ತಿಗಳು ಹೊಸ ಬದಲಾ... ಪ್ರಯೋಗಗಳು ಬರಬೇಕು, ಬಲಗೊಳ್ಳಬ... ಮೂರನೇಯ ಪರ್ಯಾಯಕ್ಕೆ ಜನರ ಸ್ಪ... ಅಪೂರ್ವವಿದೆ. ಕೆಲವು ಪ್ರಾದೇಶಿಕ ಪಕ್ಷ... ಚಂಚಲತೆ ಇದ್ದರೂ ಅವು ಇಂದು ವ... ಪರಿಣಾಮಕಾರಿ ಪಾತ್ರ ಎಲ್ಲವ... ಗಟ್ಟಿಗೊಳಿಸುತ್ತವೆ. ಕೋಮುವಾದ ವಿರುದ್ಧ... ಹೋರಾಟ ಯಶಸ್ವಿಯಾಗಬೇಕಾ... ಪರ್ಯಾಯ ಶಕ್ತಿಗಳಿಗೆ ಬೆಂಬ... ಬಲಗೊಳಿಸುವುದು ಅತ್ಯಗತ್ಯ. ಆ ದಿಸೆ... ಚಿಂತನ-ಮಂಥನ ಬೆಳಯಬೇಕಿದೆ.

ಅಪರಾಧಿಗಳಿಂದಲೇ ಆರೋಪ ಪಟ್ಟಿ!

ಎಸೆಯುವಿರಿ ಯಾಕೆ ಚಪ್ಪಲಿ, ಬೂಟು ? ಹಾಕಿದರೆ ಸಾಲದೇ ಅವರ ವಿರುದ್ಧ ಓಟು !

"ತಾಯಿ ಮಾತು ಗೌರವಿಸಿ ಸ್ಪರ್ಧೆಯಿಂದ ಹಿಂದಕ್ಕೆ" - ಅಶೋಕ್ ಖೇಣಿ.

- 'ಅಯೋಗ್ಯ ಮಕ್ಕಳಿಗೆಲ್ಲ ಹೀಗೆ ಬುದ್ಧಿ ಹೇಳುವ ತಾಯಂದಿರು ಹೆಚ್ಚಬಾರದೇ'?

★★★

"ಹಣದುಬ್ಬರ ಪಾತಾಳಕ್ಕೆ ಆದರೆ ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ".

-ನೌಕರರು ಕೆಲಸ ಕಳೆದುಕೊಳ್ಳುತ್ತಿದ್ದರೂ ಉನ್ನತ ಅಧಿಕಾರಿಗಳ ಸಂಭಾವನೆಗೆ ಮಿತಿಯಿಲ್ಲ!

★★★

ಬಂಡವಾಳಿಗರ ಕೋಟಿಗಳು ಹೆಚ್ಚುತ್ತಲೇ ಇದೆ.

-'ಕಾಂಗ್ರೇಸ್, ಬಿಜೆಪಿ ಗಳ ಆರ್ಥಿಕ (ಅ)ನೀತಿಗಳು ಸಾಧಿಸಿರುವ ಪ್ರಗತಿ!'

★★★

'ನ್ಯಾನೋ ಬುಕ್ಕಿಂಗ್‌ಗೆ ಮುಗಿಬಿದ್ದ ಗ್ರಾಹಕರು.

-'ಗ್ರಾಹಕುರಿಗಳೇ ತಾಳಿ! ಮೊಬೈಲು, ಲ್ಯಾಪ್ ಟಾಪು ಕೊಡ್ತೀವಿ ಅಂತ ಬುರುಡೆ ಬಿಡೋ ಪಕ್ಷಗಳು ಪುಗಸಟ್ಟೆ ನ್ಯಾನೋ ಕಾರನ್ನೂ ಕೊಡ್ತೀವಿ ಅಂತ ಪ್ರಣಾಳಿಕೆ ಬಿಡಬಹುದು'.

★★★

'ಅದ್ವಾನಿ ಆರೆಸ್ಸೆಸ್ ಗುಲಾಮ' - ಸೋನಿಯಾ,

-'............ನ ಗುಲಾಮನಾಗಿರುವ ತನಕ ಮಾತ್ರ ದೊರೆಯುವುದಯ್ಯ ಪದವಿ'.

ಕ್ಯಾತೆ

ಶ್ರೀ

★★★

"ಬಿಜೆಪಿ ಅಧಿಕಾರಕ್ಕೆ ಬಂದರೆ ನೂರು ದಿನದಲ್ಲಿ ಸ್ವಿಸ್ ಬ್ಯಾಂಕಿನ ಕಪ್ಪು ಹಣ ಭಾರತಕ್ಕೆ" - ಅದ್ವಾನಿ.

-'ಅಷ್ಟರ ಒಳಗೆ ಎಲ್ಲಾ ತೆಗೆದುಕೊಂಡು ಬಿಡಿ ಅಂತ ಕಪ್ಪು ಹಣದ ಖದೀಮರಿಗೆ ಕೊಡುತ್ತಿರೋ ಸೂಚನೆ ಏನ್ರೀ'?

-ಸದ್ಯ ನಾವು ಅಲ್ಲಿ ಇಟ್ಟಿಲ್ಲ. ಇಲ್ಲೇ 'ಮಣ್ಣ'ನಲ್ಲಿ ಮುಚ್ಚಿಟ್ಟಿದ್ದೀವಿ ಅಂತ ನಿಮ್ಮ ಕರ್ನಾಟಕದ ಶಿಷ್ಯರು ಸಮಾಧಾನ ಪಡ್ತಿದಾರಂತೆ.

★★★

'ಕೇಂದ್ರ ಸಕಾರದ ವಿರುದ್ಧ ಬಿಜೇಪಿ ಆರೋಪ ಪಟ್ಟಿ'.

-ಇದಪ್ಪ ಕರ್ನಾಟಕದ ಮಾದರಿ! ಅಪರಾಧಿಗಳೇ ಆರೋಪ ಪಟ್ಟಿ ಸಲ್ಲಿಸುವುದು!

- ಕಳ್ಳರನ್ನು ಖದೀಮರನ್ನು ಹಿಡಿದುಕೊಟ್ಟವರ ವಿರುದ್ಧವೇ ಕೇಸು ಹಾಕುವುದು!

★★★

'ದಾರಿತಪ್ಪಿ ಕಾಂಗ್ರೇಸ್ ಸಭೆಗೆ ಗೃಹ ಸಚಿವ.

-ಯಾವುದೋ ಕಾಯಿಲೆಗೆ ಯಾವುದೋ ಔಷಧಿ ಕೊಟ್ಟುಕೊಂಡಿದ್ದೋರು. ಏನೋ ಆಗಬೇಕಾಗಿದ್ದೋರು ತಪ್ಪಿ ಗೃಹ ಸಚಿವರಾಗಿ ಬಿಟ್ಟಿದ್ದಾರಲ್ಲ ಹಾಗೇ.

-'ಈ ಗ್ರಹ ಸಚಿವರು ತಾವು ದಾರಿ ತಪ್ಪುವುದು ಮಾತ್ರವಲ್ಲ. ಬೇರೆಯವರನ್ನು ದಾರಿ ತಪ್ಪಿಸುವುದರಲ್ಲೂ ನಿಸ್ಸೀಮರು. ನೆನೆಸಿಕೊಳ್ಳಿ ಪದ್ಮಪ್ರಿಯ ಪ್ರಕರಣ.

★★★

'ಕಾಂಗ್ರೇಸ್ ಬಿಜೇಪಿ ಒಳ ಒಪ್ಪಂದ'- ಮುಖ್ಯಮಂತ್ರಿ ಆರೋಪ.

-'ನಿಮಗ್ಯಾಕ್ರೀ ಒಳಗೊಳಗೇ ಭಯ'?

★★★

'ಚುನಾವಣೆ ರಾಜ್ಯ ಸರ್ಕಾರದ ಬಗ್ಗೆ ಜನಾಭಿಪ್ರಾಯವಲ್ಲ'- ಮುಖ್ಯಮಂತ್ರಿ.

'ಚುನಾವಣೆ ಸಚಿವರ ಪಾಲಿಗೆ ಅ... ಪರೀಕ್ಷೆ. ಸಚಿವರ 'ಸಾಧನೆ' ಅಳತೆ... ಫಲಿತಾಂಶವೇ ಮಾನದಂಡ' -ಮುಖ್ಯಮಂತ್ರಿ...

-'ಬಿಜೇಪಿ ತತ್ವವೇ ಹಾಗೆ. ತಮಗೆ ಒಂದು ನೀತಿ. ಇತರರಿಗೇ ಒಂದು ನೀತಿ. ಯಾರ ಮಾನ 'ದಂಡ' ಆಗಲಿದೆ ಕಾದು ನೋಡೋಣ.

★★★

ಮತದಾರ: ಯಾಕ್ರೀ ನೀವು ಪಕ್ಷಾಂತರ ಮಾಡಿದ್ರೀ?

ಪುಡಾರಿ: ಇಲ್ಲ ನಾನು ಪಕ್ಷಾಂತರ ಎಲ್ಲಿ ಮಾಡಿದೆ?

ಮತದಾರ: ಅಲ್ರೀ, ಮೊನ್ನೆ ಆ ಪಕ್ಷದಲ್ಲಿ ಇದ್ರೀ, ಇವತ್ತು ಈ ಪಕ್ಷದಲ್ಲಿ ಇದೀರ. ಇದು ಪಕ್ಷಾಂತರ ಅಲ್ವೇನ್ರೀ?

ಪುಡಾರಿ: ಪಕ್ಷಾಂತರ ಮಾಡಿರೋದು ನಾನಲ್ಲ. ಮತದಾರರು! ಆವಾಗ ಆ ಪಕ್ಷಕ್ಕೆ ಮತ ಹಾಕಿದ್ರು ಆ ಪಕ್ಷದಲ್ಲಿ ಇದ್ದೆ. ಇವಾಗ ಈ ಪಕ್ಷಕ್ಕೆ ಓಟು ಹಾಕಿದಾರೆ ಇಲ್ಲಿ ಇದೀನಿ. ಒಟ್ಟಿನಲ್ಲಿ ಮತದಾರರು ಯಾವ ಪಕ್ಷಕ್ಕೆ ಓಟು ಹಾಕುತ್ತಾರೋ ಅದೇ ಪಕ್ಷದಲ್ಲಿ ಇರ್ತೀನಿ.

★★★

ಕತ್ತು, ಕೈ, ಕಾಲು ಕತ್ತರಿಸುವ ಶೂರರೂ,
ಅಪರಾಧ ಹಿನ್ನೆಲೆಯ ಕ್ರೂರರೂ,
ಕೋಟ್ಯಾನು ಕೋಟಿ ಶ್ರೀಮಂತರೂ,
ಅಧಿಕಾರ ಲಾಲಸೆಯ ಗುಲಾಮರೂ,
ಜನರ ಮನೆ ಬಾಗಿಲಿಗೆ ಬಂದಿಹರು.
ಬುದ್ಧಿ ಕಲಿಸಬೇಕಾಗಿದೆ ಮತದಾರರು.

ಜನರ ವಿಶ್ವಾಸ ಕಳೆದುಕೊಂಡ ಜನವಿರೋಧಿ ನೀತಿಗಳಿಗೇ ಅಂಟಿಕೊಳ್ಳುವ ಕಾಂಗ್ರೆಸ್ ಬಿಜೆಪಿಗಳಿಗೆ ಪರ್ಯಾಯವಾಗಿ ತೃತೀಯ ಶಕ್ತಿಯನ್ನು ಬಲಪಡಿಸುವುದು ಇಂದಿನ ಐತಿಹಾಸಿಕ ಅಗತ್ಯವಾಗಿದೆ. ಜೆಡಿ(ಎಸ್) ಈ ಗುರಿಗೆ ಬದ್ಧವಾಗಿ ಉಳಿಯುವುದು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ.

ಜೆಡಿ(ಎಸ್) ವಿಶ್ವಾಸಾರ್ಹವೇ?

ನಿತ್ಯಾನಂದಸ್ವಾಮಿ

ಕರ್ನಾಟಕದಲ್ಲಿ ಲೋಕಸಭಾ ಚುನಾವಣೆಯ ಮೊದಲ ಸುತ್ತಿನ ಮತದಾನ ಸಮೀಪಿಸುತ್ತಿದ್ದಂತೆ ತೃತೀಯ ಪಕ್ಷಗಳ ನಡುವೆ ಪರಸ್ಪರ ಕೆಸರೆರಚುವ ಕೆಲಸ ಬಿರುಸುಗೊಂಡಿದೆ. ಇದೇ ಸಂದರ್ಭದಲ್ಲಿ ಎಡಪಕ್ಷಗಳೊಂದಿಗೆ ಚುನಾವಣಾ ಹೊಂದಾಣಿಕೆ ಮಾಡಿಕೊಂಡು ಕಾಂಗ್ರೆಸ್ ಮತ್ತು ಬಿಜೆಪಿ ವಿರುದ್ಧ ಸಮರ ಸಾರಿರುವ ಜಾತ್ಯಾತೀತ ಜನತಾದಳ ಪಕ್ಷದ ಬಗ್ಗೆ ಅನುಮಾನಗಳು ವ್ಯಕ್ತವಾಗತೊಡಗಿವೆ. ರಾಜ್ಯದ ಕೆಲವು ಲೋಕಸಭಾ ಕ್ಷೇತ್ರಗಳಲ್ಲಿ ಅದು ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸದೇ ಇರುವುದು, ಇನ್ನೂ ಕೆಲವು ಕ್ಷೇತ್ರಗಳಲ್ಲಿ ಅದರ ಅಭ್ಯರ್ಥಿಗಳು ತಮ್ಮ ನಾಮಪತ್ರ ಹಿಂತೆಗೆದುಕೊಂಡಿರುವುದು ಅಥವಾ ಸ್ಪರ್ಧೆಯಿಂದ ನಿವೃತ್ತಿ ಘೋಷಿಸಿರುವುದು ಈ ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಭಾರತೀಯ ಜನತಾ ಪಾರ್ಟಿಯಂತೂ ಆರಂಭದಿಂದಲೂ ಕಾಂಗ್ರೆಸ್ ಜೊತೆ ಜೆಡಿಎಸ್ ಒಳ ಒಪ್ಪಂದ ಮಾಡಿಕೊಂಡಿದೆ ಎಂದು ಆರೋಪಿಸುತ್ತಾ ಬಂದಿತ್ತು. ಇತ್ತೀಚೆಗಂತೂ ದೇವೇಗೌಡರು ಯುಪಿಎ ಜೊತೆಗಿದ್ದಾರೋ ಅಥವಾ ತೃತೀಯ ರಂಗದಲ್ಲಿದ್ದಾರೋ ಎಂಬುದನ್ನು ಜನತೆಗೆ ಸ್ಪಷ್ಟಪಡಿಸಬೇಕು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಸವಾಲು ಹಾಕಿದ್ದಾರೆ. ಶಿವಮೊಗ್ಗ, ಬಳ್ಳಾರಿ ಮತ್ತು ಚಿಕ್ಕೋಡಿ ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ನಿಲ್ಲಿಸಿಲ್ಲ. ಧಾರವಾಡ, ಬಾಗಲಕೋಟೆ ಮತ್ತು ದಾವಣಗೆರೆ ಕ್ಷೇತ್ರಗಳಿಂದ ಸ್ಪರ್ಧಿಸಿದ್ದ ಜೆಡಿಎಸ್ ಅಭ್ಯರ್ಥಿಗಳು ಕಣದಿಂದ ಹಿಂದಕ್ಕೆ ಸರಿದಿದ್ದಾರೆ.

ಜೆಡಿ(ಎಸ್) ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡರು ಈ ಆರೋಪಗಳಿಗೆ ತಕ್ಷಣದಲ್ಲೇ ಉತ್ತರ ನೀಡಿದ್ದಾರೆ. 'ರಾಜ್ಯದ ಎಲ್ಲ ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ನಿಲ್ಲಿಸಲು ತಮ್ಮ ಬಳಿ ಗಣಿ ಹಣ ಇಲ್ಲ. ಯಾವ ಕ್ಷೇತ್ರಗಳಲ್ಲಿ ಅಗತ್ಯ ಹಣ ಇದೆಯೋ ಅಲ್ಲಿಗೆ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೇವೆ' ಎಂದು ಅವರು ಹೇಳಿದ್ದಾರೆ. ಶಿವಮೊಗ್ಗ, ಬಳ್ಳಾರಿಯಂತಹ ಕ್ಷೇತ್ರಗಳಲ್ಲಿ ಈ ಭಾರಿ ಬಿಜೆಪಿ ಹಣದ ಹೊಳೆಯನ್ನೇ ಹರಿಸಲಿದೆ. ಇಂತಹ 3 ಕ್ಷೇತ್ರಗಳಲ್ಲಿ ಸ್ಪರ್ಧೆಗಿಳಿದು ಹಣವನ್ನು ಹಾಳು ಮಾಡಿಕೊಳ್ಳುವ ಬದಲು ಜಾತ್ಯಾತೀತ ಶಕ್ತಿಗಳನ್ನು ಬೆಂಬಲಿಸಲು ನಿರ್ಧರಿಸಲಾಗಿದೆ ಎಂಬುದು ದೇವೇಗೌಡರ ವಿವರಣೆ.

ತಮ್ಮ ಪಕ್ಷದ ಕೆಲವು ಅಭ್ಯರ್ಥಿಗಳು ಕಣದಿಂದ ಹಿಂದೆ ಸರಿದಿರುವ ಬಗ್ಗೆ ದೇವೇಗೌಡರು ಬೆಂಗಳೂರಿನಲ್ಲಿ ಪತ್ರಿಕಾ ಗೋಷ್ಠಿ ನಡೆಸಿ ವಿವರಣೆ ನೀಡಿದ್ದಾರೆ. ದಾವಣಗೆರೆ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕಣದಿಂದ ನಿವೃತ್ತಿಯಾಗಲು ತಮ್ಮ ಪೂರ್ವಾನುಮತಿ ಪಡೆದಿಲ್ಲವೆಂದು ದೇವೇಗೌಡರು ಸ್ಪಷ್ಟಪಡಿಸಿದ್ದಾರಲ್ಲದೆ ಆ ತೀರ್ಮಾನ ಕೈಗೊಂಡ ಪಕ್ಷದ ಜಿಲ್ಲಾ ಘಟಕದ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಬಾಗಲಕೋಟೆ ಮತ್ತು ಧಾರವಾಡ ಲೋಕಸಭಾ ಕ್ಷೇತ್ರಗಳಲ್ಲಿಯೂ ತಮ್ಮ ಗಮನಕ್ಕೆ ಬಾರದೇ ಜೆಡಿಎಸ್ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ವಾಪಸ್ ಪಡೆದಿದ್ದಾರೆ. ಅವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

ಪಕ್ಷದ ತೀರ್ಮಾನಕ್ಕೆ ವಿರುದ್ಧವಾಗಿ ನಡೆದುಕೊಂಡ ಪಕ್ಷದ ಅಭ್ಯರ್ಥಿ ಅಥವಾ ಪಕ್ಷದ ಘಟಕಗಳ ವಿರುದ್ಧ ಕ್ರಮ ಜರುಗಿಸುವುದು ಜೆಡಿಎಸ್ ಪಕ್ಷಕ್ಕೆ ಸಂಬಂಧಪಟ್ಟ ವಿಷಯ. ಆದರೆ ಇಂತಹ ಬೆಳವಣಿಗೆಗಳು ಪಕ್ಷದ ವಿಶ್ವಾಸಾರ್ಹತೆಯ ಮೇಲೆ ಗಂಭೀರ ಪರಿಣಾಮ ಬೀರದೆ ಇರುವುದಿಲ್ಲ. ಈಗಾಗಲೇ ಆಗಿರುವ ಹಾನಿಯನ್ನು ಸರಿಪಡಿಸಲು ಜೆಡಿಎಸ್ ನಾಯಕತ್ವ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಇನ್ನುಳಿದ ಕ್ಷೇತ್ರಗಳಲ್ಲಿ ಮತ್ತೆ ಹೀಗಾಗದಂತೆ ನೋಡಿಕೊಳ್ಳಬೇಕು.

ಪರ್ಯಾಯ ಶಕ್ತಿ ಬಲಗೊಳ್ಳುವುದು ಅಗತ್ಯವಿದೆ

ದೇಶದ ರಾಜಕೀಯಕ್ಕೆ ಒಂದು ಜನಪರ ತಿರುವು ದೊರೆಯುವಂತಾಗಲು ಈ ಚುನಾವಣೆಯಲ್ಲಿ ಕಾಂಗ್ರೆಸನ್ನು ಮತ್ತು ಬಿಜೆಪಿಯನ್ನು ಒಟ್ಟಿಗೆ ಸೋಲಿಸುವುದು ಅತ್ಯಗತ್ಯವಾಗಿದೆ. ಏಕೆಂದರೆ ಈ ಎರಡೂ ಪಕ್ಷಗಳ ಧೋರಣೆಗಳು ಒಂದೇ ಆಗಿವೆ. ಧೋರಣೆಗಳೇ ಕಳೆದ ಎರಡು ದಶಕಗಳಿಂದ ದೇಶವನ್ನು ಅಧೋಗತಿಗೆ ತಳ್ಳುತ್ತಿವೆ. ರೈತರ ಆತ್ಮಹತ್ಯೆಗಳಿಗೆ ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿ ಪಾಲಾಗುತ್ತಿರುವುದಕ್ಕೆ ಕಾರ್ಮಿಕರು ಹೋರಾಟ ಮಾಡಿ ಸಂಪಾದಿಸಿದ ಕಾನೂನುಬದ್ಧ ಹಕ್ಕುಗಳನ್ನು ಕಳೆದುಕೊಳ್ಳುತಿರುವುದಕ್ಕೆ, ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿರುವುದಕ್ಕೆ, ನಮ್ಮ ದೇಶದ ಸ್ವತಂತ್ರ ವಿದೇಶಾಂಗ ನೀತಿಯನ್ನು ಸಾಮ್ರಾಜ್ಯಶಾಹಿ ಅಮೇರಿಕದ ಬಾಲಂಗೋಚಿಯಾಗಿ ಪರಿವರ್ತಿಸುವುದಕ್ಕೆ ನಮ್ಮ ಸಾರ್ವಜನಿಕ ವಲಯವನ್ನು ಬಹುರಾಷ್ಟ್ರೀಯ ಕಂಪನಿಗಳು ಸ್ವಾಹ ಮಾಡಲು ಬಿಟ್ಟುಕೊಡುವುದಕ್ಕೆ ಕಾರಣವಾಗುತ್ತಿರುವ ಉದಾರೀಕರಣದ ನೀತಿಗಳಿಗೆ ಅಂಟಿಕೊಂಡಿರುವ ಈ ಎರಡೂ ಪಕಗಳು ಒಂದೇ ನಾಣ್ಯದ ಎರಡು ಮುಖಗಳಂತೆ. ಆದ್ದರಿಂದಲೇ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಆಯ್ಕೆ ಇಲ್ಲ. ಮೂರನೇ ಪರ್ಯಾಯ ಅನಿವಾರ್ಯವಾಗಿದೆ. ಈ ಎರಡೂ ಬಂಡವಾಳಶಾಹಿ ಪಕ್ಷಗಳ ಧೋರಣೆಗಳಿಗೆ ಪರ್ಯಾಯವಾದ ಧೋರಣೆಗಳನ್ನು ಎಡಪಕ್ಷಗಳು ಪ್ರತಿಪಾದಿಸುತ್ತಾ ಬಂದಿವೆ. ಕೇಂದ್ರದಲ್ಲಿ ಉದಾರೀಕರಣ ನೀತಿಗಳ ಪರವಾದ ಒಂದು ಸರ್ಕಾರ ಇದ್ದಾಗಲೂ ಉದಾರೀಕರಣ ನೀತಿಗಳಿಗೆ ವಿರುದ್ಧವಾದ ಜನಪರ ನೀತಿಗಳನ್ನು ಸೀಮಿತ ವ್ಯಾಪ್ತಿಯೊಳಗೆ ಜಾರಿಗೆ ತರಲು ಎಡಪಕ್ಷಗಳ ಎಡರಂಗ ಸರ್ಕಾರಗಳು ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯದಲ್ಲಿ ಯಶಸ್ವಿಯಾಗಿವೆ. ಇಂತಹ ಪರ್ಯಾಯ ನೀತಗಳನ್ನು ಹೊಂದಿರುವ ಸರ್ಕಾರವೊಂದನ್ನು ಕೇಂದ್ರದಲ್ಲಿ ಅಸ್ತಿತ್ವಕ್ಕೆ ತರಲು ಎಡಪಕ್ಷಗಳು ಶ್ರಮಿಸುತ್ತಿವೆ. ಇದು ಸಾಧ್ಯವಾಗಬೇಕಾದರೆ ಕಾಂಗ್ರೆಸ್ಸೇತರ ಮತ್ತು ಬಿಜೆಪಿಯೇತರ ಪಕ್ಷಗಳು ಎಡಪಕ್ಷಗಳೊಂದಿಗೆ ಕೈ ಜೋಡಿಸಬೇಕಾಗಿದೆ.



ಈಗಾಗಲೇ 4 ಎಡಪಕ್ಷಗಳಲ್ಲದೆ 6 ಪ್ರಾದೇಶಿಕ ಪಕ್ಷಗಳು ಒಟ್ಟಾಗಿ ತೃತೀಯ ರಂಗವನ್ನು ರಚಿಸಿಕೊಂಡಿವೆ. ಚುನಾವಣೆಯ ನಂತರ ಇನ್ನೂ ಹಲವು ಪಕ್ಷಗಳು ತೃತೀಯ ರಂಗವನ್ನು ಸೇರುವ ಅಪೇಕ್ಷೆಯನ್ನು ವ್ಯಕ್ತಪಡಿಸಿವೆ. ಆಗ ತೃತೀಯ ರಂಗವೇ ಪ್ರಥಮ ಆಗುವುದರಲ್ಲಿ ಸಂದೇಹವಿಲ್ಲ. ಇದು ಸಾಧ್ಯವಾಗಬೇಕಾದರೆ ಕರ್ನಾಟಕದಲ್ಲಿ ಜೆಡಿಎಸ್ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲುವುದು ಅಗತ್ಯವಾಗಿದೆ.

ಜಾತ್ಯಾತೀತತೆಗೆ ಜೆಡಿಎಸ್ ಎಷ್ಟು ಬದ್ಧ?

ಮೊನ್ನೆ ಮೊನ್ನೆ ಕರ್ನಾಟಕದಲ್ಲಿ ಅಧಿಕಾರಕ್ಕಾಗಿ ಬಿಜೆಪಿಯೊಂದಿಗೆ ಕೈಜೋಡಿಸಿದ್ದ ಜೆಡಿಎಸ್ ಜಾತ್ಯಾತೀತತೆಗೆ ಎಷ್ಟರಮಟ್ಟಿಗೆ ಬದ್ಧವಾಗಿರುತ್ತದೆ ಎಂಬ ಸಂದೇಹವನ್ನು ವ್ಯಕ್ತಪಡಿಸುವವರಿದ್ದಾರೆ. ಕಮ್ಯೂನಿಸ್ಟ್ ಪಕ್ಷಗಳು ಜೆಡಿಎಸ್ ಜೊತೆ ಕೈಜೋಡಿಸಿದ್ದು ಎಷ್ಟರಮಟ್ಟಿಗೆ ಸರಿ ಎಂದು ಪ್ರಶ್ನಿಸುವವರಿದ್ದಾರೆ.

ಜಾತ್ಯಾತೀತತೆ ಎಂಬುದು ಒಂದು ಉತ್ಕೃಷ್ಟವಾದ ಮೌಲ್ಯ. ಒಂದು ಪಕ್ಷಕ್ಕೆ ಆ ಹೆಸರು ಇಟ್ಟುಕೊಂಡಾಕ್ಷಣ ಅದರ ಕಾರ್ಯಕರ್ತರಲ್ಲಿ ಅದು ಮೈಗೂಡುವುದಿಲ್ಲ. ಸಮಾಜವಾದದ ಗಂಧವೇ ಇಲ್ಲದ ರಾಜಕೀಯ ಪಕ್ಷವೊಂದು ತನ್ನನ್ನು ಸಮಾಜವಾದಿ ಎಂದು ಕರೆದುಕೊಂಡಂತೆ. ಜೆಡಿಎಸ್‌ನ ಮುಖಂಡರಿಂದ ಹಿಡಿದು ಸಾಮಾನ್ಯ ಕಾರ್ಯಕರ್ತರವರೆಗೆ ಈ ಜಾತ್ಯಾತೀತತೆ ಎಂಬ ಮೌಲ್ಯದ ಮಹತ್ವವನ್ನು ಅರ್ಥ ಮಾಡಿಕೊಂಡು ಅದಕ್ಕೆ ಬದ್ಧರಾಗದೇ ಜೆಡಿಎಸ್ ಬಲಿಷ್ಠ ಆಗುವುದಿಲ್ಲ. ಬೇರೆ ಪಕ್ಷಗಳ ಆಸೆ ಆಮಿಷಗಳಿಗೆ ಬಲಿಯಾಗುವುದನ್ನು ತಪ್ಪಿಸಲು, ಅಧಿಕಾರಕ್ಕಾಗಿ ಸಿದ್ಧಾಂತದೊಂದಿಗೆ ರಾಜಿ ಮಾಡಿಕೊಳ್ಳುವುದನ್ನು ತಡೆಯಲು ಸಾಧ್ಯವಾಗಬೇಕಾದರೆ ಈ ಸೈದ್ಧಾಂತಿಕ ಬದ್ಧತೆ ಅವಶ್ಯವಾಗಿದೆ.

ಜೆಡಿಎಸ್‌ಗೆ ಈ ವಿಷಯದಲ್ಲಿ ಸ್ವಲ್ಪ ಸಮಯ ಬೇಕಾಗಬಹುದು. ಈಗ ಅದು ಬಿಜೆಪಿಯಿಂದ ದೂರ ಸರಿಯಲು ಸಾಧ್ಯವಾದದ್ದು ಕರ್ನಾಟಕದ ಮಟ್ಟಿಗೆ ಒಂದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಬಿಜೆಪಿಯೊಂದಿಗೆ ಸಾಗುವುದರ ಅಪಾಯ ಇಂದು ಒರಿಸ್ಸಾದ ಬಿಜೆಡಿಯ ನವೀನ್ ಪಟ್ನಾಯಕ್ ಅವರಿಗೆ ಅರ್ಥವಾದದ್ದು ಎಚ್.ಡಿ.ಕುಮಾರಸ್ವಾಮಿಯವರಿಗೆ ಸ್ವಲ್ಪ ಮೊದಲೇ ಅರ್ಥವಾಗಿದೆ. ಈಗಿನ ನಿಲುಮೆಗೆ ಅವರು ಬದ್ಧರಾಗಿ ಉಳಿಯುವರೇ? ಸಂದೇಹ ಸಹಜವಾಗಿದೆ. ಈ ಚುನಾವಣೆಯಲ್ಲಿ ತೃತೀಯರಂಗದ ಸರ್ಕಾರ ಕೇಂದ್ರದಲ್ಲಿ ಅಸ್ತಿತ್ವಕ್ಕೆ ಬರಲು ಸಾಧ್ಯವಾದರೆ ಜಾತ್ಯಾತೀತತೆಯ ಮೌಲ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರೆಯುವುದು ಖಂಡಿತ.


ತೃತೀಯ ರಂಗ ಜಾತ್ಯಾತೀತ ಮತಗಳನ್ನು ಒಡೆಯುವುದಿಲ್ಲವೇ?

ತೃತೀಯ ರಂಗದ ಸ್ಪರ್ಧೆಯಿಂದ ಜಾತ್ಯಾತೀತ ಮತಗಳು ಒಡೆದು ಬಿಜೆಪಿಗೆ ಅನುಕೂಲವಾಗಲಿದೆ ಎಂದು ಕಾಂಗ್ರೆಸ್ಸಿನ ಆರೋಪ. ಇದು ನಿಜವಲ್ಲ. ಮೊದಲನೆಯದಾಗಿ ಬಿಜೆಪಿಯ ಬೆಳವಣಿಗೆಗೆ ಕಾಂಗ್ರೆಸ್ಸೇ ಕಾರಣವಾಗಿದೆ. ತೃತೀಯ ರಂಗದ ಪ್ರಧಾನ ಶಕ್ತಿಯಾಗಿರುವ ಎಡರಂಗ ಪ್ರಬಲರಾಗಿರುವ ರಾಜ್ಯಗಳಲ್ಲಿ ಬಿಜೆಪಿಗೆ ಬೆಳೆಯಲು ಸಾಧ್ಯವಾಗಿಲ್ಲ. ಎಲ್ಲಿ ಎಡಪಕ್ಷಗಳು ದುರ್ಬಲವಾಗಿದೆಯೋ ಅಲ್ಲಿ ಮಾತ್ರ ಕಾಂಗ್ರೆಸ್ಸಿನ ಇಚ್ಛಾಶಕ್ತಿಯ ಕೊರತೆಯಿಂದ ಬಿಜೆಪಿ ಅಪಾಯ ಹೆಚ್ಚುವಂತಾಗಿದೆ. ತೃತೀಯ ಶಕ್ತಿಯನ್ನು ಪರಿಣಾಮಕಾರಿಯಾಗಿ ಸಂಘಟಿಸಲು ಸಾಧ್ಯವಾಗಿರುವ ಆಂಧ್ರಪ್ರದೇಶ ಮತ್ತು ಒರಿಸ್ಸಾದಂತಹ ರಾಜ್ಯಗಳಲ್ಲಿ ಬಿಜೆಪಿ ಸರಿಸುಮಾರು ಮೂಲೆಗುಂಪಾಗಿದೆ. ಈ ರಾಜ್ಯಗಳಲ್ಲಿ ಕಾಂಗ್ರೆಸಿಗೆ ಬಿಜೆಪಿಯನ್ನು ಸೋಲಿಸುವ ಸಾಮರ್ಥ್ಯ ಇಲ್ಲ. ತೃತೀಯ ರಂಗದ ಪಕ್ಷಗಳು ಒಟ್ಟಾಗಿ ಬಿಜೆಪಿಯನ್ನು ಮತ್ತು ಕಾಂಗ್ರೆಸ್ಸನ್ನು ಏಕಕಾಲಕ್ಕೆ ಸೋಲಿಸುವ ಸಾಧ್ಯತೆ ಈ ಚುನಾವಣೆಯಲ್ಲಿ ಮೂಡಿಬಂದಿದೆ. ಅದುವೇ 15ನೇ ಲೋಕಸಭಾ ಚುನಾವಣೆಯ ಮಹತ್ವ. ○

ಮಂಡ್ಯ : ತೃತೀಯ ರಂಗ ಗೆಲುವಿನತ್ತ ದಾಪುಗಾಲು

ಏಪ್ರಿಲ್ 30 ರಂದು ಚುನಾವಣೆ ನಡೆಯುವ ಮಂಡ್ಯ ಕ್ಷೇತ್ರದಲ್ಲಿ ತೃತೀಯ ರಂಗದ ಅಭ್ಯರ್ಥಿ ಜೆಡಿ(ಎಸ್)ನ ಚಲುವರಾಯಸ್ವಾಮಿ, ಕಾಂಗ್ರೆಸ್‌ನ ಅಂಬರೀಷ್, ಬಿಜೆಪಿಯ ಶಿವರಾಮೇಗೌಡರ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು ತೃತೀಯ ರಂಗದ ಅಭ್ಯರ್ಥಿ ಎನ್. ಚಲುವರಾಯಸ್ವಾಮಿ ಗೆಲುವಿನತ್ತ ದಾಪುಗಾಲು ಹಾಕುತ್ತಿದ್ದಾರೆ.


3 ಬಾರಿ ಸಂಸದನಾಗಿ ನಿಷ್ಕ್ರಿಯ ಸಂಸದ, ಜಿಲ್ಲೆಯ ಅಭಿವೃದ್ಧಿಗೆ ಏನೂ ಕಾಣಿಕೆ ನೀಡದ ನಿಷ್ಪ್ರಯೋಜಕ ಎಂದು ಮನೆ ಮಾತಾಗಿರುವ ಅಂಬರೀಷ್ ಮುಖ್ಯವಾಗಿ ತನ್ನ ತಾರಾ ವರ್ಚಸ್ಸನ್ನು ನಂಬಿಕೊಂಡಿದ್ದಾರೆ. ಕಾಂಗ್ರೆಸ್‌ನಿಂದ ಪಕ್ಷಾಂತರ ಆಗಿ ಬಿ.ಜೆ.ಪಿ. ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಶಿವರಾಮೇಗೌಡ ರಾಜ್ಯ ಸರ್ಕಾರದ ಆಡಳಿತ ಯಂತ್ರ, ಗಣಿಧಣಿಗಳ ಹಣವನ್ನು ನಂಬಿಕೊಂಡಿದ್ದಾರೆ. ತೃತೀಯ ರಂಗದ ಅಭ್ಯರ್ಥಿ ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಯ ದಿವಾಳಿಕೋರ ಆರ್ಥಿಕನೀತಿ, ಕೋಮುವಾದದ ಅಪಾಯವನ್ನು ಜನರ ಮುಂದೆ ಇಟ್ಟು, ಜಿಲ್ಲೆಯ ಅಭಿವೃದ್ಧಿಗೆ ತೃತೀಯ ರಂಗಕ್ಕೆ ಬಲ ತುಂಬಲು ಮತ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಈ



ಮನವಿಗೆ ಜನ ಅಭೂತಪೂರ್ವವಾಗಿ ಸ್ಪಂದಿಸುತ್ತಾ ಗೆಲುವಿನ ಸಾಧ್ಯತೆಯನ್ನು ಉಜ್ವಲಗೊಳಿಸುತ್ತಿದ್ದಾರೆ.

ಐದು ಜೆಡಿ(ಎಸ್) ಶಾಸಕರನ್ನು ಹೊಂದಿರುವ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ 2 ಹೊಸ ಕ್ಷೇತ್ರಗಳು ಸೇರ್ಪಡೆಯಾಗಿವೆ. ಕನಕಪುರ ಲೋಕಸಭಾ ಕ್ಷೇತ್ರದಲ್ಲಿದ್ದ ಜಿಲ್ಲೆಯ ಮಳವಳ್ಳಿ, ಮೈಸೂರು ಜಿಲ್ಲೆಯ ಕೆ.ಆರ್. ನಗರ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಸೇರಿರುವುದರಿಂದ ಜಿಲ್ಲೆಯ ಜಾತ್ಯಾತೀತ ಜನತಾದಳದ ಬಲ ಹೆಚ್ಚಾಗಿದೆ.

ಕ್ಷೇತ್ರದ ಉದ್ದಗಲಕ್ಕೂ ಬಿ.ಜೆ.ಪಿ. ಸರ್ಕಾರದ ಜನವಿರೋಧಿ ದುರಾಡಳಿತ, ಉಲ್ಬಣಗೊಂಡಿರುವ ವಿದ್ಯುತ್ ಸಮಸ್ಯೆಯಿಂದ ಬೇಸತ್ತಿರುವ ಮತದಾರರು ಬಿ.ಜೆ.ಪಿ. ವಿರುದ್ಧ ಅತೃಪ್ತಿ ವ್ಯಕ್ತಪಡಿಸುತ್ತಿದ್ದಾರೆ. ಜಿಲ್ಲೆಯ ಅಭಿವೃದ್ಧಿ ಪ್ರಶ್ನೆಯಲ್ಲಿ ಬೇಜವಾಬ್ದಾರಿಯಾಗಿ ನಡೆದುಕೊಂಡು, ಜಿಲ್ಲೆಯ ಜನರಿಂದ ಸಂಪೂರ್ಣ ದೂರವಾಗಿದ್ದು, ಈಗ ಮತ್ತೆ ಚುನಾವಣೆಗೆ ನಿಂತಿರುವ ಅಂಬರೀಷ್‌ಗೆ ಶ್ರೀರಂಗಪಟ್ಟಣದ



ವಿಧಾನಸಭಾ ಚುನಾವಣೆಯ ಫಲಿತಾಂಶ ನೆ... ಪಾಠ ಕಲಿಸಲು ಜನ ಸಜ್ಜಾಗಿದ್ದಾರೆ.

ಸರ್ವೋದಯ ಕರ್ನಾಟಕದ ಅಭ... ಕರ್ನಾಟಕ ರಾಜ್ಯ ರೈತ ಸಂಘದ ರಾಜ... ಕೆ.ಎಸ್. ಪುಟ್ಟಣ್ಣಯ್ಯ, ಬಿ.ಎಸ್.ಪಿ.ಯ... ಕೃಷ್ಣಮೂರ್ತಿ ಕೂಡ ಸ್ಪರ್ಧಿಸಿದ್ದು, ಕಾಂ... ಮತ ಬುಟ್ಟಿಗೆ ಕೈ ಹಾಕಿ ಅಂಬರೀಷ್ ಸೋ... ಅಂತರವನ್ನು ಹೆಚ್ಚು ಮಾಡಲಿದ್ದಾರೆ.

ಟಿ. ಯಶವ...







ಮಂಗಳೂರು: ತೃತೀಯ ರಂಗದ ರ‍್ಯಾಲಿಯ ವಿವಿಧ ದೃಶ್ಯಾವಳಿಗಳು

ಅರಣ್ಯ ಭೂಮಿ ಸಾಗುವಳಿ ಮಾಡಿದ ರೈತರಿಗೆ ಹಕ್ಕುಪತ್ರ ಕೊಡಲು ಒತ್ತಾಯ

ಹಲವಾರು ವರ್ಷಗಳಿಂದ ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವ ರೈತರಿಗೆ ಪಟ್ಟಾ ಕೊಡಬೇಕು, ಅರಣ್ಯ ಅಧಿಕಾರಿಗಳ ದೌರ್ಜನ್ಯ ನಿಲ್ಲಬೇಕು. ಸಾಗುವಳಿ ಮಾಡಿದ ಭೂಮಿಯಲ್ಲಿ ಗಿಡನೇಡುವುದು ನಿಲ್ಲಿಸಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನೂರಾರು ರೈತರು ವೆಂಕಟೇಶ್ವರ ದೇವಸ್ಥಾನದಿಂದ ಮೆರವಣಿಗೆ ಹೊರಡಿಸಿ ತಹಶೀಲ್ದಾರ್‌ರವರ ಕಛೇರಿಯಲ್ಲಿ ಸಮಾವೇಶಗೊಂಡರು.

ಸುಮಾರು 30-40 ವರ್ಷಗಳಿಂದ ಅರಣ್ಯ ಭೂಮಿಯನ್ನು ಅತಿಕ್ರಮಣಮಾಡಿ ಸಾಗುವಳಿ ಮಾಡುತ್ತಾ ಬಂದ ರೈತರು ಈ ಭೂಮಿಯನ್ನೇ ನಂಬಿ ಬದುಕುತ್ತಿದ್ದಾರೆ. ಹಾಗೂ ಸಾಗುವಳಿ ಮಾಡಿದ ಭೂಮಿಗೆ ಹಕ್ಕು ಪತ್ರ ಕೊಡಲು ಒತ್ತಾಯಿಸುತ್ತಾ ಬಂದಿದ್ದಾರೆ. ಇತ್ತೀಚಿಗೆ ಕೇಂದ್ರ ಸಕಾರ ಅರಣ್ಯ ಭೂ ಕಾಯಿದೆ ಡಿಸೆಂಬರ್ 13,2005 ರನ್ವಯ ಬುಡಕಟ್ಟು ಜನಾಂಗದವರಿಗೆ ಮಾತ್ರ ಹಕ್ಕು ಪತ್ರದ ಸಲುವಾಗಿ ಅರ್ಜಿ ಕೊಡಲು ತಿಳಿಸಿದ್ದಾರೆ. ಇನ್ನಿತರ ಜನಾಂಗಕ್ಕೆ 3 ತಲೆಮಾರುಗಳಿಂದ ಸಾಗುವಳಿ ಮಾಡಿದರೆ ಮಾತ್ರ ಈ ಕಾಯ್ದೆ ಸೌಲಭ್ಯ ದೊರೆಯುವುದೆಂದು ಪಕ್ಷಪಾತ ಧೋರಣೆ ಅನುಸರಿಸಿದೆ ಎಂದು ಪ್ರಾಂತ ರೈತ ಸಂಘದ ಮುಖಂಡರಾದ ವಿ.ಪಿ.ಕುಲಕರ್ಣಿರವರು ಟೀಕಿಸಿದರು.

ಬುಡಕಟ್ಟು ಜನಾಂಗದವರಿಗೆ ಮಾತ್ರವಲ್ಲದೆ ಅರಣ್ಯ ಭೂಮಿ ಅತಿಕ್ರಮಣ ಮಾಡಿದ ಇತರೆ ಜನಾಂಗದ ಎಲ್ಲಾ ರೈತರಿಗೆ ಅರಣ್ಯ ಭೂ ಕಾಯ್ದೆ ಡಿಸೆಂಬರ್ 13, 2005ರ ಲಾಭ ಸಿಗಬೇಕು ಮತ್ತು ಅರಣ್ಯ ಭೂಮಿ ಸಾಗುವಳಿ ಮಾಡಿದ ರೈತರ ಮೇಲಿನ ಇಲಾಖಾ ಅಧಿಕಾರಿಗಳ ದೌರ್ಜನ್ಯ ನಿಲ್ಲಬೇಕು ಎಂದು ರೈತ ಮುಖಂಡರಾದ ಎಸ್.ಬಿ.ಹಳ್ಳಿಮತ್ತು ಕಾರ್ಮಿಕ ಮುಖಂಡ ಜಿ.ಎಂ.ಜೈನೆಖಾನ ಮಾತನಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಮಾರುತಿ ಲಮಾಣಿ, ಸುಭಾಷ ಲಮಾಣಿ, ಕೃಷ್ಣಪ್ಪ ಲಮಾಣಿ, ಹಾಗೂ ಕಾರ್ಮಿಕ ಮುಖಂಡ ನಾಗಪ್ಪ ಸಂಗೊಳ್ಳಿರವರು ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಇದೀಗ ರಾಜಕೀಯ 'ಮ್ಯಾಚ್ ಫಿಕ್ಸಿಂಗ್'

ಜನಗಳ ಮುಂದೆ ಅವರಿಗೆ ಪರಿಹಾರ ನೀಡಬಹುದಾದ ಯಾವುದೇ ನೀತಿ ನಿರೂಪಣೆಗಳನ್ನು ಮಂಡಿಸದೆ ಜನಾದೇಶ ಕೋರುವ ಕಾಂಗ್ರೆಸ್ ಮತ್ತು ಬಿಜೆಪಿಯದ್ದು ರಾಜಕೀಯ ಮ್ಯಾಚ್ ಫಿಕ್ಸಿಂಗ್. ಇದರ ಹಿಂದಿರುವ ಹುನ್ನಾರವನ್ನು ಜನಗಳು ಅರ್ಥ ಮಾಡಿಕೊಳ್ಳಬೇಕು. ಜನಗಳ ಮೂಲಭೂತ ಬದುಕಿನ ಪ್ರಶ್ನೆಗಳನ್ನು ಉದ್ದೇಶಪೂರ್ವಕವಾಗಿ ಬದಿಗೊತ್ತುವ, ಜನಗಳಿಗೆ ಪರಿಹಾರ ಒದಗಿಸುವ ಪ್ರಶ್ನೆಯಲ್ಲಿ ಈ ಎರಡು ಪಕ್ಷಗಳ ನಡುವಿನ ರಾಜಕೀಯ ಭಿನ್ನತೆಗಳು ಮಸುಕಾಗಿರುವ ವಾತಾವರಣದಲ್ಲಿ ಚುನಾವಣೆ ಗೆಲ್ಲಲು ಹಣಶಕ್ತಿಯೇ ಮುಖ್ಯ ಪಾತ್ರ ವಹಿಸಿದರೆ ಆಶ್ಚರ್ಯ ಪಡಬೇಕಿಲ್ಲ

ಸಾರ್ವತ್ರಿಕ ಚುನಾವಣೆ ಬಂದೇ ಬಿಟ್ಟಿತು ಎನ್ನುತ್ತಿದ್ದಂತೆ ಕಾಂಗ್ರೆಸ್ ಮತ್ತು ಬಿಜೆಪಿ ಚರ್ಚೆಗಳನ್ನು ಕ್ಷುಲ್ಲಕ ವಿಷಯಗಳತ್ತ ತಿರುಗಿಸುವ ಕಾರ್ಯತಂತ್ರ ರೂಪಿಸಿಕೊಂಡಂತಿದೆ. ಇದು ಇಬ್ಬರಿಗೂ ಕ್ಷೇಮಕರ ಎನಿಸುತ್ತಿರಬೇಕು. ಏಕೆಂದರೆ ಆಗ ಜನಗಳನ್ನು ಬಾಧಿಸುತ್ತಿರುವ ನಿಜವಾದ ಪ್ರಶ್ನೆಗಳಿಂದ ಅವರ ಗಮನವನ್ನು ಬೇರೆಡೆಗೆ ತಿರುಗಿಸಿ ಜನಗಳಿಗೆ ಪರಿಹಾರ ಒದಗಿಸುವಂತಹ ಕಾರ್ಯಕ್ರಮಗಳು, ನೀತಿಗಳು ತಮ್ಮಿಬ್ಬರ ಬಳಿಯೂ ಇಲ್ಲ ಎನ್ನುವುದನ್ನು ಮರೆಮಾಚಬಹುದು ತಾನೇ?

ಕಳೆದ ವಾರ ಈಗಿನ್ನೂ ಪ್ರಧಾನಮಂತ್ರಿಗಳಾಗಿರುವವರು ಮತ್ತು ಮುಂದಿನ ಪ್ರಧಾನ ಮಂತ್ರಿ ತಾನೇ ಎಂದು ಓಡಾಡುತ್ತಿರುವವರ ಮಧ್ಯೆ ವಾಗ್ವಾದ ನಡೆಯಿತು. ಈಗಾಗಲೆ ಒಂದು ಕೋಟಿ ಉದ್ಯೋಗಾವಕಾಶಗಳನ್ನು ನುಂಗಿ ಹಾಕಿರುವ, ಲಕ್ಷ-ಲಕ್ಷ ಕಾರ್ಮಿಕರನ್ನು ಬೀದಿಗೆ ತಂದಿರುವ, ಅವರು ಆತ್ಮಹತ್ಯೆಗೋ, ತಮ್ಮ ಅಂಗಗಳ ಮಾರಾಟಕ್ಕೋ ಇಳಿಯುವಂತೆ ಮಾಡಿರುವ ಹಿಂಜರಿತದ ದುಷ್ಪರಿಣಾಮದಿಂದ ಜನಗಳನ್ನು ರಕ್ಷಿಸುವುದು ಹೇಗೆ ಎಂಬ ಬಗ್ಗೆಯಲ್ಲ ಈ ಚರ್ಚೆ; ಹಣದುಬ್ಬರ ಇಳಿದರೂ ಆಹಾರ ವಸ್ತುಗಳ ಬೆಲೆಯೇರಿಕೆ ಇನ್ನೂ ನಿಲ್ಲುವ ಲಕ್ಷಣವನ್ನೂ ತೋರದೆ ಜನಗಳು ಕಂಗಾಲಾಗಿರುವಾಗ ಅವರ ಈ ಹೊರೆಯನ್ನು ಹೇಗೆ ಇಳಿಸಬಹುದು ಎಂಬ ಬಗ್ಗೆಯೂ ಅಲ್ಲ ಈ ಚರ್ಚೆ. ಜನಾದೇಶ ಪಡೆದರೆ ತಾವು ಎಂತಹ ಕಾರ್ಯಕ್ರಮಗಳನ್ನು ರೂಪಿಸಿ ಜನಸಾಮಾನ್ಯರ ಬದುಕು ಹಸನಾಗುವಂತೆ ಮಾಡುತ್ತೇವೆ ಎಂಬ ಬಗೆಗಲ್ಲ ಈ ಚರ್ಚೆ.

ಚರ್ಚೆ ತಪ್ಪಿಸಲು 'ಕೋಳಿ ಜಗಳ'

ಅಡ್ವಾಣಿಯವರು ಮನಮೋಹನಸಿಂಗ್ ದೇಶ ಕಂಡ ಅತಿ ದುರ್ಬಲ ಪ್ರಧಾನಿ ಎಂದು ಟೀಕಿಸಿದರು. ಅದಕ್ಕೆ ಉತ್ತರವಾಗಿ ಮನಮೋಹನ ಸಿಂಗ್‌ರವರು ಈ ಹಿಂದೆ ಕಂಡ ಅಡ್ವಾಣಿಯವರ ನಾಯಕತ್ವದ ತೂತುಗಳನ್ನು ಎಳೆದರು - ಕಂದಹಾರ್‌ನಲ್ಲಿ ಭಯೋತ್ಪಾದಕರೊಡನೆ ವ್ಯವಹಾರ, ಬಾಬ್ರಿ ಮಸೀದಿಯನ್ನು ಧ್ವಂಸ ಮಾಡುತ್ತಿದ್ದಾಗ "ಅಡ್ವಾಣಿಯವರ ಅಸಹಾಯಕತೆ", ಕರಾಚಿಗೆ ಹೋಗಿ ಜಿನ್ನಾರ ಬಗ್ಗೆ ನೀಡಿದ 'ಅವರು ಜಾತ್ಯಾತೀತ' ಎಂಬ ಹೇಳಿಕೆ ಇತ್ಯಾದಿ. ಕಾಂಗ್ರೆಸ್ ಅಧ್ಯಕ್ಷರು ಮತ್ತು ಅವರ ಪುತ್ರ ಕೂಡಾ ಪ್ರಧಾನಿಗಳ ರಕ್ಷಣೆಗೆ ಧಾವಿಸಿದರು.


ಮಧ್ಯೆ ಇನ್ನೊಂದು ಹಾಸ್ಯ ಪ್ರಸಂಗ. ನರೇಂದ್ರ ಮೋದಿಯವರು ಕಾಂಗ್ರೆಸನ್ನು "ಬುಡಿಯಾ"(ಮುದುಕಿ) ಪಕ್ಷ ಎಂದು ಗೇಲಿ ಮಾಡಿದರು, ಇದಕ್ಕೆ ಕಾಂಗ್ರೆಸ್ ಅಧ್ಯಕ್ಷರ ಪುತ್ರಿ ತಾನು "ಮುದುಕಿ"ಯಂತೆ ಕಾಣುತ್ತೇನೆಯೇ ಎಂದು ಪ್ರಶ್ನೆ ಎಸೆದರು. ಕೂಡಲೆ ಮೋದಿ ತನ್ನ "ವರ್ಣನೆ"ಯನ್ನು ಬದಲಿಸಿ ಕಾಂಗ್ರೆಸ್ "ಗುಡಿಯಾ"(ಗೊಂಬೆ) ಪಕ್ಷ ಎಂದರು.

75 ಕೋಟಿ ಮತದಾರರಿರುವ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ಇಂತಹ "ಕೋಳಿ ಜಗಳ"ಗಳನ್ನು ವೀಕ್ಷಿಸುವ ಪರಿಸ್ಥಿತಿಯೇ? ಒಂದೆಡೆ ಇಂತಹ "ಕೋಳಿ ಜಗಳ"ಗಳು, ಮತ್ತೊಂದೆಡೆ ಜನರನ್ನು ಕಾಡುತ್ತಿರುವ ಪ್ರಶ್ನೆಗಳ ಬಗ್ಗೆ ಕಾಂಗ್ರೆಸ್ ಮತ್ತು ಬಿಜೆಪಿ ಇಬ್ಬರದ್ದೂ ದಿವ್ಯ ಮೌನ! ಇದೊಂದು ರೀತಿಯ "ಒಳ ಒಪ್ಪಂದ"ವಿರಬಹುದೇ? ಅಥವ ಇತ್ತೀಚೆಗೆ ಉದಾರೀಕರಣದ ದಿನಗಳಲ್ಲಿ ಬಹಳವಾಗಿ ಕೇಳಬರುತ್ತಿರುವ "ಮ್ಯಾಚ್ ಫಿಕ್ಸಿಂಗ್"!

ಒಂದೇ ಬಗೆಯ ತಂತ್ರ

ನಿಜ, ಈ ಕಾರ್ಯತಂತ್ರ ಆರಂಭವಾದದ್ದು ಬಿಜೆಪಿಯಿಂದ. ಅದರ "ಹಿಂದೂ ವೋಟ್ ಬ್ಯಾಂಕ್"ನ್ನು ಕ್ರೋಡೀಕರಿಸಲಿಕ್ಕಾಗಿ ವಿಷಕಾರುವ ಭಾಷಣಗಳು ಕೇಳಿ ಬರಲಾರಂಭಿಸಿದವು. ಬಿಜೆಪಿ ಪಿಲಿಭಿತ್‌ನಲ್ಲಿ ಮಾಡಿದ ಇಂತಹ ಭಾಷಣಗಳನ್ನು ಸಮರ್ಥಿಸಿಕೊಂಡಿತಷ್ಟೇ ಅಲ್ಲ, ಇನ್ನೂ ಹಲವೆಡೆ ಇಂತಹ ಅಭ್ಯರ್ಥಿಗಳನ್ನೇ ನಿಲ್ಲಿಸಿತು. ಉದಾಹರಣೆಗೆ ಒರಿಸ್ಸಾದ ಕಂಧಮಲ್‌ನಲ್ಲಿ. ಈ ವ್ಯಕ್ತಿ ಉದ್ರೇಕಕಾರಿ ಭಾಷಣಗಳಿಂದಾಗಿ ಪೋಲಿಸರಿಂದ, ಕಾನೂನಿನಿಂದ ಕಣ್ಣು ತಪ್ಪಿಸಿ ಓಡಾಡುತ್ತಿರುವ ವ್ಯಕ್ತಿ. ನಮ್ಮ ರಾಜ್ಯದಲ್ಲಿಯೂ ಹೊಡಿ, ಕಡಿ ಭಾಷಣಗಳು ಕೇಳಬಂದವು. ತನ್ನ ಪ್ರಣಾಳಿಕೆಯಲ್ಲಿಯೇ ಕೋಮುವಾದಿ ಅಜೆಂಡಾದ ಜೀರ್ಣೋದ್ಧಾರಕ್ಕೆ ಇಳಿದ ಬಿಜೆಪಿಗೆ ಚುನಾವಣೆ ಗೆಲ್ಲಲು ಕೋಮುವಾದಿ ಧ್ರುವೀಕರಣವೊಂದೇ ಮಾರ್ಗ ಎಂದು ನಿರ್ಧರಿಸಿದಂತೆ ಕಾಣುತ್ತದೆ. ಜನಗಳ ಮೂಲಭೂತ ಪ್ರಶ್ನೆಗಳ ಬಗ್ಗೆ ಬಾಯಿ ಮುಚ್ಚಿಕೊಂಡಿರುವುದೇ ಲೇಸು ಎಂದು ಅದು ಬಗೆದಿದೆ.

ನಂತರ ಕಾಂಗ್ರೆಸ್ ಕೂಡ ಇಂತಹುದೇ ತಂತ್ರ ಅನುಸರಿಸಿದೆ. ಕೇರಳದಲ್ಲಿ ಪ್ರಚಾರ ಮಾಡುವಾಗ ಪ್ರಧಾನಿಗಳು ಜನಗಳ ಗಮನವನ್ನು ಅವರ ಮೂಲಭೂತ ಪ್ರಶ್ನೆಗಳಿಂದ ಬೇರೆಡೆಗೆ ಸೆಳೆಯಲು ಕಮ್ಯುನಿಸ್ಟರನ್ನು ಹೀಯಾಳಿಸುವ, ಅದು ಕೂಡಾ ಹಲವು ಬಾರಿ ಬಳಸಿ ಹಳಸಲಾಗಿರುವ ಆಪಾದನೆಗಳನ್ನು ಪುನರಾವರ್ತಿಸುವ ಕೆಲಸಕ್ಕೆ ಕೈಹಾಕಿದರು. ಕಮ್ಯುನಿಸ್ಟರು ಸದಾ ಇತಿಹಾಸದ ತಪ್ಪು ಭಾಗದಲ್ಲೆ ಇರುವವರು ಎಂದು ಹೀಯಾಳಿಸಿದರು, 1942ರ "ಕ್ವಿಟ್ ಇಂಡಿಯಾ" ದಲ್ಲಿ ಕಮ್ಯುನಿಷ್ಟರ "ಪಾತ್ರ"ದ ಬಗ್ಗೆ ಈ ಹಿಂದೆ ಬಿಜೆಪಿಯ ಸಿದ್ಧಾಂತಿ ಅರುಣ್ ಶೌರಿ ಕೂಡಾ ಮಾಡಿದ ಆಪಾದನೆಗಳನ್ನು ಪುನರಾವರ್ತಿಸಿದರು. ಸ್ವತಃ ಭಾರತದ ರಾಷ್ಟ್ರಪತಿಗಳಾಗಿ ಚುನಾಯಿತರಾದವರು, ಈ ಹಿಂದೆ ಮನಮೋಹನ ಸಿಂಗ್‌ರವರ ಪಕ್ಷದಿಂದಲೇ ಸಂಸತ್ತಿಗೆ ಆಯ್ಕೆಯಾಗಿದ್ದವರು, ಶ್ರೀಯುತ ಶಂಕರ ದಯಾಳ ಶರ್ಮ ಸ್ವಾತಂತ್ರ್ಯದ ಸುವರ್ಣೋತ್ಸವದ ಸಂದರ್ಭದಲ್ಲಿ ಸಂಸತ್ತಿನ ಮಧ್ಯರಾತ್ರಿಯ ಅಧಿವೇಶನವನ್ನು ಉದ್ದೇಶಿಸಿ



ಹೇಳಿರುವ ಮಾತುಗಳು ಮನಮೋಹನ ಸಿಂಗ್‌ರವರಿಗೂ ನೆನಪಿರುತ್ತದೆ. ಆದರೆ ಈಗ ಜನಗಳ ಮೂಲಭೂತ ಪ್ರಶ್ನೆಗಳ ಬಗ್ಗೆ ಚರ್ಚೆಯಾಗದಂತೆ ತಡೆಯಲು ಅದನ್ನು ಮರೆಯುವುದೇ ಲೇಸು ಎಂದು ಬಗೆದಿರಬೇಕು.

ಬ್ರಿಟಿಶ್ ಸರಕಾರದ ಗೃಹ ಕಾರ್ಯದರ್ಶಿ ಸಪ್ಟೆಂಬರ್ 5, 1942ರಂದು ಕಮ್ಯುನಿಸ್ಟ್ ಪಕ್ಷದ ಸದಸ್ಯರು ಸದಾ ಬ್ರಿಟಿಶ್-ವಿರೋಧಿ ಕ್ರಾಂತಿಕಾರಿಗಳಾಗಿರುವವರು ಎಂದಿದ್ದರು ಎಂಬುದನ್ನು ರಾಷ್ಟ್ರಪತಿ ಶರ್ಮಾರವರು ತಮ್ಮ ಭಾಷಣದಲ್ಲಿ ಉದ್ಧರಿಸಿದ್ದರು.. ಇದೇ ಸಂದರ್ಭದಲ್ಲಿ ಬಿಜೆಪಿಯ ಗುರು ಆರೆಸ್ಸೆಸ್‌ನ ಪಾತ್ರದ ಬಗ್ಗೆ ಆಗಿನ ಮುಂಬೈ ಗೃಹ ಇಲಾಖೆ ಹೇಳುತ್ತ ಅದು ಈ ಸಂದರ್ಭದಲ್ಲಿ ಚಳುವಳಿಯಿಂದ ಸಂಪೂರ್ಣ ದೂರವುಳಿಯಿತು ಎಂದಿರುವುದನ್ನು ಮನಮೋಹನ್ ಸಿಂಗ್‌ರವರು ನೆನಪಿಸಿಕೊಳ್ಳಲಿಲ್ಲ. ಇದು ಈಗ ನಡೆಯುತ್ತಿರುವ ಆಟಕ್ಕೆ ಅನುಗುಣವಾಗಿಯೇ ಇದೆ.

ಹಣಬಲವೇ ಮುಖ್ಯ?

ಹೀಗೆ ಜನಗಳ ಮುಂದೆ ಅವರಿಗೆ ಪರಿಹಾರ ನೀಡಬಹುದಾದ ಯಾವುದೇ ನೀತಿ ನಿರೂಪಣೆಗಳನ್ನು ಮಂಡಿಸದೆ ಜನಾದೇಶ ಕೋರುವ ಈ ಕಾಂಗ್ರೆಸ್ ಮತ್ತು ಬಿಜೆಪಿಯ ರಾಜಕೀಯ ಮ್ಯಾಚ್ ಫಿಕ್ಸಿಂಗ್‌ನ ಹಿಂದಿರುವ ಹುನ್ನಾರವನ್ನು ಜನಗಳು ಅರ್ಥ ಮಾಡಿಕೊಳ್ಳಬೇಕು.

ಹೀಗೆ ಜನಗಳ ಮೂಲಭೂತ ಬದುಕಿನ ಪ್ರಶ್ನೆಗಳನ್ನು ಉದ್ದೇಶಪೂರ್ವಕವಾಗಿ ಬದಿಗೊತ್ತುವ, ಜನಗಳಿಗೆ ಪರಿಹಾರ ಒದಗಿಸುವ ಪ್ರಶ್ನೆಯಲ್ಲಿ ಈ ಎರಡು ಪಕ್ಷಗಳ ನಡುವಿನ ರಾಜಕೀಯ ಭಿನ್ನತೆಗಳು ಮಸುಕಾಗಿರುವ ವಾತಾವರಣದಲ್ಲಿ ಚುನಾವಣೆ ಗೆಲ್ಲಲು ಹಣಶಕ್ತಿಯೇ ಮುಖ್ಯವಾದರೆ, ಅದೇ ಮುಖ್ಯ ಪಾತ್ರ ವಹಿಸಿದರೆ ಆಶ್ಚರ್ಯ ಪಡಬೇಕಿಲ್ಲ. ಯಾವ ನೀತಿಗಳು ಎಂಬ ಬದಲು, ಯಾರು ಜನಗಳ ಮತಗಳಿಗೆ ಹೆಚ್ಚಿನ "ಬೆಲೆ" ಕೊಡಬಲ್ಲರು ಎಂಬುದೇ ಪ್ರಧಾನ ಪ್ರಶ್ನೆಯಾಗುತ್ತಿದೆ. ನಮ್ಮ ರಾಜ್ಯದಲ್ಲೇ 1000ರೂ. ಮತ್ತು 500ರೂ. ನೋಟುಗಳನ್ನು ತುಂಬಿಕೊಂಡ ಎರಡು ವಾಹನಗಳನ್ನು ಹಿಡಿದು ಹಾಕಿದ್ದು ಇದಕ್ಕೆ ಒಂದು ಉದಾಹರಣೆ. ಈ ಹಣ ತಮ್ಮದು ಎಂದು ದಾವೆ ಮುಂದಿಡಲು ಯಾರೂ ಬಂದಿಲ್ಲ. ಈ ಹಣ ಎಲ್ಲಿಗೆ ಹೊರಟಿತ್ತು ಎಂದು ಯಾರಿಗೂ ಗೊತ್ತಿಲ್ಲ!

ಆದ್ದರಿಂದ ಇಂತಹ ಒಂದು ಸನ್ನಿವೇಶದಲ್ಲಿ ಭಾರತದ ಜನಗಳು ಈ ಎರಡು ಪಕ್ಷಗಳು ಹಾಕಿರುವ ಬಲೆಯಲ್ಲಿ ಸಿಕ್ಕಿಕೊಳ್ಳಬಾರದು. ಚುನಾವಣೆಗಳ ಸಂದರ್ಭದಲ್ಲಿ ಭಾರತವನ್ನು ಬಲಿಷ್ಠಗೊಳಿಸುವ, ಜನಗಳಿಗೆ ಪರಿಹಾರ ಒದಗಿಸುವ ಪರ್ಯಾಯ ನೀತಿಗಳ ಬಗ್ಗೆ ಚರ್ಚೆ ನಡೆಯುವಂತೆ ಮಾಡಬೇಕು. ಎಡಪಕ್ಷಗಳು ಮತ್ತು ಕಾಂಗ್ರೆಸೇತರ ಜಾತ್ಯಾತೀತ ಪಕ್ಷಗಳು ಈ ಪಲ್ಲಟವನ್ನು ಮುಂದಿಡುತ್ತಿವೆ. ಇತ್ತೀಚಿನ ವರೆಗೆ ಬಹಳ ಕಾಲ ಬಿಜೆಪಿ ಅಥವ ಕಾಂಗ್ರೆಸಿನ ಜೊತೆ ಕೈಜೋಡಿಸಿದ ಪಕ್ಷಗಳು ಈಗ ಇಂತಹ ಪರ್ಯಾಯದತ್ತ ಸರಿಯುತ್ತಿರುವುದು ಜನಗಳು ಈ ಪಲ್ಲಟವನ್ನು ಸ್ವಾಗತಿಸುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ.

ಇಂತಹ ಒಂದು ಪರ್ಯಾಯ ಮಾತ್ರವೇ ಜನಗಳ, ದೇಶದ ಮೂಲಭೂತ ಪ್ರಶ್ನೆಗಳನ್ನು ನಿಭಾಯಿಸಬಲ್ಲದು ಎಂಬುದು ಆರು ವರ್ಷಗಳ ಬಿಜೆಪಿ ನೇತೃತ್ವದ ಸರಕಾರ, ನಂತರ ಐದು ವರ್ಷಗಳ ಕಾಂಗ್ರೆಸ್ ನೇತೃತ್ವದ ಸರಕಾರವನ್ನು ನೋಡಿದ ನಂತರ ಸ್ಪಷ್ಟವಾಗಿ ಕಾಣುತ್ತಿದೆ. ಇಂತಹ ಒಂದು ಪಲ್ಲಟ ಸಾಧ್ಯವಾಗುವಂತೆ , 2009ರ ಚುನಾವಣೆಗಳ ನಂತರ ಒಂದು ಕಾಂಗ್ರೆಸೇತರ, ಬಿಜೆಪಿಯೇತರ ಪರ್ಯಾಯ ಜಾತ್ಯಾತೀತ ಸರಕಾರ ರಚನೆಯಾಗುವಂತೆ ಮಾಡಬೇಕಾಗಿದೆ.



ಇಡೀ ರಾಜ್ಯದಲ್ಲಿ ಅಷ್ಟೇ ಅಲ್ಲ ಇಡೀ ದೇಶದಲ್ಲಿ ದಕ್ಷಿಣ ಕನ್ನಡ ಕ್ಷೇತ್ರದ ಬಗೆಗೆ ಕುತೂಹಲ ಇದೆ. ಇಲ್ಲಿನ ಪರಿಸ್ಥಿತಿ ಏನು? ಏನು ನಡೆದಿದೆ ಅಂತ. ಮೂರನೇ ಪರ್ಯಾಯದ ಭಾಗವಾಗಿ ಸಿಪಿಐ(ಎಂ) ಅಭ್ಯರ್ಥಿ ಕಣದಲ್ಲಿರುವ ಕ್ಷೇತ್ರಕ್ಕೆ ಭೇಟಿ ನೀಡಿದಾಗ ಕಂಡ ಚಿತ್ರಣ ಇದು.

ರಾಜಕೀಯ ಚರ್ಚೆಗೆ ಸಿದ್ಧವಿಲ್ಲದ ಕಾಂಗ್ರೆಸ್ - ಬಿಜೆಪಿ

ದಕ್ಷಿಣ ಕನ್ನಡ ಕ್ಷೇತ್ರದ ರಾಜಕೀಯ ಚಿತ್ರಣ

ರಾಮಕೃಷ್ಣ.ಆರ್

ದೇಶದಲ್ಲಿ ನಡೆಯುತ್ತಿರುವ ಐದು ಹಂತಗಳ ಚುನಾವಣೆಯಲ್ಲಿ ಮಂಗಳೂರಿನಲ್ಲಿ ಮತದಾನ ನಡೆಯುವುದು ಏಪ್ರಿಲ್ 30 ರಂದು. ಅಂದರೆ 3ನೇ ಹಂತದ ಮತದಾನ. ಕರ್ನಾಟಕದ ಲೆಕ್ಕದಲ್ಲಿ ಆದರೆ ಇಲ್ಲಿನ ಎರಡನೇ ಹಂತದಲ್ಲಿ ಮತದಾನ ನಡೆಸಲು ನಿಗದಿಯಾಗಿದೆ. ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರ ಹಲವು ಕಾರಣಗಳಿಗಾಗಿ ರಾಜ್ಯದಲ್ಲಿ ವಿಶೇಷವಾಗಿ ಗಮನ ಸೆಳೆದಿರುವ ಕ್ಷೇತ್ರ. ಕೋಮುಗಲಭೆಗಳ ಅಗ್ನಿಕುಂಡ'ವಾಗಿ, ಹಿಂದುತ್ವದ



ಪ್ರಯೋಗಶಾಲೆಯಾಗಿ ಮಹಿಳೆಯರು, ಅಲ್ಪಸಂಖ್ಯಾತರ ಮೇಲಿನ ದಾಳಿಗಳು ನಡೆಯುತ್ತಿರುವ ಪ್ರದೇಶವಾಗಿ ಒಂದು ಕಾರಣಕ್ಕೆ. ಜೆಡಿ(ಎಸ್), ಸಿಪಿಐ ಬೆಂಬಲಿತ ರಾಜ್ಯದ ಸಿಪಿಐ(ಎಂ) ಅಭ್ಯರ್ಥಿ, ದುಡಿಯುವ ವರ್ಗದ ನಾಯಕರೊಬ್ಬರು ಈ ಕ್ಷೇತ್ರದಲ್ಲಿದ್ದಾರೆನ್ನುವ ಕಾರಣಕ್ಕೆ ಹೀಗೆ ಹಲವು ಕಾರಣಗಳಿಗೆ ಈ ಬಗ್ಗೆ ಹಲವು ಬಗೆಯ ಕುತೂಲಹಲ ಸಹಜವೇ.

'ಜನಶಕ್ತಿ' ಯ ಓದುಗರಿಗೆ ದ.ಕನ್ನಡ ಲೋಕಸಭಾ ಕ್ಷೇತ್ರದ ರಾಕೀಯ ಪರಿಸ್ಥಿತಿ, ಅಲ್ಲಿನ ರಾಜಕೀಯ ಪ್ರಕ್ರಿಯೆಗಳ ಬಗೆಗೆ ಒಂದು ಚಿತ್ರ ಕೊಡಬೇಕೆಂಬ ಕಾರಣಕ್ಕೆ ಅಲ್ಲಿಗೆ ಭೇಟಿ ನೀಡಿದಾಗ ಕಂಡು ಬಂದದ್ದೇ ಈ ಮುಂದಿನ ವಿವಿಧ ಚಿತ್ರಣಗಳು.

ಏಪ್ರಿಲ್ 15 ರ ಬೆಳಿಗ್ಗೆ ರೈಲು ಮಂಗಳೂರು ತಲುಪುವವರೆಗೆ ನನಗೆ ದಕ್ಷಿಣ ಕನ್ನಡ ಜಿಲ್ಲೆಯ ರಾಜಕೀಯ ಚಟುವಟಿಕೆಗಳ ಬಗೆಗೆ ಇದ್ದ ಚಿತ್ರ ಬೇರೆ. ನಾನು ಅಲ್ಲಿ ನೋಡಿದ್ದು ಸ್ವಲ್ಪ ಭಿನ್ನ.

ಮಂಗಳೂರಿನ ಅತ್ಯಂತ ಜನಭರಿತ ಸ್ಟೇಟ್‌ಬ್ಯಾಂಕ್ ಸರ್ಕಲ್, ಜಿಲ್ಲಾಧಿಕಾರಿಗಳ ಕಛೇರಿಯ ಸುತ್ತಮುತ್ತ ಕೂಡ ಒಂದೇ ಒಂದು ಚುನಾವಣೆಗೆ ಸಂಬಂಧಿಸಿದ ಬ್ಯಾನರ್ ಇಲ್ಲ, ಕಟೌಟ್ ಇಲ್ಲ. ಆಟೋ, ಜೀಪ್ ಪ್ರಚಾರವಿಲ್ಲ. ಎಲ್ಲೂ ಪೋಸ್ಟರ್‌ಗಳಿಲ್ಲ. ಚುನಾವಣೆ ನಡೆಯುತ್ತಿದೆಯೋ ಇಲ್ಲಿ ಎಂಬಂತಹ ವಾತಾವರಣ. ಚುನಾವಣಾ ಆಯೋಗದಿಂದ ಅಭ್ಯರ್ಥಿಯ ನಿಮಿಷ, ನಿಮಿಷಗಳ ಚಟುವಟಿಕೆ, ಕಾರ್ಯಕ್ರಮಗಳ ಬಗೆಗೆ ಮಾಹಿತಿ ಕೊಡಿ ಅಂತ ಕೇಳಿದ್ದಾರಂತೆ. ಚುನಾವಣೆಯ ಗಡಿಬಿಡಿ, ದಾವಂತಗಳ ನಡುವೆಯೂ ಸಿಪಿಐ(ಎಂ) ಪಕ್ಷದ ಕಛೇರಿಯಲ್ಲಿ ಅಭ್ಯರ್ಥಿ ಮಾಧವ ಚಟಾಕಿ ಹಾರಿಸಿದರು - "ಎರಡು ನಿಮಿಷ ನನ್ನ ಹೆಂಡತಿಯ ಜೊತೆ ಮಾತನಾಡಿದರೂ ಆ ಬಗ್ಗೆಯೂ ಮಾಹಿತಿ ಕೊಡಬೇಕೆ" ಅಂತ.

ಆಯೋಗದ ಕ್ರಮ ಸರಿಯೋ ತಪ್ಪೋ ಎಂಬುದು ಬೇರೆ ಪ್ರಶ್ನೆ. ಆದರೆ ಮಂಗಳೂರಿನ ಹಲವು ಬಡಾವಣೆಗಳಿಗೆ ಭೇಟಿ ಕೊಟ್ಟಾಗ ಗೊತ್ತಾಗಿದ್ದು ಏಪ್ರಿಲ್ 15, 16 ಆದರು ಚುನಾವಣೆಯ ಕಾವು ಇನ್ನೂ ಸೃಷ್ಟಿಯಾಗಿಲ್ಲ ವಿವಿಧ ರಾಜಕೀಯ ಪಕ್ಷಗಳು ತಮ್ಮದ ಕಾರ್ಯಶೈಲಿಯಲ್ಲಿ ತಂತ್ರ, ಪ್ರತಿತ ಹೆಣೆಯುತ್ತಾ ಇರಬಹುದು . ಆದರೆ ಮನೆ ಮನೆ ತೆರಳಿ, ತಮ್ಮ ವಿಚಾರ, ಆದ್ಯತೆ, ನೀತಿ ವಿವರಿಸಿ ಮತ ಕೇಳುವ ಕೆಲಸ ನಡೆದಿರುವುದಕ್ಕೆ ಹೆಚ್ಚಿ ಸಾಕ್ಷಿ ಸಿಗಲೇ ಇಲ್ಲ. "ತಮ್ಮನ್ನು ಇನ್ನೂ ಯಾರ ಮತ ಕೇಳಿಲ್ಲ, ಇನ್ನೂ ಯಾರೂ ಬಂದಿಲ್ಲ" ಎಂ ಉತ್ತರಗಳು ಹಲವು ಕಡೆ ಬಂದವು. ಯಾರೋ ಕೆಲವರು ಬಂದವರು ಏನೊಂದು ಮಾತನಾಡದ ಸುಮ್ಮನೇ ಕರಪತ್ರವೊಂದನ್ನು ಕೈಗಿಟ್ಟು ಹೋಗಿರುವುದಿದೆ.

ಭಿನ್ನ ಮಾದರಿ ಸಿಪಿಐ(ಎಂ)ನದು

ಸಿಪಿಐ(ಎಂ) ಪಕ್ಷ ವಿಭಿನ್ನ ಮಾದರಿಯ ಕೆಲಸ ಮಾಡುತ್ತಿದೆ. ಜನಜೀವನದ ಸಮಸ್ಯೆಗಳ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದ ಪ್ರಶ್ನೆಗಳ ಪಕ್ಷದ ನೀತಿ, ಸಿದ್ಧಾಂತ, ಹೋರಾಟ ಇವ್ವ ಆಧಾರದಲ್ಲಿ ಕಾರ್ಯಕರ್ತರು ವ್ಯವಸ್ಥಿತ ಪ್ರ ನಡೆಸಲು ಯತ್ನಿಸುತ್ತಿದ್ದಾರೆ. ಮನೆ ಮನೆ ಪ್ರಚಾ ಸಮಾವೇಶ, ಸಭೆಗಳು ಕುಟುಂಬ ಸದಸ್ಯ ಸಭೆಗಳು.... ಹೀಗೆ.

ಮಂಗಳೂರು ನಗರ ಉತ್ತರ ಕ್ಷೇತ್ರದ ಎರಡು ಭಾಗಗಳಿವೆ. ಗುರುಪುರ ಪ್ರದೇಶ ಸುರತ್ಕಲ್ ಪ್ರದೇಶ, ಗುರುಪುರ ವಲಯದ ಕಾರ್ಯಕರ್ತರಿಗೆ ಯಾವ ಪ್ರಶ್ನೆಗಳ ಆಧಾರದ ಪ್ರಚಾರ ನಡೆಸಬೇಕೆನ್ನುವ ಕುರಿತು ತಿಳುವಳಿ ನೀಡುವ ಸಭೆಗಳನ್ನು ನಡೆಸಲಾಗಿದೆ. ಸಿಪಿಐ ಸಿಪಿಐ(ಎಂ), ಜನತಾದಳಗಳ ಮುಖಂಡರನ್ನೊಳಗೊಂಡ ಎರಡು ಮುಖ್ಯ ಸಮಿತಿ ರಚಿಸಲಾಗಿದೆ. ಅದರಅಡಿಯ

ತೊಕ್ಕೊಟ್ಟು: ಹೋರಾಟವೇ ಉಸಿರಾದ ಪಕ್ಷದ ಬಗೆಗೆ ಅಭಿಮಾನ

ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಉಳ್ಳಾಲ ವಿಧಾನಸಭಾ ಕ್ಷೇತ್ರದೊಳಗೆ ತೊಕ್ಕೊಟ್ಟು ಎಂಬುದು ಒಂದು ಪ್ರದೇಶ. ಇಲ್ಲಿನ ಕೆಲವು ಪ್ರದೇಶಗಳಿಗೆ ಭೇಟಿ ನೀಡಬೇಕೆಂದುಕೊಂಡಾಗ ಮೊದಲಿಗೆ ಆಯ್ದು ಕೊಂಡದ್ದು, ಲಕ್ಷ್ಮಿಗುಡ್ಡೆ.

ಕಡಿದಾದ ಗುಡ್ಡಗಳ ನಡುವೆ ಮೇಲೆ ಮೇಲೆ ಸಾಗುವ ಮಣ್ಣಿನ ರಸ್ತೆಯಲ್ಲಿ ಸಾಗಿ ಕೊನೆಗೆ, ಗುಡ್ಡದ ಕೊನೆ ಎನ್ನುವ ಜಾಗದಲ್ಲಿ ಇಳಿದಾಗ ನಮಗೆ ಅಲ್ಲೊಂದು ಪುಟ್ಟ ರಾಜಕೀಯ ಸಭೆ ನಡೆಯುತ್ತಿರುವುದು ಕಾಣಿಸಿತು. ಒಂದು ಇಪ್ಪತ್ತು ಜನರಷ್ಟು ಮಹಿಳೆಯರನ್ನು ಕೂರಿಸಿಕೊಂಡು ಕೆಲವರು ಸಂವಾದ ಚರ್ಚೆ ನಡೆಸುತ್ತಿದ್ದರು.

ಅನುಮಾನವೇ ಬೇಡ ಅದು ಸಿಪಿಐ(ಎಂ)ನ ಸಭೆ. ಬೇರೆಯವರು ಈ ಹೊತ್ತಿನಲ್ಲಿ ಯಾಕಾದರೂ ಇಂಥ ಸಭೆ ಮಾಡಿಯಾರು. ಸಿಪಿಐ(ಎಂ) ರಾಜ್ಯ ಮುಖಂಡರಾದ ಮಾರುತಿ ಮಾನ್ಪಡೆಯವರು, ಸ್ಥಳೀಯ ಮುಖಂಡರೂ ಅಲ್ಲಿ ಜನರೊಂದಿಗೆ ಸಂವಾದದಲ್ಲಿದ್ದಾರೆ. ನಾವು ಕೆಲವರ ಮನೆಗಳಿಗೆ ಹೋದೆವು. ಜನ ಹೇಳಿದರು ಗುಡ್ಡದ ಮೇಲೆ ಸುಮಾರು 200-250 ಮನೆಗಳಿವೆ. ಸ್ವಂತ ನಿವೇಶನವಿಲ್ಲದ ಬಡವರು ಸರ್ಕಾರಿ ಜಾಗ ಹಿಡಿದಿದ್ದಾರೆ. ಮನೆ ಕಟ್ಟಿಕೊಂಡಿದ್ದಾರೆ. ಅದಕ್ಕೆಲ್ಲಾ ಸಿಪಿಐ(ಎಂ)ನದೇ ನೇತೃತ್ವ. ಸಿಪಿಐ(ಎಂ) ಇಲ್ಲಿನ ಜನರಿಗೆ ನೀರು ಪೂರೈಕೆಗಾಗಿಯೂ ಹೋರಾಟ ನಡೆಸಿದೆ. ಈಗ ನೀರು ಸಿಕ್ಕಿದೆ. ವಾಸಕ್ಕೆ ಜಾಗ ಸಿಕ್ಕಿದೆ. ಹಕ್ಕುಪತ್ರ ಇನ್ನು ಸಿಕ್ಕಿಲ್ಲ. ಹೋರಾಟ ನಡೆಯುತ್ತಿದೆ.

ಸಿಪಿಐ(ಎಂ) ಪಕ್ಷದ ಬಗೆಗೆ ಜನಕ್ಕೆ ಇಲ್ಲಿ ವಿಶೇಷ ಅಭಿಮಾನ. ಬೇರೆ ಯಾರೂ ಇಲ್ಲಿ ಓಟು ಕೇಳಲು ಇನ್ನೂ ಬಂದಿಲ್ಲ. ಬಂದರೂ ಇಲ್ಲಿನ ಹೆಚ್ಚಿನ ಮತಗಳು ಸಿಪಿಐ(ಎಂ)ಗೆ. ಸಭೆಗೆ ಅನಿಸುತ್ತದೆ, ಇವರು ಸಿಪಿಐ(ಎಂ) ಬೆಂಬಲಿಗರು ಎಂಬ ಕಾರಣಕ್ಕೆ ರೇಷನ್ ಕಾರ್ಡ್ ಕೊಡದೇ ಕೆಲವರು (ಬಿಜೆಪಿಯವರು ಅಂತಾ ಬೇರೆ ಹೇಳಲೇ ಬೇಕಿಲ್ಲ ಅಲ್ಲವೇ) ತರಲೇ ಮಾಡಿದ್ದೂ ಇದೆಯಂತೆ. ಅದಕ್ಕೂ ಹೋರಾಟ ಮಾಡಿ ಜನ ಕಾರ್ಡ್ ಪಡೆದರಂತೆ. ಆ ಬಗ್ಗೆ ಹೆಮ್ಮೆ ಇಲ್ಲಿನ ಜನರಿಗೆ.

ಕೋಮುವಾದಿ ರಾಜಕೀಯ ಪ್ರಚಾರ ಎಂಬುದು ಈ ಪ್ರದೇಶವನ್ನೂ ಬಿಟ್ಟಿಲ್ಲ. ಜನಪರ ಹೋರಾಟಗಳ ಬಗೆಗೆ ಸಿಪಿಐ(ಎಂ) ಬಗೆಗೆ ಹೆಮ್ಮೆ ಇರುವಾಗಲೇ ಕೆಲವರಿಗೆ ಪಬ್‌ಗೆ ಹೋಗುವ ಮಹಿಳೆಯರಿಗೆ ಹೊಡೆದದ್ದು ಸರಿ, ಚರ್ಚ್ ಮೇಲೆ ದಾಳಿ ನಡೆದದ್ದಲ್ಲ, ಮತಾಂತರ ಕೇಂದ್ರಗಳ ಮೇಲೆ ಎಂಬ ಸಂಘ ಪರಿವಾರದ ವಾದವನ್ನೇ ಇವರೂ ಉಸುರುತ್ತಾರೆ. ಇಂಥ ಅಭಿಪ್ರಾಯ ಕೊಟ್ಟವರು ಇಬ್ಬರೂ ಗಂಡಸರು. ಒಬ್ಬರಂತೂ ಮನೆಯ ಮಹಿಳೆಯರನ್ನು ಕರೆಯಿರಿ ಅವರು ಸಮಸ್ಯೆಗಳ ಬಗೆಗೆ ಏನು ಹೇಳುತ್ತಾರೋ ಕೇಳೋಣ ಎಂದರೆ ಅವರೇನು ಹೇಳುತ್ತಾರೆ. ನಾವೇ ಎಲ್ಲ ಹೇಳುತ್ತೇವೆ ಎಂಬಂತೆ ತಾವೇ ಮಾತನಾಡಿದರು. ಜನ ಚಳುವಳಿಗಳು ಎಷ್ಟು ಎಚ್ಚರ ವಹಿಸಬೇಕೆಂಬುದಕ್ಕೆ ಸಣ್ಣ ಸಾಕ್ಷಿ ಈ ಪ್ರಕರಣ. 'ಬೀಡಿಯವರಿಗೆಲ್ಲಾ ತುಂಬ ಕೆಲಸ ಮಾಡಿದ್ದಾರೆ. ಶಾಲೆ ಮಕ್ಕಳ ಪರವಾಗಿ ಅದು ಸಿಗಬೇಕು, ಇದು ಸಿಗಬೇಕು ಎಂದು ಹೋರಾಟ ಮಾಡುತ್ತಾರೆ. ಆದ್ದರಿಂದ ಕಮ್ಯುನಿಸ್ಟ್ ಪಕ್ಷವೇ ಬರಬೇಕು' ಎಂಬುದು ಬೀಡಿ ಕಾರ್ಮಿಕ ಮಹಿಳೆ ಮೀನಾ ಅವರ ಖಚಿತ ನುಡಿ.

ಸಿಪಿಐ(ಎಂ)ಉಳ್ಳಾಲ ಕಾರ್ಯದರ್ಶಿ ಕಾಂ. ರಾಮಚಂದ್ರ ಉಚ್ಚಿಲ್ ನೇತೃತ್ವದಲ್ಲಿ ಈ ಭಾಗದಲ್ಲಿ ನಿರಂತರ ಚಳುವಳಿಗಳು ನಡೆದಿವೆ.

ಪಂಚಾಯ್ತಿಗೊಂದು ಸಮಿತಿ ರಚಿಸುವ ಪ್ರಕ್ರಿಯೆ ನಡೆಯುತ್ತಿದೆ. ಗುರುಪುರದ ವಲಯದಲ್ಲಿ ಕುಪ್ಪೆಪದವು, ಗಂಜಿಮಠ, ತೆಂಕ ಎಡ ಪದವು, ತಿರುವೇಲು ಕಾರ್ಪೊರೇಷನ್ ವಾರ್ಡ್‌ಗಳಲ್ಲಿ ಇಂಥ ಪ್ರಕ್ರಿಯೆ ನಡೆಯುತ್ತಿದೆ. ಜನರ ನಡುವೆ ವಿಚಾರಾಧಾರಿತ ಪ್ರಚಾರ ನಡೆಸುವ ಭರವಸೆ ಸಿಪಿಐ(ಎಂ) ಜಿಲ್ಲಾ ಮುಖಂಡ ವಸಂತ ಆಚಾರಿಯವರದ್ದು.

ಸುರತ್ಕಲ್ ಪ್ರದೇಶದಲ್ಲಿ ಸಿಪಿಐ, ಸಿಪಿಐ(ಎಂ), ಜನತಾದಳ ಈ ಮೂರು ಪಕ್ಷಗಳ ಮುಖಂಡರ ಸಮಿತಿ ರಚಿಸಲಾಗಿದೆ. ಸಿಪಿಐ(ಎಂ) ಮುಖಂಡ ಮುನೀರ್ ಕಾಟಿಪಳ್ಳಸಮಿತಿ ಕಾರ್ಯದರ್ಶಿಯಾಗಿದ್ದಾರೆ. ಜೆಡಿ(ಎಸ್)ನ ಧನರಾಜ್ ಅಧ್ಯಕ್ಷರಾಗಿದ್ದಾರೆ.

ಕಾವೂರು, ತಿರುವೈಲ್, ಕೊಂಚಾಡಿ ಮುಂತಾದ ವಾರ್ಡ್‌ಗಳಲ್ಲಿ ವ್ಯವಸ್ಥಿತ ಮನೆ ಮನೆ ಭೇಟಿ ನಡೆಯುತ್ತಿದೆ. ಪಂಜು ಮೊಗರು, ವರುಂದಾಡಿ, ವಿದ್ಯಾನಗರ, ದೇ ಬೈಲು, ಕೋಡಿಕಲ್, ಕುಪ್ಪೇಪದವು, ಮಳಲಿ, ಮಿಜಾರು ಇಂತಹ ಕಡೆಗಳಲ್ಲಿ ಕುಟುಂಬ ಸದಸ್ಯರ ಸಭೆಗಳನ್ನು ನಡೆಸಲಾಗುತ್ತಿಧೆ.

ಕುಪ್ಪೇಪದವು ಕೈಕಂಬ, ವಾಮಂಜೂರು, ಅದ್ದೂರು, ಅಮ್ಮಮೊಗರು, ಹರೇಕಳಗಳಲ್ಲಿ ಕುಡಿಯುವ ನೀರಿನ ಪ್ರಶ್ನೆ ಪ್ರಧಾನವಾಗಿದ್ದು, ಈ ಪ್ರಶ್ನೆಯನ್ನೂ ಸಿಪಿಐ(ಎಂ) ಕೈಗೆತ್ತಿಕೊಂಡಿದೆ.

ಕೋಮುವಾದವನ್ನು ದೃಢವಾಗಿ ಎದುರಿಸಲಾರದ ಕಾಂಗ್ರೆಸ್‌ನ ಅಸಹಾಯಕತೆಯಿಂದ ಬೇಸತ್ತ ಸುರತ್ಕಲ್ ಪ್ರದೇಶದ ಹಲವಾರು ಅಲ್ಪಸಂಖ್ಯಾತ ಯುವಜನರು ಸಿಪಿಐ(ಎಂ) ಪಕ್ಷದ ಕಡೆಗೆ ಒಲವು ತೋರುತ್ತಿದ್ದಾರೆ.

ದಕ್ಷಿಣ ಕನ್ನಡ ಕ್ಷೇತ್ರದ ಭಾಗವಾಗಿ ಹಾಗೂ ಸುರತ್ಕಲ್ ಜನರನ್ನು ಬಾಧಿಸುವ ಹಲವರು ಮುಖ್ಯವಾದ ಪ್ರಶ್ನೆಗಳಿವೆ. ಎಂಆರ್‌ಪಿಎಲ್ ತೈಲಾಗಾರದ ತ್ಯಾಜ್ಯ ತೈಲದಿಂದ ಮೀನುಗಾರಿಕೆಗೆ ಆಗುತ್ತಿರುವ ತೊಂದರೆ, ಎಸ್‌ಇಜೆಡ್ ಪ್ರಶ್ನೆ ಇತ್ಯಾದಿಗಳಿವೆ. ಎಂ.ಆರ್.ಪಿ.ಎಲ್. ಸಂಸ್ಥೆಯ ಕಾರ್ಮಿಕ- ನೌಕರರ ಮಕ್ಕಳಿಗೆ ಶಾಲೆಯಲ್ಲಿನ ಶುಲ್ಕ 3 ರಿಂದ 18 ಸಾವಿರಕ್ಕೇ ಏರಿದೆ. ಬಿಎಎಸ್‌ಎಫ್ ಎಂಬ ಜರ್ಮನಿಯ ರಾಸಾಯನಿಕ ಕಾರ್ಖಾನೆ ಸುತ್ತಮುತ್ತಲ ಪರಿಸರದ ಮೇಲೆ ಬೀರುವ ಪರಿಣಾಮ ಇತ್ಯಾದಿ ಹಲವ ಪ್ರಶ್ನೆಗಳಿವೆ.

ಇವೆಲ್ಲಾ ಸ್ಥಳೀಯ ಪ್ರಶ್ನೆಗಳು. ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಮಹತ್ವದ ವಿಷಯ ಮುಖ್ಯ ಅಲ್ಲವೇ ಅಂತ ಯಾರಿಗಾದರೂ ಅನಿಸಬಹುದು. ಇವು ಸ್ಥಳೀಯ ಪ್ರಶ್ನೆಗಳೇ ಆದರೂ ರಾಷ್ಟ್ರ ಮಟ್ಟದ ನೀತಿ, ಧೋರಣೆಗಳಿಗೂ ಜನರ ಈ ಸಮಸ್ಯೆಗಳಿಗೂ ಬಹಳಷ್ಟು ಸಂಬಂಧಗಳಿವೆ. ಹೀಗಾಗಿ ಇವೆಲ್ಲಾ ಚುನಾವಣಾ ವಿಷಯಗಳೇ. ಸಿಪಿಐ(ಎಂ) ಗೆ ಇವೆಲ್ಲವೂ ಚರ್ಚಿಸಬೇಕಾದ ವಿಷಯಗಳು.

ಆದರೆ ಕಾಂಗ್ರೆಸ್ - ಬಿಜೆಪಿ ಕತೆ ಏನು? ಕಾಂಗ್ರೆಸ್ ಗೆದ್ದರೆ ಹಿಂದುಗಳು ಬದುಕಲಿಕ್ಕೆ ಆಗುವುದಿಲ್ಲ. ಕಾಂಗ್ರೆಸ್ ಮುಸ್ಲಿಮರನ್ನು ಒಲೈಸುತ್ತದೆ ಎಂಬುದು ಬಿಜೆಪಿಯ ಪ್ರಚಾರ. ಜನರನ್ನು ಬೆದರಿಸಿ ಕೃತಕ ಶತ್ರುವನ್ನು ಸೃಷ್ಟಿಸಿ ಓಟು ಪಡೆಯುವ ಹುನ್ನಾರ.

ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಮಾಡುತ್ತಿರುವುದೇನು? ಅದು ಹಿಂದುಳಿದ ಜಾತಿಯ ಅಭ್ಯರ್ಥಿ ಎಂಬ ಆಧಾರದಲ್ಲಿ ಓಟು ಕೇಳುತ್ತಿದೆ. ಸತ್ಯಜಿತ್ ಸುರತ್ಕಲ್ ಅಂತ ಹಿಂದೂಜಾಗರಣ ವೇದಿಕೆಯ ದಕ್ಷಿಣ ಪ್ರಾಂತ ಸಂಚಾಲಕ ಒಬ್ಬ. ಆತ ಸುರತ್ಕಲ್ ಗಲಭೆಯ ರೂವಾರಿ. ತತ್‌ಕ್ಷಣಕ್ಕೆ ಬಿಜೆಪಿ ಅಭ್ಯರ್ಥಿ ಸಂಬಂಧ ಆತನಿಗೆ ಬಿಜೆಪಿ ಜೊತೆಗೆ ತಕರಾರಿದೆ. ಈತನೂ ಬಿಲ್ಲವ ಸಮುದಾಯಕ್ಕೆ ಸೇರಿದವರು. ಜನಾರ್ಧನ ಪೂಜಾರಿಯವರೂ ಬಿಲ್ಲವ ಸಮುದಾಯಕ್ಕೆ ಸೇರಿದವರು. ಇಲ್ಲಿ ಸತ್ಯಜಿತ್‌ನ ಅತೃಪ್ತಿಯನ್ನು ಬಳಸಿಕೊಳ್ಳುವ ಯತ್ನದಲ್ಲಿಧೆ ಕಾಂಗ್ರೆಸ್.

ಜನರು ತಮ್ಮ ನಿಜವಾದ ಪ್ರಶ್ನೆಗಳ ಮೇಲೆ ಆಲೋಚನೆ ಮಾಡಲು, ಅದನ್ನು ಆಧರಿಸಿ ತೀರ್ಮಾನಕ್ಕೆ ಬರುವಂತೆ ಬಿಡಲು ಕಾಂಗ್ರೆಸ್ ಆಗಲಿ, ಬಿಜೆಪಿಯಾಗಲಿ ಸಿದ್ದವಿಲ್ಲ ಎಂಬುದು ಅವರವರ ಪ್ರಚಾರ ವೈಖರಿ, ತಂತ್ರಗಳಿಂದಲೇ ತಿಳಿಯುತ್ತದೆ.

ಮಂಗಳೂರು ನಗರ ಕ್ಷೇತ್ರದಲ್ಲಿ

ಇಲ್ಲಿ ಸಿಪಿಐ, ಸಿಪಿಐ(ಎಂ), ಜೆಡಿ(ಎಸ್) ಗಳ ಚುನಾವಣಾ ಸಮಿತಿ ರಚಿಸಲಾಗಿದೆ. ಸಿಪಿಐ(ಎಂ) ಮುಖಂಡರಾದ ಸುನಿಲ್ ಕುಮಾರ್ ಬಜಾಲ್‌ರ ನಾಯಕತ್ವದಲ್ಲಿ ಕಾರ್ಯಕರ್ತರ ಪಡೆ ಕೆಲಸಕ್ಕೆ ಇಳಿದಿದೆ. ಬಜಾಲ್ ಪ್ರದೇಶದಲ್ಲಿ ಸಿಪಿಐ(ಎಂ) ಗೆ ನಗರಸಭೆಯಲ್ಲಿ ಒಂದು ಸ್ಥಾನ ಗಿಟ್ಟಿದೆ. ಜೆಡಿ(ಎಸ್) ಗೂ ಒಂದು ಸ್ಥಾನ ಇದೆ. ಇಲ್ಲಿ ಪಕ್ಷಗಳ ನಡುವೆ ಮೇಲ್ಮಟ್ಟದಲ್ಲಿಯೂ, ಕೆಳ ಮಟ್ಟದಲ್ಲಿಯೂ ಉತ್ತಮ ಸಹಕಾರ ಇದ್ದು ಉತ್ತಮ ಸಮನ್ವಯದಿಂದ ಕೆಲಸ ನಡೆಯುತ್ತಿದೆ.

ಸಿಪಿಐ(ಎಂ)ಗೆ ಸಾಕಷ್ಟು ಪ್ರಭಾವ ಇರುವ ಜಪ್ಪಿನಮೊಗರು, ಊರ್ವಾಸ್ಟೋರ್, ಬಜಾಲ್,

ಪುಟ 10 ನೋಡಿ

ಬಜಾಲ್: ಜನಕ್ಕೆ ಸಮಸ್ಯೆಯೇ ದೊಡ್ಡದು

ಮಂಗಳೂರು ನಗರದ ಬಜಾಲ್‌ನಲ್ಲಿ ಮನೆಮನೆಗೆ ಹೋಗಿ ಜನರೊಂದಿಗೆ ಮಾತನಾಡಿದರೆ ಗೊತ್ತಾಗುತ್ತದೆ ಕಾಂಗ್ರೆಸ್, ಬಿಜೆಪಿ ಇವರು ಯಾರೂ ಇನ್ನೂ ಜನರ ಮತ ಕೇಳಲು ಬಂದಿಲ್ಲ. ಹಾಗಾಗಿ ಅವರು ಏನು ಹೇಳಿದರು ಎಂದು ಕೇಳುವಂತಿಲ್ಲ. ಆದರೆ ಜನ ತಮ್ಮ ಸಮಸ್ಯೆಗಳನ್ನು ಮುಂದೆ ಮಾಡಲು ಹಿಂಜರಿಯಲಿಲ್ಲ.

ಗೃಹಿಣಿ ಮೀನಾಕ್ಷಿಯವರಿಗೆ ದೊಡ್ಡ ಸಮಸ್ಯೆ ಎನಿಸುತ್ತಿರುವುದು ರೇಷನ್. ಹಿಂದೆ ರೇಷನ್ ಕಾರ್ಡ್‌ನಲ್ಲಿ ಸಿಗುತ್ತಿದ್ದಷ್ಟು ರೇಷನ್ ಸಿಗುವುದಿಲ್ಲ ಅಂತ ಅವರ ಅಳಲು. ಗ್ಯಾಸ್ ಇದ್ದರೂ 2 ಲೀಟರ್ ಆದರೂ ಸೀಮೆ ಎಣ್ಣೆ ಕೊಡಬಾರದೇ ಎಂದು ಪ್ರಶ್ನಿಸುತ್ತಾರೆ ಅವರು.



ಪುಟ್ಟ ಅಂಗಡಿ ನಡೆಸುವ ವಿನೋದರಿಗೆ ಮಂಗಳೂರು ಮಹಾನಗರ ಪಾಲಿಕೆಯ ಆಸ್ತಿ ತೆರಿಗೆ ನೀತಿ ತಲೆ ನೋವಾಗಿದೆ. ಆಸ್ತಿ ತೆರಿಗೆಯನ್ನು ನಾವೆ ಎಲ್ಲಾ ತೀರ್ಮಾನಿಸುವುದು ಹೇಗೆ. ಪಾಲಿಕೆ ತೀರ್ಮಾನಿಸಿ ಸೂಚಿಸಬೇಕೆನ್ನುತ್ತಾರೆ. ಚಿತ್ರದಲ್ಲಿ ಮನೆ ಮುಂದಿನ ಕಟ್ಟೆಯ ಬಳಿ ಹೆಂಡತಿ ಮೊಮ್ಮಗಳೊಂದಿಗೆ ಕುಳಿತಿರುವ ವೃದ್ಧರು ಬಿ.ಸೀತಾರಾಮ ಕೊಟ್ಟಾರಿ. ಅವರು ಸಿಪಿಐ(ಎಂ) ಪಕ್ಷದ ವತಿಯಿಂದ 1972-78ರ ಅವಧಿಗೆ ಅವರು ಬಜಾಲ್ ಪಂಚಾಯ್ತಿಯ ಅಧ್ಯಕ್ಷರಾಗಿದ್ದವರು. ಆಗ ಕಾರ್ಮಿಕರಾಗಿದ್ದರು. ಈಗ ನಿವೃತ್ತರಾಗಿದ್ದಾರೆ. ಅವರ ಮಡದಿ ಹೇಮಾವತಿಯೂ ಬೀಡಿ ಕಾರ್ಮಿಕರು. ಅವರೂ ಸಿಪಿಐ(ಎಂ) ಕಾರ್ಯಕರ್ತೆ. ಈಗ ಇಬ್ಬರಿಗೂ ವಯಸ್ಸಾಗಿದೆ. ಸಂಸಾರ ದೊಡ್ಡದಾಗಿದೆ. ಬರುವ ವೃದ್ಧಾಪ್ಯವೇತನ ಸಾಲದು. ಬಿಪಿಎಲ್ ಕಾರ್ಡ್ ಇವರಿಗೆ ಸಿಕ್ಕಿಲ್ಲ. ಜೀವನಕ್ಕೆ ಸ್ವಲ್ಪ ತೊಂದರೆಯಾಗಿದೆ. ಅದನ್ನು ಹೇಳುವಾಗಲೇ ಕೋಮುವಾದಿ ಶಕ್ತಿಗಳನ್ನು ಸೋಲಿಸಬೇಕು ಎಂದೂ ಹೇಳುವುದನ್ನು ಅವರು ಮರೆಯುವುದಿಲ್ಲ. ಸಿಪಿಐ(ಎಂ)ನ ಸ್ವಾರ್ಥರಹಿತ, ಜನಪರ ರಾಜಕೀಯಕ್ಕಿದು ಒಂದು ಉದಾಹರಣೆ ಎಂದರೆ ತಪ್ಪೇನಲ್ಲ.

ನೆರೆಯ ಜಪ್ಪಿನ ಮೊಗರುವಿಗೆ ಹೋದರೆ ಅಲ್ಲೂ ಅದೇ ಸ್ಥಿತಿ. 65 ವರ್ಷದ ಬಡ ಮಹಿಳಾ ಗಿರಿಜಾಗೆ ತನ್ನ ಕುಸಿಯುತ್ತಿರುವ ಮನೆಯದೇ ಚಿಂತೆ. ಸಿಪಿಐ(ಎಂ) ಬಿಟ್ಟರೆ, ಇನ್ನೂ ಯಾರು ಬಂದಿಲ್ಲ. ರೇಷನ್ ಸಾಲುವುದಿಲ್ಲ. ಅದೇ. ಅದೇ ಅವರ ದೂರು. ಯಾವಾಗ ಬರುತ್ತದೋ ಯಾವಾಗ ರೇಷನ್ ಖಾಲಿಯಾಗುತ್ತದೋ? ಅವರಿಗೆ ಅಚ್ಚರಿ.

ಇವರಿಗೆ ರೇಷನ್ ಚಿಂತೆಯಿಲ್ಲ

ಇದೇ ಬಡ ಮುದುಕಿಯ ಗುಡಿಸಲು ಎದುರಿಗೆ ಒಂದು ದಿನಸಿ ಅಂಗಡಿ ನಡೆಸುತ್ತಿರುವವರು, ದೇವದಾಸಶೆಟ್ಟಿ. ರಾಜಕೀಯ ವಿಚಾರದಲ್ಲಿ ಚೆನ್ನಾಗಿ ನುರಿತವರೆಂದು ಕಾಣುತ್ತದೆ. ಮಾತನಾಡಿಸಿದ್ದೇ ತಡ ಬಿಜೆಪಿ ರಾಜ್ಯ ಸರ್ಕಾರದ 'ಸಾಧನೆ'ಗಳ ಪಟ್ಟಿಯನ್ನೇ ನಮ್ಮ ಮುಂದೆ ಇಟ್ಟು ಯಾಕೆ ಬಿಜೆಪಿಗೆ ಮತ ಹಾಕಬೇಕು ಅಂತ ದೊಡ್ಡದೊಂದು ಸಮರ್ಥನೆ ಕೊಟ್ಟರು. ಕಾಂಗ್ರೆಸ್‌ನವರಲ್ಲಿ ಹಿಂದೂಗಳ ಭಾವನೆಗೆ ಬೆಲೆ ಇಲ್ಲ. ಮುಸ್ಲಿಮರ ಬಗ್ಗೆ ಮಾತ್ರ ಅವರ ಕಾಳಜಿ ಅಂತ ಕೋಮುವಾದಿ ಹಾವನ್ನು ಬುಟ್ಟಿಯಿಂದ ಹೊರತೆಗೆಯಲು ಆತ ಮರೆಯಲಿಲ್ಲ. ಮಹಿಳೆಯ ಮೇಲೆ ದಾಳಿ ಮಾಡಿದ್ದರ ಬಗ್ಗೆ ಕೇಳಿದರೆ 'ಮಹಿಳೆಯರು ಪಬ್ ಹೋಗುವುದು ಹಿಂದೂ ಸಂಸ್ಕೃತಿಯಾ'? ಎಂದ ಅವರು ಪಬ್‌ಗೆ ಹೋಗುವ ಮಹಿಳೆಯರನ್ನು ಹೊಡೆದರೂ ತಪ್ಪೇನಿಲ್ಲ ಅನ್ನುತ್ತಾರೆ. ಚರ್ಚ್ ಮೇಲೆ ದಾಳಿ ನಡೆದಿಲ್ಲ ಅದೆಲ್ಲಾ ಪೇಪರ್, ಟಿ.ವಿ.ಗಳ ಸೃಷ್ಟಿ ಎನ್ನುತ್ತಾರೆ ಅವರು.

ಆಶ್ಚರ್ಯ ಎಂದರೆ ನಾವು ಭೇಟಿ ಮಾಡಿದ ಸಾಮಾನ್ಯ ಜನರೆಲ್ಲರೂ ರೇಷನ್ ನೀರು, ರಸ್ತೆ ಸಮಸ್ಯೆಗಳ ಬಗೆಗೆ ಮಾತನಾಡಿದರೆ ದೇವದಾಸ ಶೆಟ್ಟಿರ ಬಳಿ ಬರೀ ಸಾಧನೆಗಳ ಪಟ್ಟಿ ಮಾತ್ರ ಇದೆ. ಒಂದೂ ಸಮಸ್ಯೆಗಳಿಲ್ಲ!!!

ಪಾಂಡೇಶ್ವರರ : ಟೀಚರ್ ಸ್ಪಷ್ಟ ಖಂಡನೆ

ಪಾಂಡೇಶ್ವರ ಮಂಗಳೂರು ನಗರ ಮತ್ತೊಂದು ಬಡಾವಣೆ. ಪಬ್‌ನಲ್ಲಿ ಮಹಿಳೆಯರ ಮೇಲೆ ನಡೆದ ದಾಳಿಯ ಬಗೆಗೆ ಇಲ್ಲಿನ ಮಹಿಳೆ-ಟೀಚರ್ ಒಬ್ಬರನ್ನು ಕೇಳಿದಾಗ ಸ್ಪಷ್ಟವಾಗಿ ಅವರು ಹೇಳಿದರು.

'ಮನುಷ್ಯ ಆದವರಿಗೆ ತನ್ನದೊಂದು ಇಷ್ಟ ಎನ್ನುವುದು ಇರುತ್ತದಲ್ಲ. ಬೇರೆಯವರ ಮೇಲೆ ದಾಳಿ ಮಾಡುವುದು ತಪ್ಪು.'


'ಎಲ್ಲ ಧರ್ಮಗಳು ಸಮಾನ. ಯಾವ ಧರ್ಮದವರ ಮೇಲಾಗಲಿ ದಾಳಿ ಮಾಡುವುದು ತಪ್ಪು' ಎಂದು ಕಡ್ಡಿ ಮುರಿದಂತೆ ಹೇಳಿದ ಅವರು ಆಹಾರ, ಉಡುಮ, ಸಂಸ್ಕೃತಿ ಅವರವರ ಇಷ್ಟ. ಎಷ್ಟೋ ಜನ ಬ್ರಾಹ್ಮಣರು ಎಲ್ಲ(ಮಾಂಸಾಹಾರ) ತಿನ್ನುತ್ತಾರೆ. ಅದೆಲ್ಲಾ ಅವರವರ ಇಷ್ಟ. ದಾಳಿ ಮಾಡುವವರಿಗೆ ಸಂಸ್ಕೃತಿ ಇಲ್ಲ ಎಂದು ತೀರ್ಪು ಕೊಟ್ಟರು.

ನಂದಾ ಇದೇ ಪಾಂಡೇಶ್ವರದ ಮಧ್ಯ ವಯಸ್ಕ ಗೃಹಿಣಿ. ಅವರು ಸ್ವಲ್ಪ ಸಂಕೋಚದಿಂದಲೇ ಮಾತನಾಡುತ್ತಾ ಹೋದರು. ಧರ್ಮ, ಸಂಸ್ಕೃತಿ ಅಂತ ಜೋರು

ಪುಟ 13 ನೋಡಿ

ಯಾರು ಹಿತವರು ನಿಮಗೆ?

ಲೋಕಸಭಾ ಚುನಾವಣೆಯಲ್ಲಿ ಪಕ್ಷಗಳ ನೀತಿ, ಸಿದ್ಧಾಂತ, ಪ್ರಣಾಳಿಕೆ, ಬಹುಮುಖ್ಯವಾದ ಅಂಶ. ಅದರ ಜೊತೆಗೆ ಅಭ್ಯರ್ಥಿಗಳ ಕಾರ್ಯದಕ್ಷತೆ, ಜನರ ಸ್ಪಂದಿಸುವ ಮನೋಭಾವ, ಜನಪರ ಹೋರಾಟದ ಬದ್ಧತೆ ಇವುಗಳು ಕೂಡ ಮಹತ್ತರ ವಿಷಯ.


ಬಿ.ಮಾಧವ


ದಕ್ಷಿಣ ಕನ್ನಡ ಕ್ಷೇತ್ರದಲ್ಲಿ ಮುಖ್ಯವಾಗಿ ಮೂವರು ಅಭ್ಯರ್ಥಿಗಳು ಎದ್ದು ಕಾಣುತ್ತಾರೆ. ಸಿಪಿಐ(ಎಂ) ಪಕ್ಷದ ಬಿ.ಮಾಧವ. ಕಾಂಗ್ರೆಸ್ ಪಕ್ಷದ ಬಿ.ಜನಾರ್ಧನ ಪೂಜಾರಿ, ಬಿಜೆಪಿಯ ನಳೀನ್‌ಕುಮಾರ್ ಕಟೀಲು.

ಸಮೃದ್ಧ-ಸೌಹಾರ್ದ-ಸುರಕ್ಷಿತ ದಕ್ಷಿಣ ಕನ್ನಡ ಎಂಬುದು ತೃತೀಯ ರಂಗದ ಘೋಷಣೆ. ಬಿ.ಮಾಧವ ಅವರಂತೂ ದುಡಿಯುವ ವರ್ಗದ ಮುಖಂಡರು. ಕರ್ನಾಟಕ ರಾಜ್ಯದ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕ ವರ್ಗಕ್ಕಾಗಿ ಅವರು ಅವಿಶ್ರಾಂತವಾಗಿ ಶ್ರಮಿಸುತ್ತಿರುವವರು. ಸಿಪಿಐ(ಎಂ)ನ ಮುಖಂಡರು. ಜಿಲ್ಲೆಯ ಹಲವಾರು ಜನಪರ ಚಳುವಳಿಗಳಿಗೆ ನೇತೃತ್ವ ಕೊಟ್ಟವರು.

ಬೀಡಿ ಉದ್ದಿಮೆ ದಕ್ಷಿಣ ಕನ್ನಡದ ಒಂದು ಪ್ರಮುಖ ಉದ್ದಿಮೆ. ಸುಮಾರು 4 ಲಕ್ಷ ಬೀಡಿ ಕಾರ್ಮಿಕರು ಜಿಲ್ಲೆಯಲ್ಲಿದ್ದಾರೆ. ನ್ಯಾಯಬದ್ಧವಾದ ಕೂಲಿ, ತುಟ್ಟಿಭತ್ಯೆ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ, ದುಡಿಯುವ ಕಾರ್ಮಿಕರಿಗೆ ಕಾರ್ಮಿಕ ಸೌಲಭ್ಯ ಇತ್ಯಾದಿಗಳು ಸಿಗಬೇಕೆಂಬ ಹೋರಾಟದಲ್ಲಿ ಸದಾ ಮುಂಚೂಣಿಯಲ್ಲಿದ್ದಾರೆ ಬಿ.ಮಾಧವ, ಬೀಡಿ ಕಾರ್ಮಿಕರ ಅಖಿಲ ಭಾರತ ಒಕ್ಕೂಟದ ಉಪಾಧ್ಯಕ್ಷರೂ, ರಾಜ್ಯ ಒಕ್ಕೂಟದ ಅಧ್ಯಕ್ಷರೂ ಆಗಿದ್ದಾರೆ.


ಕಾರ್ಮಿಕ ವರ್ಗದ ಮೇಲಿನ ನಿರಂತರ ಶೋಷಣೆ, ಸುಲಿಗೆ, ದಮನ ವಿರುದ್ಧ ಹೋರಾಟ ನಿರತವಾದ ಸಿಐಟಿಯು ಸಂಘಟನೆಯ ರಾಜ್ಯ ಅಧ್ಯಕ್ಷರಾಗಿದ್ದಾರೆ. ವಿಮಾನ ಕಾರ್ಮಿಕರ ಮುಖಂಡರಾಗಿದ್ದವರು. ರೈತ, ಕೂಲಿಕಾರರ, ಕಾರ್ಮಿಕ, ನೌಕರ, ವಿದ್ಯಾರ್ಥಿ ಯುಜನ ಮಹಿಳಾ ಸಂಘಟನೆಗಳ ಇತ್ಯಾದಿ ಸಂಘಟನೆಗಳನ್ನೊಳಗೊಂಡ ದ.ಕ.ಜಿಲ್ಲೆ ಸಾಮೂಹಿಕ ಸಂಘಟನೆಗಳ ವೇದಿಕೆಗೆ ಸಂಚಾಲಕರಾಗಿರುವ ಬಿ.ಮಾಧವ ದಕ್ಷಿಣ ಕನ್ನಡ ಜಿಲ್ಲೆ ಜನಪರ ಚಳುವಳಿಗಳ ಬೆನ್ನೆಲುಬಾಗಿ ನಿಂತಿದ್ದಾರೆ.

ಲೋಕಸಭೆಯಲ್ಲಿ ಜನರ ಧ್ವನಿ ಮೊಳಗಿಸಲು ಮತ್ತೇನು ಅರ್ಹತೆ ಬೇಕು. ಇದು ಸಾಲದೆಂದು ಹಲವು ಭಾಷೆಗಳ ಮೇಲೆ ಹಿಡಿತ, ಸಾಹಿತ್ಯ, ಸಾಂಸ್ಕೃತಿಕ ಚಳುವಳಿ ಪರಿಶ್ರಮವೂ ಇದೆ. ಸ್ವತಃ ಉತ್ತಮ ವಾಗ್ಮಿ ಬರಹಗಾರರೂ ಆಗಿದ್ದಾರೆ. ಇತ್ತೀಚಿನ ಉಡುಪಿ ಸಾಹಿತ್ಯ ಸಮ್ಮೇಳನದಲ್ಲಿ ಅವರು ಮಂಡಿಸಿದ ಕರಾವಳಿಯ ಇತ್ತೀಚಿನ ಸಾಮಾಜಿಕ ಸ್ಥಿತ್ಯಂತರಗಳು ಪ್ರಬಂಧ ವ್ಯಾಪಕ ಮೆಚ್ಚುಗೆಗೆ ಪಾತ್ರವಾಗಿದೆ.


ನಳೀನ್ ಕುಮಾರ್ ಕಟೀಲು

ಯಾರು ಈ ನಳಿನ್ ಕುಮಾರ್ ಕಟೀಲ್ಬು?

ಹೀಗೆ ದಕ್ಷಿಣ ಕನ್ನಡ ಜಿಲ್ಲೆಯ ಜನ ಸಾಮಾನ್ಯರನ್ನು ಕೇಳಿದರೆ ಅವರ ಬಗ್ಗೆ ಅಷ್ಟು ಗೊತ್ತಿಲ್ಲ ಎಂಬ ಉತ್ತರ ಬರುವುದು ಸಾಮಾನ್ಯ. ಪಾಪ ಜನಕ್ಕೆ ಹೇಗೆ ಗೊತ್ತಾಗಬೇಕು. ಅವರೇನು ಬೀಡಿ ಕಾರ್ಮಿಕರಿಗೆ 10 ವರ್ಷ ಬಾಕಿ ತುಟ್ಟಿ ಭತ್ಯೆ ಕೊಡಿಸಲು ಓಡಾಡಿದ್ದರೇ? ಕಟ್ಟಡ ಕಾರ್ಮಿಕರ ಜೀವನ ಭದ್ರತೆಗಾಗಿ ಏನಾದರೂ ದುಡಿದವರೇ? ಕುಡಿಯುವ ನೀರಿನ ಶುಲ್ಕ ಹೆಚ್ಚಾಯಿತೆಂದು ಹೋರಾಟ ನಡೆಸಿದವರ ಮೇಲೆ ಬಿಜೆಪಿ ಸರ್ಕಾರದ ಪೋಲೀಸರು ಬೀಸಿದ ಲಾಠಿ ಏಟಿನ ಸವಿಯುನ್ನು ಮೆದ್ದವರೇ? ಇಲ್ಲಾ ಕರಾವಳಿಯ ಸೌಹಾರ್ದ ಸಂಸ್ಕೃತಿ ಉಳಿಯಲಿ ಅಂತ ಮಾನವ ಸರಪಳಿ ರಚಿಸಿದವರೊಂದಿಗೆ ಕೈ ಜೋಡಿಸಿದ್ದಾರೆಯೇ? ಉಹುಂ, ಬಿಜೆಪಿಯ ಕಟೀಲು ಅವರ ಅರ್ಹತೆಯೇನು? ಬಿಜೆಪಿಯ ಕರಪತ್ರವೇ ಸಾರುತ್ತಿರುವಂತೆ 'ಧಾರ್ಮಿಕ ಕ್ಷೇತ್ರಗಳ ಬ್ರಹ್ಮಕಲಶ ಕೈಂಕರ್ಯದ ಜವಾಬ್ದಾರಿ' ನಿರ್ವಹಿಸಿರುವುದೇ ಅವರ ಮಹಾನ್ ಸಾಧನೆ.


ಜನಾರ್ಧನ ಪೂಜಾರಿ

ಕರ್ನಾಟಕದ ಕರಾವಳಿಯಲ್ಲಿ ಹಿಂದುಳಿದ, ದಲಿತ ಶೂದ್ರ ಜನರ ಮನಸ್ಸಿನಲ್ಲಿ ಮೇಲು ಕೀಳು ಎಂಬ ದುಷ್ಟ ಜಾತಿ ಪದ್ಧತಿಯನ್ನು ಬಲಪಡಿಸುವ ಹಾಗೂ ಎಲ್ಲಾ ಬುಡಕಟ್ಟು ಜನರ, ಕೃಷಿಕರ, ಶೂದ್ರರ ಆಚರಣೆಗಳನ್ನು ಬ್ರಾಹ್ಮಣೀಕರಿಸುವ ವ್ಯವಸ್ಥಿತ ಆರೆಸ್ಸೆಸ್, ಬಿಜೆಪಿಗಳ ಯೋಜನೆಯು ಸದ್ಯ ಕಾರ್ಯಾಚರಣೆಯಲ್ಲಿದೆ. ಸಿಕ್ಕ, ಸಿಕ್ಕ ಗುಡಿಗುಂಡಾರಗಳಲ್ಲಿ ಬ್ರಹ್ಮಕಳಶೋತ್ಸವದ ಹೆಸರಿನಲ್ಲಿ ಲಕ್ಷಾಂತರ, ಕೋಟ್ಯಾಂತರ ರೂಪಾಯಿ ಸಂಗ್ರಹಿಸುವುದು, ಧಾರ್ಮಿಕತೆ ಹೆಸರಿನಲ್ಲಿ ಅಸಹ್ಯಕರ ಅದ್ದೂರಿತನ ಮೆರೆಸುವುದು. ಇದರ ಹೆಸರಿನಲ್ಲಿ ದುಂದು ವೆಚ್ಚ ಮಾಡಿ ಜನರ ಮನಸ್ಸಿನಲ್ಲಿ ಕೋಮು ವಿಷ ತುಂಬುವುದೇ ಆ ಯೋಜನೆ. ಇಂಥ ಕಾರ್ಯಾಚರಣೆಗೆ ಚಪ್ಪರ ಹಾಕಿಸುವ ಗುತ್ತಿಗೆ ವಹಿಸಿಕೊಳ್ಳುವುದು, ಊಟ ಒದಗಿಸುವ ಕಾಂಟ್ರಾಕ್ಟ್ ಪಡೆದುಕೊಳ್ಳುವುದು ಭಾರಿ ಲಾಭದಾಯಕವಾದ ಕೆಲಸವೇ.

ನಳಿನ್‌ಕುಮಾರ್ ಕಟೀಲರ ಸಾಧನೆ ಇದೊಂದೇ. ಬ್ರಹ್ಮಕಳಶೋತ್ಸವಗಳಲ್ಲಿ ಇಂತಹ ಕಾಂಟ್ರಾಕ್ಟ್ ವಹಿಸಿಕೊಂಡಿದ್ದೆ ಅವರ ಸಾಧನೆ.

ಕಟೀಲರು ಬಿಜೆಪಿ ಅಭ್ಯರ್ಥಿಯಲ್ಲ, ಆರೆಸ್ಸೆಸ್‌ನ ಅಭ್ಯರ್ಥಿ ಎಂದು ಬಲ್ಲವರು ಹೇಳುತ್ತಾರೆ. ದ.ಕನ್ನಡ ಕ್ಷೇತ್ರದಲ್ಲಿ ಈ ಬಾರಿ ಅಭ್ಯರ್ಥಿ ಆಯ್ಕೆ ಹಕ್ಕನ್ನು ಬಿಜೆಪಿಯಿಂದ ಕಸಿದುಕೊಳ್ಳಲಾಗಿದೆಯಂತೆ.

ಇನ್ನು ಕಾಂಗ್ರೆಸ್‌ನ ಜನಾರ್ಧನ ಪೂಜಾರಿಯವರ ಬಗ್ಗೆ ಹೇಳುವುದೇನು? ಅವ[ರ] ವಾಗ್ಝರಿ, ಮಾತಿನ ಬಾಣಗಳ ಸವಿ ಬಲ್ಲವರೇ ಬಲ್ಲರು. ಮಾತು ಒಂದೆಡೆ ಇರಲಿ, ದಕ್ಷಿಣ ಕನ್ನಡದ ಜನ ಕಷ್ಟದಲ್ಲಿದ್ದಾಗ ಇವರೆಲ್ಲಿದ್ದರು? ಚರ್ಚುಗಳ ಮೇಲೆ ದಾಳಿ ನಡೆದಾಗ, ಮಹಿಳೆಯರನ್ನು ಅಟ್ಟಾಡಿಸಿ ಗೂಂಡಾ ಪಡೆ ಬಡಿದಾಗ, ಕರಾವಳಿಯಲ್ಲಿ ದಿನದಿನವೂ ಮುಸ್ಲಿಂ, ಅಲ್ಪಸಂಖ್ಯಾತರನ್ನು ಹಿಂಸಿಸುವುದನ್ನೇ ಸಂಘ ಪರಿವಾರ ತನ್ನ ಪ್ರಧಾನ 'ವೃತ್ತಿ' ಮಾಡಿಕೊಂಡಿರುವಾಗ ನಾಲ್ಕು ಬಾರಿ ಈ ಕ್ಷೇತ್ರದಿಂದ ಲೋಕಸಭಾ ಸದಸ್ಯರಾಗಿದ್ದ ಜನಾರ್ಧನ ಪೂಜಾರಿ ಎಲ್ಲಿದ್ದರು ಎಂದು ಜನರು ಪ್ರಶ್ನಿಸುತ್ತಿದ್ದಾರೆ.

ಕುಡಿಯುವ ನೀರಿನ ದರ ಏರಿದಾಗ, ಜನ ಸ್ವಯಂ ಘೋಷಿತ ಆಸ್ತಿ ತೆರಿಗೆ ಎಂಬ ಇಕ್ಕಳದಲ್ಲಿ ಒದ್ದಾಡುತ್ತಿರುವ ಕಾಂಗ್ರೆಸ್ ಪಕ್ಷವಾಗಲೀ ಅಥವಾ ಜನಾರ್ಧನ ಪೂಜಾರಿಯವರ[ು] ಮಾಡಿದ್ದೇನು ಎಂಬುದು ಕ್ಷೇತ್ರಕ್ಕೆ ಗೊತ್ತಿದೆ.

ನೈಜ ರಾಜಕೀಯ ಚರ್ಚೆಗೆ.....

ಪುಟ 9 ರಿಂದ


ಕಂಕನಾಡಿ, ಅಳಪೆ ದಕ್ಷಿಣ, ಶಕ್ತಿ ನಗರ, ಕಣ್ಣನೂರು, ಕುಲಶೇಖರಗಳಲ್ಲಿ ಸಮಿತಿ ರಚನೆಯಾಗಿದೆ. ಮನೆ ಮನೆ ಪ್ರಚಾರನಡೆದಿದೆ. ಏಪ್ರಿಲ್ 12 ರಂದು 20 ತಂಡಗಳು ಮನೆ ಮನೆ ಪ್ರಚಾರ ನಡೆಸಿದ್ದಾರೆ. ಪ್ರತಿದಿನ ಹತ್ತಾರು ತಂಡಗಳು ಇಲ್ಲಿ ಮನೆ ಮನೆಗೆ ತೆರಳಿ ಪ್ರಚಾರ ನಡೆಸುತ್ತಿವೆ. ಬೀಡಿ ಕಾರ್ಮಿಕರ ಪ್ರಶ್ನೆ, ಮಂಗಳೂರು - ಬೆಂಗಳೂರು ನಡುವೆ ಹಗಲು ರೈಲು, ರೈತರ ಪ್ರಶ್ನೆ, ಎಸ್‌ಇಜೆಡ್ ಎಲ್ಲವೂ ಇಲ್ಲಿ ಚರ್ಚೆಯ ವಿಷಯಗಳಾಗಿವೆ. ಕಾರ್ಯಕರ್ತರು ಈ ಕುರಿತು ಜನರೊಂದಿಗೆ ಚರ್ಚಿಸಲು ಪ್ರಯತ್ನಿಸುತ್ತಿದ್ದಾರೆ. ಚರ್ಚ್‌ಗಳ ಮೇಲಿನ ದಾಳಿ, ಮಂಜೇಶ್ವರದ ಸಿಪಿಐ(ಎಂ) ಶಾಸಕರ ಪುತ್ರಿ ಮತ್ತು ಆಕೆಯ ಸಹಪಾಠಿಯ ಮೇಲೆ ಹಲ್ಲೆ, ಅಣು ಒಪ್ಪಂದ ಎಲ್ಲವೂ ಇಲ್ಲಿ ಚರ್ಚೆಗೆ ಬರುತ್ತವೆ.

2003 ರಲ್ಲಿ ಕಾಂಗ್ರೆಸ್‌ನ ಜಿಲ್ಲಾ ಮುಖಂಡರು ಮಂಗಳೂರು ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರಾದ ಎಂ.ಡಿ. ಅಬ್ದುಲ್ ಜಬ್ಬಾರ್ ಅವರನ್ನು ಭಜರಂಗ ದಳದವರು ಕಾಂಗ್ರೆಸ್ ಕಛೇರಿ ಎದುರಿಗೆ ಕೊಲೆ ಮಾಡಿದರೂ ಏನೂ ಮಾಡಲಿಲ್ಲ. ಅದನ್ನು ಪ್ರತಿಭಟಿಸಿದ್ದು ಡಿವೈಎಫ್‌ಐ.

ಮಂಗಳೂರು ತಾಲಿಬಾನೀಕರಣವಾಗುತ್ತಿದೆ ಎಂಬ ಕೇಂದ್ರ ಕಾಂಗ್ರೆಸ್ ಮಂತ್ರಿ ರೇಣುಕಾ ಚೌಧರಿ ವಿರುದ್ಧ ಮಂಗಳೂರಿನ ಹಿಂದೂ ತಾಲೀಬಾನರು ಏನೆಲ್ಲಾ ದಾಳಿ ನಡೆಸಿದರು. ಉಹೂಂ ಕಾಂಗ್ರೆಸ್‌ನವರು ಆ ಬಗ್ಗೆ ಏನೊಂದು ಮಾಡಲಿಲ್ಲ. ಮಂಗಳೂರಿನ ಸೌಹಾರ್ದತೆಗೆ ಧಕ್ಕೆ ಬಂದಾಗೆಲ್ಲಾ ಬೀದಿಗೆ ಬಂದಿದ್ದು ಸಿಪಿಐ(ಎಂ) ಮತ್ತು ಡಿವೈಎಫ್‌ಐ ಮುಂತಾದ ಸಂಘಟನೆಗಳು. ಈ ಎಲ್ಲವನ್ನೂ ಕಾರ್ಯಕರ್ತರು, ಮನೆ ಮನೆಗೆ ತೆರಳಿ ವಿವರಿಸುತ್ತಿದ್ದಾರೆ.


ಕಾಂಗ್ರೆಸ್-ಬಿಜೆಪಿ ಒಂದೇ ನಾಣ್ಯದ ಎರಡುಮುಖಗಳು ತೃತೀಯರಂಗ ಬೆಳೆಯಬೇಕು

'ಕಾಂಗ್ರೆಸ್ ಬಿಜೆಪಿ ಯಾರೇ ಬಂದರೂ ಅಲ್ಪಸಂಖ್ಯಾತರಿಗೆ ಸಮಸ್ಯೆ. ಬಿಜೆಪಿ ಹಿಂದುತ್ವದ ಆಧಾರದಲ್ಲಿ ಓಟು ಕೇಳುತ್ತಿದೆ. ಕಾಂಗ್ರೆಸ್ ಅಲ್ಪಸಂಖ್ಯಾತರಿಗೆ ರಕ್ಷಣೆ ಹೆಸರಿನಲ್ಲಿ ಓಟು ಕೇಳುತ್ತಿದೆ. ಇವರು (ಕಾಂಗ್ರೆಸ್‌ನವರು) ಎಲ್ಲಿ ರಕ್ಷಣೆ ಕೊಟ್ಟಿದ್ದಾರೆ. ಕಾಂಗ್ರೆಸ್, ಬಿಜೆಪಿ ಒಂದೇ ನಾಣ್ಯದ ಎರಡೂ ಮುಖ, ಏನೂ ವ್ಯತ್ಯಾಸವಿಲ್ಲ. ತೃತೀಯರಂಗ ಬೆಳೆಯಬೇಕು. ಅದಕ್ಕೆ ತುಂಬಾ ಶ್ರಮಬೇಕು. ಕಾಂಗ್ರೆಸ್‌ನವರು ಬಿಡುವುದಿಲ್ಲ. ಅಲ್ಪಸಂಖ್ಯಾತರ ಬಗ್ಗೆ ಹಿಂದೂಗಳಲ್ಲಿ ಭೀತಿ ಹುಟ್ಟಿಸಿ ಬಿಜೆಪಿಯವರು ಹಿಂದೂಗಳ ಓಟು ಪಡೆಯಲು ಪ್ರಯತ್ನಿಸುತ್ತಾರೆ. ಅದೇ ರೀತಿ ಹಿಂದುತ್ವವಾದಿಗಳ ಬಗೆಗೆ ಹೆದರಿಸಿ ಕಾಂಗ್ರೆಸ್ ಅಲ್ಪಸಂಖ್ಯಾತರ ಓಟು ಪಡೆಯಲು ಹವಣಿಸುತ್ತಿದೆ.



ಸಿಪಿಐ(ಎಂ) ಅಭ್ಯರ್ಥಿ ಒಳ್ಳೆಯ ಅಭ್ಯರ್ಥಿ. ಅವರನ್ನು ಎಲ್ಲರೂ ಬೆಂಬಲಿಸಬೇಕು. ಅಲ್ಪಸಂಖ್ಯಾತರಲ್ಲಿ ಶಿಕ್ಷಣ ತುಂಬಾ ಕೊರತೆ ಇದೆ. ಅವರಿಗೆ ಶಿಕ್ಷಣ ಸಿಗಬೇಕು

– ಅಬ್ದುಲ್ ಹಮೀದ್,
ಮಟ್ಟಿ ಹೋಟೆಲ್ ಮಾಲೀಕರು, ತೊಕ್ಕೊಟ್ಟು



ಮಂಗಳೂರಿನಲ್ಲಿ ಮೂರನೇ ರಂಗದ ರ‍್ಯಾಲಿ

ತೃತೀಯ ಪರ್ಯಾಯದ ಪಕ್ಷಗಳು ಇತ್ತೀಚೆಗೆ ಮಂಗಳೂರಿನಲ್ಲಿ ಏರ್ಪಡಿಸಿದ್ದ ಬೃಹತ್ ರ‍್ಯಾಲಿಯ ವರದಿ

ಏಪ್ರಿಲ್ 11, 2009 ಮಂಗಳೂರಿನ ಪಾಲಿಗೆ ಒಂದು ಅಪೂರ್ವ ದಿನ. ಪ್ರಚಲಿತ ರಾಜಕೀಯರಂಗದ ಹಲವು ಮಹಾನ್ ದಿಗ್ಗಜರು ಒಂದೇ ವೇದಿಕೆಯಲ್ಲಿ ಒಂದು ಗೂಡಿದ್ದು ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರ ಚುನಾವಣಾ ಪ್ರಕ್ರಿಯೆಗೆ ಮಿಂಚಿನ ಸಂಚಲನ ನೀಡಿತು. ತೃತೀಯರಂಗವನ್ನು ಕೆಲವೇ ದಿನಗಳ ಹಿಂದೆ ಹುಟ್ಟು ಹಾಕಿದ ನೇತಾರರಾದ ಸಿಪಿಐ(ಎಂ)ನ ಪ್ರಕಾಶ್ ಕಾರಟ್ ಮತ್ತು ಜಾತ್ಯಾತೀತ ಜನತಾದಳದ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡರು, ಇತರ ಹಲವರು ಕ್ಷೇತ್ರದ ತೃತೀಯರಂಗದ ಅಭ್ಯರ್ಥಿ ಸಿಪಿಐ(ಎಂ) ನಾಯಕ ಬಿ.ಮಾಧವರವರ ಚುನಾವಣಾ ಪ್ರಚಾರಕ್ಕೆ ಸ್ಫೂರ್ತಿಯುತ ಚಾಲನೆ ನೀಡಿದರು.

ಮಂಗಳೂರಿನ ನೆಹರೂ ಮೈದಾನದಲ್ಲಿ ನಿರ್ಮಿಸಲಾಗಿದ್ದ ಆಕರ್ಷಕ ವೇದಿಕೆಯಿಂದ ಜಿಲ್ಲೆಯ ಮೂಲೆ ಮೂಲೆಗಳಿಂದ ಬಂದು ಕಿಕ್ಕಿರಿದು ಸೇರಿದ್ದ ಜನ ಸಮುದಾಯವನ್ನು ಉದ್ದೇಶಿಸಿ ಹುರುಪು ತುಂಬಿದರು.

ಕಾಂಗ್ರೆಸ್‌ರಹಿತ ಜಾತ್ಯಾತೀತ ಶಕ್ತಿ

ಭಾಷಣ ಮಾಡಿದ ಮುಖಂಡರು ದೇಶಕ್ಕೆ ಕಾಂಗ್ರೆಸ್ ರಹಿತ ಪರ್ಯಾಯ ಜಾತ್ಯಾತೀತ ಪಕ್ಷಗಳ ಅಗತ್ಯವಿದೆ. ಬಿಜೆಪಿಯು ಕೋಮುವಾದ, ಮೂಲಭೂತದಲ್ಲಿ ತೊಡಗಿದ್ದರೆ ಕಾಂಗ್ರೆಸ್ ಕೋಮುವಾದದ ವಿರುದ್ಧ ಹೋರಾಡದೆ ಮೃದು ಧೋರಣೆತಾಳಿದೆ. ಒರಿಸ್ಸಾ, ಕರ್ನಾಟಕ ಮುಂತಾದೆಡೆ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆಸಲಾಗಿದ್ದು, ಇದನ್ನು ಭಜರಂಗದಳವೇ ಮಾಡಿದ್ದಾಗಿ ಘೋಷಿಸಿಕೊಂಡಾಗ ಆ ಸಂಘಟನೆಯನ್ನು ನಿಷೇಧಿಸಲು ಎಡಪಕ್ಷಗಳು ಒತ್ತಾಯಿಸಿದಾಗಲೂ ಯುಪಿಎ ಸರ್ಕಾರ ಬೆಲೆ ಕೊಡಲಿಲ್ಲ.

ಕನಿಷ್ಠ ಸಾಮಾನ್ಯ ಕಾರ್ಯಕ್ರಮವನ್ನು ಜಾರಿಗೊಳಿಸದೆ ಕಾಂಗ್ರೆಸ್ ಮೋಸವೆಸಗಿತು. ಜನಪರವಾಗಿ ಕೆಲಸ ಮಾಡುವಂತೆ ನೀಡಿದ ಬೆಂಬಲಕ್ಕೆ ಅದು ದ್ರೋಹ ಬಗೆಯಿತು. ಬದಲಾಗಿ ಅಣು ಒಪ್ಪಂದಕ್ಕೆ ಅಮೇರಿಕಾದೊಂದಿಗೆ ಕೈ ಜೋಡಿಸಿ, ಅದರ ಕೈಗೊಂಬೆಯಾಗಿ ದೇಶವನ್ನೇ ಒತ್ತೆಯಿಟ್ಟಿತು. ದೇಶದ ಮೇಲೆ ಇದು ಕೆಟ್ಟ ಪರಿಣಾಮ ಬೀರಲಿದೆ ಎಂದು ಸಿಪಿಐ(ಎಂ) ಯುಪಿಎ ಸರ್ಕಾರಕ್ಕೆ ಬೆಂಬಲ ಹಿಂತೆಗೆದುಕೊಂಡಿತು.

ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳು ಪೋಲೀಸರನ್ನೇ ಕೋಮುವಾದಿ ಗಳನ್ನಾಗಿಸಿದೆ. ಮಂಗಳೂರು ನಗರದಲ್ಲಿ ಅಲ್ಪಸಂಖ್ಯಾತರಿಗೆ ರಕ್ಷಣೆಯಿಲ್ಲದಂತಾಗಿದೆ.

ಕಾಂಗ್ರೆಸ್ ಮತ್ತು ಬಿಜೆಪಿ ಹೊರತುಪಡಿಸಿದ ಜಾತ್ಯಾತೀತ ಸರ್ಕಾರ ರಚಿಸುವುದು ತೃತೀಯ ರಂಗದ ಉದ್ದೇಶ. ಕೇವಲ ನಾಯಕರಿಗೆ ಮಾತ್ರ ತೃತೀಯರಂಗದ ಅಗತ್ಯವಿಲ್ಲ. ದೇಶದ ಎಲ್ಲಾ ಜನರ ಅಗತ್ಯವೂ ಆಗಿದೆ ಎಂದು ಅವರು ಹೇಳಿದರು.

ರಾಷ್ಟ್ರೀಯ ಏಕತೆಗೆ ಹಾನಿ

ದೇವೇಗೌಡರು ಮಾತನಾಡಿ ದೇಶದಾದ್ಯಂತ ಬಿಜೆಪಿ ಹಾಗೂ ಸಂಘ ಪರಿವಾರದ ಕಾರ್ಯಕ್ರಮಗಳಿಂದ ರಾಷ್ಟ್ರೀಯ ಏಕತೆಗೆ ಸ್ವರೂಪಕ್ಕೆ ಹಾನಿಯಾಗುತ್ತಿದೆ. ಬಿಜೆಪಿಯ ಹಿಂದುತ್ವವಾದದಿಂದ ದೇಶ ನುಚ್ಚುನುರಾಗಿದೆ. ರಾಜಕೀಯ ಲಾಭಕ್ಕಾಗಿ ಬಿಜೆಪಿ ಪ್ರತ್ಯೇಕವಾದಕ್ಕೆ ಜೋತುಬಿದ್ದಿದೆ. ತೃತೀಯ ರಂಗದ ಬಗ್ಗೆ ಲಘುವಾಗಿ ಮಾತನಾಡುವ ರಾಜಕೀಯ ಪಕ್ಷಗಳಿಗೆ ಚುನಾವಣಾ ಫಲಿತಾಂಶ ಸರಿಯಾದ ಉತ್ತರ ನೀಡಲಿದೆ. ಕಾಂಗ್ರೆಸ್ ನೇತೃತ್ವದ ಸರ್ಕಾರದ ತಪ್ಪಾದ ನೀತಿಯಿಂದ ದೇಶ ಆರ್ಥಿಕ ದಿವಾಳಿಯತ್ತ ಸಾಗಿದೆ ಎಂದು ಆರೋಪಿಸಿದರು.


ಕಸಾಯಿಖಾನೆ ರಾಜಕೀಯ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಡಾ॥ ಸಿದ್ದನಗೌಡ ಪಾಟೀಲ್‌ರವರು ಮಾತನಾಡಿ, ಕೈ ಕಡಿಎನ್ನುವ ಕಾಗೋಡು ತಿಮ್ಮಪ್ಪ, ತಲೆ ಕತ್ತರಿಸಬೇಕು ಎನ್ನುವ ರೇಣುಕಾಚಾರ್ಯ, [illegible] ಮಾಡ ಹೊರಟಿರುವ ಸಿ.ಟಿ.ರವಿಯವರು ರಾಜಕೀಯ ಎಂದರೆ ಕಸಾಯಿಖಾನೆ ಎಂದು ತಿಳಿದುಕೊಂಡಿದ್ದಾರೆ ಎಂದು ಖಾರವಾಗಿ ಪ್ರತಿಕ್ರಿಯಿಸಿದರು.

ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಕಾಂ. ಕೆ.ವರದರಾಜನ್ ಅವರು ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು.

ಅಭ್ಯರ್ಥಿ ಬಿ.ಮಾಧವರು ಮಾತನಾಡಿ ಜಿಲ್ಲೆಯ ಪ್ರಗತಿಗಾಗಿ ತೃತೀಯ ರಂಗದ ಗೆಲುವು ಅನಿವಾರ್ಯವೆಂದು ಜನರು ತಿಳಿದುಕೊಂಡಿದ್ದಾರೆ. ಮತದಾರರು ತನ್ನ ಕೈಬಿಡಲಾರರು ಎಂದು ಆಶಯ ವ್ಯಕ್ತಪಡಿಸಿದರು.

ಜೆಡಿ(ಎಸ್) ಜಿಲ್ಲಾಧ್ಯಕ್ಷ ಬಲರಾಜ್ ರೈ ಅಧ್ಯಕ್ಷತೆ ವಹಿಸಿದ್ದರು. ಜೆಡಿ(ಎಸ್)



ಮುಂದಾಳುಗಳಾದ ಸುಬ್ಬಯ್ಯಶೆಟ್ಟಿ, ವೈ.ಎಸ್.ದತ್ತ, ಅಜೀಂ, ಸಿಪಿಐ(ಎಂ) ಮುಂದಾಳುಗಳಾದ ಜಿ.ಎನ್.ನಾಗರಾಜ್, ಮಾರುತಿ ಮಾನ್ಪಡೆ, ಸಿಪಿಐ ಮುಂದಾಳು ಬಿ.ಕೆ.ಕೃಷ್ಣಪ್ಪ ಮುಂತಾದವರು ಉಪಸ್ಥಿತರಿದ್ದರು.

ಬೃಹತ್ ಮೆರವಣಿಗೆ

ಸಭೆಗೆ ಮುಂಚಿತವಾಗಿ ನಗರದ ಜ್ಯೋತಿ ವೃತ್ತದಿಂದ ನೆಹರೂ ಮೈದಾನದವರೆಗೆ ಬೃಹತ್ ಆಕರ್ಷಕ ಮೆರವಣಿಗೆ ನಡೆಯಿತು. ಸುಡು ಬಿಸಿಲನ್ನೂ ಲೆಕ್ಕಿಸದೆ ಜಿಲ್ಲೆಯ ಮೂಲೆ ಮೂಲೆಗಳಿಂದ ಆಗಮಿಸಿದ್ದ ಸಿಪಿಐ(ಎಂ), ಸಿಪಿಐ, ಜೆಡಿ(ಎಸ್) ಕಾರ್ಯಕರ್ತರು ನಗರದ ಬೀದಿಗಳಲ್ಲಿ ಹೆಜ್ಜೆ ಹಾಕಿದರು. ಇದು ಯಾವುದೇ ಪಕ್ಷದ ಪ್ರಥಮ ಬೃಹತ್ ಚುನಾವಣಾ ಸಭೆಯೆಂಬ ಹೆಗ್ಗಳಿಕೆ ಪಡೆಯಿತು.



ಸುರ್ಜಿತ್ ನೆನಪು

ದೇವೇಗೌಡರು, ಭಾಷಣದುದ್ದಕ್ಕೂ ಭಾವುಕತೆಯಿಂದ ಮಾತನಾಡಿದರು. ಪದೇ ಪದೇ ಸಿಪಿಐ(ಎಂ) ಮಹಾನಾಯಕ ಸುರ್ಜಿತ್‌ರ ಸಿದ್ಧಾಂತಗಳು ಪ್ರಸ್ತುತವೆಂದು 35 ವರ್ಷಗಳ ಹಿಂದೆಯೇ ಹೇಳಿದ್ದ ಎಂದರು. ಪ್ರಕಾಶ್‌ಕಾರಟ್ ದೇಶದ ಮಹಾನಾಯಕನಾಗಿ ಮೂಡಿಬರಲಿದ್ದಾರೆ ಎಂದು ಅವರ ಕಾರ್ಯವೈಖರಿಯನ್ನು ಮನಸಾರೆ ಕೊಂಡಾಡಿದರು. ಅಭ್ಯರ್ಥಿ ಕಾಂ:ಬಿ.ಮಾಧವ ಕೈಯನ್ನು ಎತ್ತಿ ಮಾಧವರನ್ನು ಗೆಲ್ಲಿಸಿ. ಅವರನ್ನು ಗೆಲ್ಲಿಸಲು ಸ್ವಕ್ಷೇತ್ರ ಹಾಸನವನ್ನೇ ತೊರೆದು ಇಲ್ಲಿಗೆ ಎಷ್ಟು ಬಾರಿಯಾದರೂ ನಾನು ಬರುತ್ತೇನೆ ಎಂದು ಕೈ [illegible] ವಿನಂತಿಸಿಕೊಂಡರು.

ರಾಯಚೂರಿಗೂ ಗಣಿ ಕೈ ವಿಸ್ತರಣೆ

ಕೊನೆಯ ಕ್ಷಣಗಳಲ್ಲಿ ರಾಯಚೂರು ಲೋಕಸಭಾ ಕ್ಷೇತ್ರದ ಬಿಜೆಪಿಯ ಅಭ್ಯರ್ಥಿ ಬದಲಾಗಿದ್ದಾರೆ. ಮೊದಲಿಗೆ ರಾಯಚೂರು ಮೀಸಲು (ಎಸ್.ಟಿ) ಕ್ಷೇತ್ರದಿಂದ ರಾಜಾ ಅಮರೇಶ್ವರ ನಾಯಕ ಅಭ್ಯರ್ಥಿ ಎಂದು ಘೋಷಿಸಲಾಗಿತ್ತು. ಆದರೆ ಕಡೇ ಗಳಿಗೆಯಲ್ಲಿ ಅವರು ನಾಮಪತ್ರ ವಾಪಸ್ ಪಡೆದಿದ್ದಾರೆ.

'ಪಕ್ಷದ ವರಿಷ್ಠರ ಸೂಚನೆಯಂತೆ ಎರಡನೇ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುತ್ತಿದ್ದೇನೆ' ಎಂದು ನಾಮಪತ್ರ ಸಲ್ಲಿಸಿದ್ದ ಸಣ್ಣ ಫಕೀರಪ್ಪ ಹೇಳಿದ್ದು ಅವರು ಕಣದಲ್ಲಿದ್ದು ಅವರನ್ನು ಬಿಜೆಪಿ ಅಧಿಕೃತ ಅಭ್ಯರ್ಥಿ ಎಂದು ಘೋಷಿಸಿದೆ.

ಕೆಲವು ವಿರೋಧಿಗಳು ರಾಜಾ ಅಮರೇಶ್ವರ ನಾಯಕರ ಜಾತಿ ವಿಷಯವಾಗಿ ವಿವಾದವೆತ್ತಿದ್ದರಿಂದಾಗಿ ಸಮಸ್ಯೆಯಾಗಬಾರದೆನ್ನುವ ಕಾರಣಕ್ಕೆ ಹೀಗೆ ಮಾಡಲಾಗಿದೆ ಎಂದು ಅಮೇಶ್ವರ ನಾಯಕರೇ ಹೇಳಿಕೊಂಡಿದ್ದಾರೆ.

ಇದು ಬಹಿರಂಗ ಹೇಳಿಕೆ. ಆದರೆ ರಾಜ್ಯ ಬಿಜೆಪಿ ರಾಜಕೀಯದ ಒಳ ಹೊರಗು ಬಲ್ಲ ಜನರು ಹೇಳುವುದು ಬೇರೆಯೇ ಇದೆ.

ಕರ್ನಾಟಕ ರಾಜ್ಯದ ಬಿಜೆಪಿಯಲ್ಲಿ ಬಳ್ಳಾರಿ ಗಣಿ ಮಾಲೀಕರ ಪ್ರಾಬಲ್ಯ ಹೇಗಿದೆ ಎಷ್ಟಿದೆ ಎನ್ನುವುದನ್ನು ರಾಜ್ಯದ ಜನತೆಗೆ ಹೆಚ್ಚು ವಿವರಿಸಬೇಕಾಗ ಅಗತ್ಯವಿಲ್ಲ. ಇದೇ ಶಕ್ತಿಗಳು ಬಿಜೆಪಿಯ ಟಿಕೆಟ್ ಹಂಚಿಕೆಯಲ್ಲೂ ದಿನೇ ದಿನೇ ಪ್ರಾಬಲ್ಯ ಸಾಧಿಸುತ್ತಿದ್ದಾರೆ ಎಂಬುದಕ್ಕೆ ರಾಯಚೂರು ಅಭ್ಯರ್ಥಿ ಬದಲಾವಣೆ ಒಂದು ಸಾಕ್ಷಿ ಅಷ್ಟೆ.

ಸಣ್ಣ ಫಕೀರಪ್ಪ, ಬಳ್ಳಾರಿ ಗಣಿ ಮಾಲಿಕ ಶ್ರೀರಾಮುಲುರ ಹತ್ತಿರದ ಸಂಬಂಧಿ. ರೆಡ್ಡಿತ್ರಯರು ಮತ್ತು ಶ್ರೀರಾಮುಲು ಎಂಬ ಗಣಿ ಮಾಲೀಕರು ಮೊದಲಿಗೆ ಬಳ್ಳಾರಿ ಜಿಲ್ಲೆಯ ಮೇಲೆ ಸಾಧಿಸಿದ ಹಿಡಿತ ಆ ನಂತರ ಅದನ್ನು ನೆರೆಯ ಚಿತ್ರದುರ್ಗ, ಕೊಪ್ಪಳ, ಗದಗ್ ಇತ್ಯಾದಿ ಜಿಲ್ಲೆಗಳಿಗೆ ವಿಸ್ತರಿಸಿಕೊಂಡಿದ್ದು, ಇವೆಲ್ಲಾ ಈಗಾಗಲೇ ಹಳೆ ವಿಷಯ. ಗಣಿ ಲೂಟಿ ಅಬಾಧಿತವಾಗಿ ಸಾಗಬೇಕಾದರೆ, ವಿಸ್ತರಿಸಬೇಕಾದರೆ ತಮ್ಮ ಹಿಡಿತವೂ ವಿಸ್ತರಿಸಬೇಕು. ಬಳ್ಳಾರಿ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿ ಯಾರು? ಶ್ರೀರಾಮುಲು ಸಹೋದರಿ. ಇಂಥ ರಾಜಕೀಯ ಈಗ ರಾಯಚೂರಿಗೂ ಕಾಲಿಟ್ಟಿದೆ ಅಷ್ಟೆ.

ರಾಜ ಅಮೇಶ್ವರ ನಾಯಕರ ನಾಮಪತ್ರ ವಾಪಸ್ ತೆಗೆಸೋದಕ್ಕೆ ಗಣಿ ಮಾಲೀಕರಿಗೆ ಬರೋಬ್ಬರಿ 5 ಕೋಟಿ ಖರ್ಚಾಗಿದೆ ಅಂತ ಹೇಳಲಾಗಿದೆ. ಬಳ್ಳಾರಿಯಲ್ಲಿ ಗಣಿ ತೋಡಿ ಮಾಡಿರುವ ಲೂಟಿಯಲ್ಲಿ 5 ಕೋಟಿ ಯಾವ ಲೆಕ್ಕ ಅಲ್ಲವೇ?



ಮಾರ್ಚ್ 23 ರಿಂದ 25 ರವರೆಗೆ ಹಾಸನದಲ್ಲಿ ನಡೆದ ಡಿವೈಎಫ್ಐ ರಾಜ್ಯ ಸಮ್ಮೇಳನವು ಯುವಜನರ ಮುಂದಿನ ಸವಾಲುಗಳ ಕುರಿತು ಚರ್ಚಿಸಿತು. ಸಂಘಟನೆ ಬಲಪಡಿಸಲು, ಹೋರಾಟ ರೂಪಿಸಲು ತೀರ್ಮಾನಿಸಿತು.

ಸಂಘರ್ಷಾತ್ಮಕ ಹೋರಾಟಕ್ಕೆ ಕರೆ

ಬಿ.ರಾಜಶೇಖರ ಮೂರ್ತಿ

ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ದ ಬಂಡವಾಳಶಾಹಿ ಭೂ ಮಾಲೀಕ ಪಾಳೇಗಾರಿ ವ್ಯವಸ್ಥೆಯ ವಿರುದ್ಧದ ಸ್ವಾತಂತ್ರ್ಯ ಸಮರದ ಎರಡನೇ ಹಾಗೂ ದೇಶದಲ್ಲಿನ ಮೊದಲನೇ ಅತಿ ದೊಡ್ಡ ಯುವಜನ ಸಂಘಟನೆಯಾಗಿ ಡಿವೈಎಫ್ಐ ಹೊರಹೊಮ್ಮಿದೆ. ಕೇವಲ ಬ್ರಿಟಿಷ್ ಸಾಮಾಜ್ರ್ಯಶಾಹಿ ಶಕ್ತಿಗಳನ್ನು ಭಾರತದಿಂದ ಒದ್ದೋಡಿಸುವುದು ಮಾತ್ರ ದೇಶದ ಸ್ವಾತಂತ್ರ್ಯದ ಕೆಲಸವಲ್ಲ ಬದಲಿಗೆ ದೇಶದ ಪ್ರತಿಯೊಬ್ಬ ಪ್ರಜೆಯೂ ಯಾರ ಹಂಗಿಲ್ಲದೆ ಸ್ವಾವಲಂಬಿಯಾಗಬೇಕು. ಆಗ ಮಾತ್ರ ಸದೃಢ ಭಾರತ ಉದಯಿಸುತ್ತದೆಂದು ನಂಬಿದ್ದ ವೀರಯೋಧ ಭಗತ್‌ಸಿಂಗ್ ರವರ ಆಶಯವನ್ನು ಈಡೇರಿಸಲು ಶಪಥಗೈದಿರುವ ಯುವ ಸಂಘಟನೆ ಡಿವೈಎಫ್ಐ ರಾಜ್ಯದಲ್ಲಿ ತನ್ನ ಸಂಘಟನೆಯ ಬಲವನ್ನು ಕ್ರೋಢೀಕರಿಸಲು ಆಯೋಜಿಸಿದ್ದ 9ನೇಯುವಜನ ಸಮ್ಮೇಳನವೂ ಪ್ರಸಕ್ತ ವಿದ್ಯಾಮಾನ ಬೆಳವಣಿಗೆ ತನ್ನ ಮಧ್ಯಪ್ರವೇಶ ಕುರಿತು ಅವಲೋಕಿಸಿತು. ರಾಜ್ಯದಲ್ಲಿರುವ ಕೋಮುವಾದಿ ಬಿಜೆಪಿ ಸರ್ಕಾರ ದುಡಿಯುವ ಜನತೆಯ ಪ್ರಜಾಪ್ರಭುತ್ವದ ಹಕ್ಕುಗಳನ್ನು ಮೊಟಕುಗೊಳಿಸಿ ಜನಾಂಗೀಯ ದ್ವೇಷಹಂಚುವ ಕೃತ್ಯಗಳಿಗೆ ಹೈ ಹಾಕಿದ್ದೇ ಹೆಚ್ಚು. ಇಂತಹ ಕೋಮು ದಳ್ಳುರಿಯ ವಿರುದ್ದ ರಾಜ್ಯಾದ್ಯಂತ ಯುವಜನತೆಯಲ್ಲಿ ಕೋಮು ಸೌಹಾರ್ದತೆಗಾಗಿ ಜಾಗೃತಿ ಮೂಡಿಸಲಾಗಿದೆ. ಬಿಜೆಪಿ ಹಾಗೂ ಸಂಘಪರಿವಾರ ಸರ್ವಧರ್ಮಿಯರ ಸೌಹಾರ್ದ ಪರಂಪರೆಯ ಸಂಕೇತವಾಗಿರುವ ಬಾಬಾಬುಡನ್ ಗಿರಿಯನ್ನು ಹಿಂದೂ ಧಾರ್ಮಿಕ ಸ್ಥಳವನ್ನು ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಹಿಂದೂ ಧರ್ಮಿಯರನ್ನು ಎತ್ತಿ ಕಟ್ಟುವ ಕೃತ್ಯಕ್ಕೆ ಕೈ ಹಾಕಿರುವುದನ್ನು ವಿರೋಧಿಸಿ 'ಸೌಹಾರ್ದತೆಯೆಡೆಗೆ ಯುವಜನರ ನಡಿಗೆ' ಎಂಬ ಐತಿಹಾಸಿಕ ಕಾರ್ಯಕ್ರಮವನ್ನು ಡಿವೈಎಫ್ಐ ಕರ್ನಾಟಕ ರಾಜ್ಯ ಸಮಿತಿ ರಾಜ್ಯ ಮಟ್ಟದ ಕಾರ್ಯಕ್ರಮವನ್ನು ಚಿಕ್ಕಮಗಳೂರಿನ ಬಾಬಾಬುಡನ್ ಗಿರಿಯಲ್ಲಿ ಹಮ್ಮಿಕೊಂಡಿತ್ತು. ಅದೇ ರೀತಿಯಲ್ಲಿ ಮಂಗಳೂರು ದಾವಣಗೆರೆ, ತುಮಕೂರು ಮುಂತಾದೆಡೆ ಸಂಘಪರಿವಾರ ಸೃಷ್ಟಿಸಿದ ಕೋಮುಗಲಭೆಗಳ ವಿರುದ್ದ ಶಾಂತಿ ಸಹಬಾಳ್ವೆಗಾಗಿ ರಾಜ್ಯಾದ್ಯಂತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ನಾಗರೀಕ ಸಮಸ್ಯೆಗಳಿಂದ ಪಡಿತರ ಅವ್ಯವಸ್ಥೆಯ ವಿರುದ್ಧ, ವಸತಿ-ನಿವೇಶನಕ್ಕಾಗಿ, ಕುಡಿಯುವ ನೀರಿನ ಖಾಸಗೀಕರಣ ವಿರುದ್ಧ, ರಾಜ್ಯದಲ್ಲಿ ವ್ಯಾಪಕಗೊಂಡಿರುವ ಭ್ರಷ್ಟಾಚಾರದ ವಿರುದ್ಧ ದಲಿತ-ಅಲ್ಪಸಂಖ್ಯಾತ-ಮಹಿಳೆಯು ಮೇಲಿನ ದೌರ್ಜನ್ಯಗಳ ವಿರುದ್ಧ, ಶಿಕ್ಷಣ ವ್ಯಾಪಾರೀಕರಣ, ಕೋಮುವಾದೀಕರಣ ವಿರುದ್ದವೂ ಕಳೆದ 3 ವರ್ಷಗಳಲ್ಲಿ ಜಿಲ್ಲಾ -ರಾಜ್ಯ ಮಟ್ಟದ ಬಲಿಷ್ಠ ಹೋರಾಟಗಳನ್ನು ಡಿವೈಎಫ್ಐ ಸಂಘಟನೆ ರಾಜ್ಯಾದ್ಯಂತ ರೂಪಿಸಿದೆ. ಮಂಗಳೂರು ಕೊಡಗು, ಮಂಡ್ಯ, ಕೋಲಾರ, ಗುಲ್ಬರ್ಗಾ, ಹಾಸನ, ಮುಂತಾದ ಜಿಲ್ಲೆಗಳಲ್ಲಿ ನಾಗರೀಕ ಸೌಲಭ್ಯಗಳಿಗಾಗಿ ಬಡಜನ ವಿರೋಧಿ ನೀತಿಗಳ ವಿರುದ್ಧ ರೂಪಿಸಿದ್ದ ಪ್ರಜಾಸತ್ತಾತ್ಮಕ ಚಳುವಳಿಯನ್ನು ರಾಜ್ಯ ಸರ್ಕಾರ ಹತ್ತಿಕ್ಕಲು ಪ್ರಯತ್ನಿಸಿ ಲಾಠಿ ಚಾರ್ಜ್ ನಡೆಸಿದೆ. ಡಿವೈಎಫ್ಐನ ಮುಖಂಡರ ಮೇಲೆ ಉದ್ದೇಶಪೂರ್ವಕವಾಗಿ ಕೇಸುಗಳನ್ನು ದಾಖಲಿಸಲಾಗಿದೆ. ಇಂತಹ ಹಲವಾರು ಅಡೆ-ತಡೆಗಳನ್ನು ಸರ್ಕಾರಗಳು, ಪಟ್ಟಭದ್ರರು ಒಡ್ಡಿದರೂ ಮೆಟ್ಟಿ ನಿಂತು ಡಿವೈಎಫ್ಐ ಮೇಲೆರುತ್ತಿರುವ ಸಂದರ್ಭವನ್ನು ಕಳೆದ ಮೂರು ವರ್ಷಗಳಲ್ಲಿ ನೋಡಬಹುದು. ಒಂದು ಲಕ್ಷ ಸದಸ್ಯತ್ವ ದಾಟಿರುವುದು, 20 ಜಿಲ್ಲೆಗಳಿಗೆ ಸಂಘಟನೆ ವಿಸ್ತರಿಸಿರುವುದನ್ನು ಸಮ್ಮೇಳನ ಗುರುತಿಸಿಕೊಂಡಿತು.



ಇಷ್ಟಾದರೂ ಸಾಮ್ರಾಜ್ಯಶಾಹಿ-ಬಂಡವಾಳಶಾಹಿ ಪರವಾಗಿ ನೀತಿಗಳನ್ನು ಆಳುವ ಸರ್ಕಾರಗಳು ಅನುಸರಿಸುತ್ತಿರುವ ಪರಿಣಾಮ ದೇಶದ ಸಂಪತ್ತೆಲ್ಲಾ ಕೇವಲ ಶೇ.8 -10 ರಷ್ಟು ಶ್ರೀಮಂತ ವರ್ಗಕ್ಕೆ ಮೀಸಲಾಗಿ ಶೇ.77ಕ್ಕಿಂತ ಹೆಚ್ಚು ಬಡಜನತೆ ತೀವ್ರ ಬಡತನ, ನಿರುದ್ಯೋಗ-ದಾರಿದ್ರ್ಯಗಳಿಂದ ಬಳಲುತ್ತಿದ್ದಾರೆ. ಜಾಗತೀಕರಣದ ನೀತಿಗಳ ಪರಿಣಾಮ ಪ್ರಾದೇಶಿಕ ಅಸಮಾನತೆ ಯಿಂದಾಗಿ ಉತ್ತರ ಕರ್ನಾಟಕ-ಹೈದರಾಬಾದ್ ಕರ್ನಾಟಕದ ಅತ್ಯಂತ ಹಿಂದುಳಿದಿರುವಿಕೆ. ಹೀಗಾಗಿಯೇ ಕೂಲಿಗಾಗಿ ನಗರ ಪ್ರದೇಶಗಳಿಗೆ ಬಡಜನತೆಯ ವಲಸೆ, ದಲಿತರ ಮೇಲಾಗುತ್ತಿರುವ ಜಾತಿ ಅಸ್ಪೃಶ್ಯತೆಯ ಆಚರಣೆ-ದೌರ್ಜನ್ಯ, ದಬ್ಬಾಳಿಕೆಗಳು. ಮೂಲಭೂತವಾದಿಗಳಿಂದ ಶಾಂತಿಭಂಗ ತರುತ್ತಿರುವುದು. ಮುಖ್ಯವಾಗಿ ದೇಶದ- ರಾಜ್ಯದ ಪ್ರಮುಖ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸುವ ಯುವಜನತೆಯ ಶಕ್ತಿಯನ್ನು ನಿಗ್ರಹಿಸುತ್ತಿರುವುದು. ಯುವಜನತೆಗೆ ದೊರೆಯಬೇಕಾದ ಶಿಕ್ಷಣ-ಉದ್ಯೋಗ ಮುಂತಾದ ಮೂಲಭೂತ ಹಕ್ಕುಗಳನ್ನು ನಿರಾಕರಿಸುವುದು.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಅನುಸರಿಸಿದ ಪಾಳೇಗಾರಿ ವ್ಯವಸ್ಥೆಯ ನೀತಿಗಳು. ತನ್ನ ಅಸಮಾನ, ಅಮಾನವೀಯ ವ್ಯವಸ್ಥೆಯ ಗಟ್ಟಿಗೊಳಿಸಲ ಮಠ ಮಾನ್ಯಗಳಿಗೆ ಸರ್ಕಾರದ ಹಣ ಒದಗಿಸುವುದು. ಜಾತಿ ಸಂಘಟನೆಗಳನ್ನು ಓಲೈಸುವುದು. ಕೇವಲ ಮೇಲ್ವರ್ಗದ ಜನತೆ ಅನುಕೂಲವಾಗುವಂತಹ ನೀತಿಗಳನ್ನು ಜಾರಿಗೆ ತರುವುದು. ದಲಿತ-ಅಲ್ಪಸಂಖ್ಯಾತರ ವಿರುದ್ಧ ವ್ಯವಸ್ಥಿತ ದಾಳಿ ನಡೆಸುತ್ತಿರುವುದು. ದುಡಿಯುವ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಗೊಳಿಸುತ್ತಿರುವುದನ್ನು ಸಮ್ಮೇಳನವು ಚರ್ಚಿಸಿತ್ತು.

ಬಡಜನತೆಯ ಆಹಾರದ ಅಭದ್ರತೆ, ವಸತಿ, ನಿವೇಶನ, ಕುಡಿಯುವ ನೀರು, ಮುಂತಾದ ಮೂಲ ಸಮಸ್ಯೆಗಳನ್ನು ಬಗೆಹರಿಸದೆ ಪಡಿತರ ಅವ್ಯವಸ್ಥೆಯನ್ನು ಇನ್ನಷ್ಟು ಸಮಸ್ಯೆಗಳನ್ನು ಸೃಷ್ಟಿಸಿದೆ. ಇಂತಹ ಮೂಲ ಸಮಸ್ಯೆಗಳ ಪರಿಹಾರಕ್ಕೆ ಬಿಜೆಪಿ ಸರ್ಕಾರ ಕೈ ಹಾಕದೆ ಪಾರ್ಲಿಮೆಂಟ್ ಚುನಾವಣೆಯಲ್ಲಿ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಹವಣಿದೆ. ಎಷ್ಟೋ ಯುವಜನರ ಸಂಘಟನೆಗಳು ವ್ಯಕ್ತಿಕೇಂದ್ರೀತವಾಗಿವೆ. ಅ ಪ್ರಜಾಸತ್ತಾತ್ಮಕ ವಿಧಾನಗಳನ್ನು ಅನುಸರಿಸುತ್ತವೆ. ನೀರಿನ ಮೇಲಿನ ಗುಳ್ಳೆಗಳಂತೆ ಉದಯಿಸುತ್ತವೆ. ಮತ್ತಮ್ಮೆ ಒಡೆಯುತ್ತವೆ. ಇಷ್ಟಾದರೂ ಭಾಷೆ-ಧರ್ಮ-ಸಂಸ್ಕೃತಿ ಹೆಸರಿನಲ್ಲಿ ಯುವಜನತೆಯನ್ನು ಆಕರ್ಷಿಸಿ ಹಾದಿ ತಪ್ಪಿಸುವುದನ್ನು ವ್ಯಾಪಕವಾಗಿ ನೋಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಯುವಜನತೆಯನ್ನು ಶಿಕ್ಷಣ ಉದ್ಯೋಗದಿಂದ ದೂರ ಇಡಲು ಕಾರಣವಾಗಿರುವ ಜಾತಿ ಅಸ್ಪೃಶ್ಯತೆ ಆಚರಣೆ, ಅಲ್ಪಸಂಖ್ಯಾತರ ಮೇಲೆ ದಾಳಿ, ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಕುರಿತು ಚರ್ಚಿಸಲು ಹಾಗೂ ಆ ವಿಭಾಗದ ಮಧ್ಯ ಸಂಘಟನೆಯನ್ನು ಬಲಪಡಿಸಿ ಆ ವಿಭಾಗಗಳ ಮೂಲ ಸಮಸ್ಯೆಗಳ ಶಾಶ್ವತ ಪರಿಹಾರಕ್ಕಾಗಿ ಅವರನ್ನು ಅಣಿನೆಸಲು ಅನುವಾಗುವಂತೆ ಸಮ್ಮೇಳನದಲ್ಲಿ ವಿಭಾಗವಾರು ಆಯೋಗಗಳನ್ನು ರಚಿಸಿ ಚರ್ಚಿಸಲಾಯಿತು.

ದಲಿತ ಯುವಜನ

ತನ್ನ ಒಡನಾಳದಲ್ಲಿ ಅದುಮಿಟ್ಟಿದ್ದ ನೋವಿನ ಅಂತರಂಗದ ಕತೆಗಳ ಒಂದೊಂದೇ ಯುವ ಧ್ವನಿಯಿಂದ ಹೊರಬಂದವು. ಊರು-ಕೇರಿಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ, ಅನುಭವಿಸಿದ ಅಸ್ಪೃಶ್ಯತೆ ಜಾತಿನಿಂದನೆ, ಅವಮಾನಗಳ ಪರಿ ಚರ್ಚೆಯಲ್ಲಿ ಭಾಗವಹಿಸಿದ ಎಲ್ಲರನ್ನೂ ಮೂಕರನ್ನಾಗಿಸಿತ್ತು. ಮಂಗಳೂರಿನ ಬೆಳ್ತಂಗಡಿ ತಾಲ್ಲೂಕಿನಲ್ಲಿ ದಲಿತ ಯುವಕನಿಗೆ ಮಾಂಸವನ್ನು ಹಾರವನ್ನಾಗಿ ಮಾಡಿ ಹಾಕಿದ್ದು. ಕೇಂದ್ರದಲ್ಲಿರುವ ಸರ್ಕಾರವೂ ತನ್ನ ಬಂಡವಾಳಶಾಹಿ-ಭೂ ಮಾಲೀಕ ಪರ ನೀತಿಗಳನ್ನೇ ಅನುಸರಿಸುವುದರಿಂದ ದೇಶದ ಆರ್ಥಿಕ ಪರಿಸ್ಥಿತಿ ಕಂಗೆಟ್ಟು, ಇತ್ತೀಚಿನ ಆರ್ಥಿಕ ಬಿಕ್ಕಟ್ಟಿನಿಂದ ನಿರುದ್ಯೋಗ ಹೆಚ್ಚಳವಾಗಿ ಜನತೆಯಲ್ಲಿ ಅಭದ್ರತೆ ಕಾಡುತ್ತಿದೆ. ಇಂತಹ ಜ್ವಲಂತ ಸಮಸ್ಯೆಗಳ ಬಗ್ಗೆ ಗಮನಹರಿಸದ ಕೇಂದ್ರ ಸರ್ಕಾರ ಸಾಮ್ರಾಜ್ಯಶಾಹಿಗಳ ಪರ ನೀತಿಗಳನ್ನು ಸರಿಸಿದ್ದರ ಪರಿಣಾಮ ದೇಶದ ಸ್ವಾವಲಂಬನೆಗೆ ಧಕ್ಕೆಯಾಗುತ್ತಿದೆ. ಅಮೇರಿಕಾದೊಂದಿಗೆ ಅಣುಒಪ್ಪಂದ ಮುಂತಾದ ವಿದೇಶಾಂಗ ನೀತಿಗಳು ದೇಶದ ಸಾರ್ವಭೌಮತ್ವಕ್ಕೆ ಧಕ್ಕೆಯಾಗುತ್ತಿದೆಂಬ ಮುಂತಾದ ಅಂತರಾಷ್ಟ್ರೀಯ ರಾಷ್ಟ್ರೀಯ ರಾಜ್ಯದ ಎಲ್ಲಾ ಕ್ಷೇತ್ರಗಳ ವಿದ್ಯಾಮಾನಗಳ ಬಗ್ಗೆ ಪ್ರತಿನಿಧಿ ಸಂಗಾತಿಗಳು ಚರ್ಚೆಯಲ್ಲಿ ಪಾಲ್ಗೊಂಡು ಚರ್ಚಿಸಿದರು.

ಸಮಸ್ಯೆಗಳನ್ನು ಅರಿಯಲು-ಬಲಿಷ್ಠ ಹೋರಾಟ ರೂಪಿಸಲು ವಿಭಾಗವಾರು ಚರ್ಚೆ

ಡಿವೈಎಫ್ಐ ಯುವಜನ ಸಂಘಟನೆಯು ತಾನೊಂದು ಪ್ರಜಾಪ್ರಭುತ್ವದ ಹಾದಿಯಲ್ಲಿ ನಡೆಯುತ್ತದೆ ಎಂಬುದಕ್ಕೆ ತನ್ನ ಸಂವಿಧಾನ ಹಾಗೂ ಕಾರ್ಯಕ್ರಮಗಳ ವಿಧಾನ ಹಾಗೂ ಗುರಿ ಉದ್ದೇಶಗಳೇ ಒತ್ತಿ ಹೇಳುತ್ತವೆ. ಮಾಗಡಿಯಲ್ಲಿ ರಂಗಮ್ಮನ್ನು ಅವಮಾನಿಸಿ ಆತ್ಮಹತ್ಯೆಗೆ ದೂಡಿದ್ದು, ಬೀದರ್‌ನ ಬಸವಕಲ್ಯಾಣ, ಮುಂತಾದರೆಡೆ ನಡೆದಿರುವ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಸ್ವ ಅನುಭವಗಳಾಗಿ ಹೊರಬಂದವು. ಇಂತಹ ಸಮಸ್ಯೆಗಳ ವಿರುದ್ದ ಎಲ್ಲಾ ವಿಭಾಗದ ಯುವಜನತೆಯನ್ನು ಒಗ್ಗೂಡಿಸಿ ಜಾತಿ-ಅಸ್ಪೃಶ್ಯತೆ ಆಚರಣೆ ವಿರುದ್ಧ ವ್ಯಾಪಾಕ ಕ್ರಿಯಾತ್ಮಕ ಹೋರಾಟ ರೂಪಿಸಬೇಕು. ಸಾಮೂಹಿಕ ಊಟ, ದೇವಸ್ಥಾನ ಪ್ರವೇಶ ಮುಂತಾದ ಕಾರ್ಯಕ್ರಮಗಳನ್ನು ರೂಪಿಸಬೇಕು. ಡಿವೈಎಫ್ಐ ಸಂಘಟನೆ ಮಾತ್ರವೇ ಇಂತಹ ಕೆಲಸಗಳಿಗೆ ಕೈ ಹಾಕುವುದು ಎಂಬ ದೃಢ ನಿಲುವನ್ನು ದಲಿತ ಯುವಜನತೆ ಹೊಂದಿತ್ತು.

ಅಲ್ಪಸಂಖ್ಯಾತರೆಂಬ ಕಾರಣಕ್ಕೆ ಭಯೋತ್ಪಾಕರೆಂದು ನಿಂದಿಸುತ್ತಾರೆ. ಗಡ್ಡಬಿಡಬಾರದು, ಮುಸ್ಲಿಂ ಹಿಂದೂ, ಯುವಕ-ಯುವತಿಯರು ಜೊತೆಯಲ್ಲಿ ಮಾತಾಡಬಾರದೆಂದು ಆಗ್ರಹಿಸುತ್ತಾರೆ, ಹಲ್ಲೆ ನಡೆಸುತ್ತಾರೆ. ಅಲ್ಪಸಂಖ್ಯಾತರು ವಾಸಿಸುವ ಕಡೆ

ಪುಟ 14 ನೋಡಿ

ಸಮಾಜೋತ್ಸವ, ಶೋಭಾಯಾತ್ರೆಗಳಲ್ಲಿ ಮೊದಲು ತೊಡಗಿದವರು ಯಾರು?


ಅಮೃತ ಸೋಮೇಶ್ವರರ ಸಂದರ್ಶನ

ಅಮೃತ ಸೋಮೇಶ್ವರರು ಎಲ್ಲ ಬಗೆಯ ಕೋಮುವಾದ, ಮೂಲಭೂತವಾದವನ್ನು ಖಂಡಿಸುವ, ವಿರೋಧಿಸುವ ಒಬ್ಬ ಚಿಂತಕರು. ಜನಪದ ವಿದ್ವಾಂಸರು. ಕರ್ನಾಟಕ ಕರಾವಳಿಯಲ್ಲಿನ ಇಂದಿನ ಕೋಮು ಧ್ರುವೀಕರಣದ ಪರಿಸ್ಥಿತಿಯಲ್ಲಿ ಕೋಮುಸೌಹಾರ್ದತೆಯನ್ನು ಸಂರಕ್ಷಿಸಿಕೊಳ್ಳಬೇಕಾದ ಅಗತ್ಯತೆ ದೊಡ್ಡ ಆದ್ಯತೆ ಪಡೆದಿರುವಾಗ ಜನಶಕ್ತಿ ಕನ್ನಡ ವಾರಪತ್ರಿಕೆಯು ಕೋಮುವಾದದ ವಿವಿಧ ಮುಖಗಳ ಕುರಿತು ಶ್ರೀಯುತರ ಅಭಿಪ್ರಾಯ ಪಡೆಯುವ ಸಲುವಾಗಿ ಅವರನ್ನು ಸಂದರ್ಶಿಸಿತು.

ಜನಶಕ್ತಿ: ಕರ್ನಾಟಕದಲ್ಲಿ ಅದರಲ್ಲಿಯೂ ಕರಾವಳಿಯಲ್ಲಿ ಕೋಮುವಾದ ಒಂದು ಅತ್ಯಂತ ಅಪಾಯಕಾರಿಯಾದ ಬೆಳವಣಿಗೆಯಾಗಿ ಕಾಣುತ್ತಿದೆ. ಇದು ಯಾಕೆ ಏನು? ಅದನ್ನು ಎದುರಿಸುವ ಬಗೆಗೆ ತಮ್ಮ ಅನಿಸಿಕೆ ಏನು?

ಅಮೃತ ಸೋಮೇಶ್ವರ: ಕೋಮುವಾದ ಸಮಾಜಕ್ಕೆ ಒಂದು ಶಾಪ. ಪ್ರಜಾಪ್ರಭುತ್ವ, ಸಂವಿಧಾನ ಒಪ್ಪಿಕೊಂಡ ಮೇಲೆ ಅದಕ್ಕೆ ಗರಿಷ್ಠ ಗೌರವ ಕೊಡಬೇಕು. ಗಾಂಭೀರ್ಯದಿಂದ ವರ್ತಿಸಬೇಕು.

ಭಾರತದ ಪ್ರಜಾಪ್ರಭುತ್ವ ಬಾಲ್ಯಾವಸ್ಥೆಯನ್ನು ಇನ್ನೂ ದಾಟಿಲ್ಲ. 60 ವರ್ಷ ಸಣ್ಣ ಅವಧಿಯೇನಲ್ಲ. ಶಿಕ್ಷಣಕ್ಕೆ ರಾಜಕೀಯ ಮುಖ್ಯಸ್ಥರು ಅಗತ್ಯ ಆದ್ಯತೆ ಕೊಡಲಿಲ್ಲ. ಹಿಂದುಳಿದವರು, ದಲಿತರು ಮುಂತಾದವರಿಗೆ ಇಂದಿಗೂ ಶಿಕ್ಷಣ ಸಿಕ್ಕಿಲ್ಲ, ಸಿಗಬೇಕು.



ಸಂವಿಧಾನಾತ್ಮಕವಾಗಿ ಎಲ್ಲರೂ ಸಮಾನರು. ಯಾರನ್ನೂ ಅವಹೇಳನ ಮಾಡಬಾರದು. ಯಾರನ್ನೂ ನಿಂದಿಸಬಾರದು. ಕೋಮುವಾದ ಯಾಕಾಗುತ್ತಿದೆ, ಯಾಕಾಯ್ತು, ಅದಕ್ಕೆ ಚಾರಿತ್ರಿಕ ಕಾರಣಗಳಿವೆ. ಎಸ್.ಎಲ್.ಭೈರಪ್ಪನವರ 'ಆವರಣ' ಕಾದಂಬರಿ ಇದೆ. ತೋಳ ಬಂತು ತೋಳ ಎಂಬ ಕತೆಯಂತೆ ಅದು.

ಮಂಗಳೂರಿನಲ್ಲಿ ಮೊನ್ನೆ ಮೊನ್ನೆವರೆಗೆ ಸೌಹಾರ್ದ ವಾತಾವರಣ ಇತ್ತು. ಧಾರ್ಮಿಕ ಆಗು ಹೋಗು, ಆಚರಣೆ, ವಿಧಿ ವಿಧಾನಗಳು ಆಯಾ ಆವರಣ ಬಿಟ್ಟು ಬೀದಿಗೆ ಬರುತ್ತಿವೆ. ಮೈದಾನಕ್ಕೆ ಬರುತ್ತಿವೆ. ಇದರಿಂದ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ....

.....ಶೋಭಾ ಯಾತ್ರೆ, ಸಮಾಜೋತ್ಸವಗಳಲ್ಲಿ ಯಾರು ಮೊದಲು ಯಾರು ತೊಡಗಿದರು....? ಮೊದಲಿಗೆ ರಂಜಾನ್ ಮೆರವಣಿಗೆ ಇತ್ತಾ..? ಪ್ರಾರ್ಥನೆ ಇತ್ತು. ಕ್ರಿಶ್ಚಿಯನ್ನರದ್ದು ಇರಲಿಲ್ಲ. ಮೊದಲು ಹಿಂದೂ ಜನ ತೊಡಗಿದರು. ನಿಸರ್ಗಕ್ಕೆ ಫಲಗಳನ್ನು ಅರ್ಪಿಸಿ ಗೌರವಿಸುವ ವಿಶು ಹಬ್ಬವಿದೆ. ಇಂಥ ಜನಸಂಸ್ಕೃತಿಯ ಸೌಹಾರ್ದ ಗೌಣವಾಗಿ ನಮ್ಮ ಜಾತಿಯೇ ಬ್ರಹ್ಮಾಂಡ, ನಮ್ಮ ಮತವೇ ಏಕಮೇವ, ಶ್ರೇಷ್ಠ ಎಂದಾಗ ಸಮಸ್ಯೆ ಶುರುವಾಗುತ್ತದೆ.

.... ಚಿಕ್ಕ ಮಕ್ಕಳಿಗೆ ಮತೀಯ ಶಿಕ್ಷಣ ಕೊಡಬಾರದು. ಅದು ಕೇವಲ ಸಂಸ್ಕಾರವಾಗಿ ಉಳಿಯುವುದಿಲ್ಲ. ಧಾರ್ಮಿಕತೆ ನೆಪದಲ್ಲಿ ಮಕ್ಕಳ ಎಳವೆಯನ್ನೇ ಯಾಕೆ ವಿನಿಯೋಗಿಸಬೇಕು...

1925 ರಲ್ಲಿ ಕೇಶವ ಬಲರಾಮ ಹೆಡ್ಗೆವಾರ್ ಆರೆಸ್ಸೆಸ್ ಸ್ಥಾಪಿಸಿದರು. ಗಣವೇಷಧಾರಿಗಳಾದ ಲಾಠಿ ಹಿಡಿದವರು ಅವತ್ತಿನ ಪೊಲೀಸರ ಚೆಡ್ಡಿ ತೊಟ್ಟರು. ಅರೆ ಸೈನಿಕರ ವೇಷ, ನೈತಿಕ ಪೊಲೀಸರಾದರು. ಆಗಾಗ ಬೀದಿಗೆ ಇಳಿದರು. ಅದರ ಅರ್ಥ ಏನು? ಇನ್ನೊಂದು ವರ್ಗದವರಿಗೆ ಏನೋ ಸಂಶಯ, ಭಯ.

ಸ್ವಾಮಿ ಶ್ರದ್ಧಾನಂದರ ಕೊಲೆ ಹಿನ್ನೆಲೆಯಲ್ಲಿ ಪಥ ಸಂಚಲನ ಆರಂಭಿಸಿದೆವೆಂದು ಹೇಳಿಕೊಳ್ಳುತ್ತಾರೆ. ಈ ರೀತಿ ಸಾರ್ವಜನಿಕ ವಲಯದಲ್ಲಿ ಧುಮ್ಮಿಕ್ಕಿದಾಗ ಕೋಮುವಾದ ಉಲ್ಬಣಿಸುತ್ತದೆ. ಜಿದ್ದು, ಸ್ಪರ್ಧೆ, ಸವಾಲು, ಸ್ವರಕ್ಷಣೆಯ ಸೋಗು ಎಲ್ಲವೂ ಶುರುವಾಗುತ್ತದೆ. ಕಾಲ್ಪನಿಕ ಭೂತಗಳನ್ನು ಸ್ವಯಂ ಸೃಷ್ಟಿಸುತ್ತಾರೆ.

ಈಗ ನಾರಾಯಣ ಗುರುಗಳ ಮೌಲ್ಯ ಎತ್ತಿಹಿಡಿಯುವವರು ಬೇಕು. ಮೊಘಲರ ಕಾಲದಲ್ಲಿ ಹಿಂದೂ - ಮುಸ್ಲಿಂರ ನಡುವೆ ಸೂಫಿ ಬೆಸುಗೆ ಕಾಣುತ್ತೇವೆ. ಕಬೀರ, ಶಿಶುನಾಳ ಷರೀಫರ ಮೌಲ್ಯಗಳು ನಮಗೆ ಬೇಕು.

ಯಾವ ಮತವೂ ಪರಿಪೂರ್ಣ ಎನ್ನುವಂತಿಲ್ಲ. ಎಲ್ಲಕ್ಕೂ ಕೆಲವು ಮಿತಿಗಳಿವೆ. ತನ್ನದ್ದಕ್ಕೆ ಗೌರವ ಕೊಡುವವರು ಬೇರೆಯವರಿಗೂ ಗೌರವ ಕೊಡಬೇಕು. ತರುಣ ಜನಾಂಗ ಮತಗ್ರಂಥಗಳನ್ನು ಕಾವ್ಯವಾಗಿ ಸ್ವೀಕರಿಸಬೇಕು.... ಜಾತೀಯ ಸಂಘಟನೆಗಳು, ಮತೀಯ ಸಂಘಟನೆಗಳನ್ನು ಶಿಥಿಲ ಮಾಡಬೇಕು.

ಸಂದರ್ಶಕರು : ಆರ್.ರಾಮಕೃಷ್ಣ
ವಾಸುದೇವ ಉಚ್ಚಿಲ

ಬಜಾಲ್: ಜನಕ್ಕೆ ಸಮಸ್ಯೆಯೇ ದೊಡ್ಡದು

ಪುಟ 9 ರಿಂದ

ಜೋರು ಮಾತನಾಡುವ ಬಿಜೆಪಿಯುವರು ಆಡಳಿತ ನಡೆಸುವ ಮಹಾನಗರ ಪಾಲಿಕೆಯು ಮನೆಯ ಮುಂದಿನ ತುಳಸೀ ಕಟ್ಟೆಗೂ ತೆರಿಗೆ ವಿಧಿಸುತ್ತಿರುವ ಬಗೆಗೆ ಅವರು ಅಸಮಾಧಾನ ತೋಡಿಕೊಂಡರು. ಎಂದಿನಂತೆ ಕುಡಿಯುವ ನೀರು, ರೇಷನ್, ಅವರ ತೊಂದರೆಗಳು.

ಮುಸ್ಲಿಂ ಹುಡುಗರೊಟ್ಟಿಗೆ ಮಾತನಾಡಿದಾಕ್ಷಣ ಹುಡುಗಿಯರ ಮೇಲೆ ದಾಳಿ ಮಾಡುವುದು ಖಂಡಿತಾ ತಪ್ಪು ಎಂದರು ಅವರು. ಅವರ ಮನೆಯಲ್ಲಿ ಹೆಣ್ಣು ಮಕ್ಕಳು ಇರುವುದು ನಮ್ಮ ಗಮನಕ್ಕೆ ಬಂತು. ಜವಾಬ್ದಾರಿಯುತವಾದ ಪ್ರಾಮಾಣಿಕವಾದ ಮಾತುಗಳೇ ಅವು. ಬೂಟಾಟಿಕೆಯವಗಿರಲಿಲ್ಲ.

ನಂದಾ ಅವರ ಮನೆ ದಾಟಿ ಮುಂದೆ ನಡೆದಾಗ ದಾರಿಯಲ್ಲಿ ಕಂಡವರು ಇಬ್ಬರು ಕಾಲೇಜು ಯುವತಿಯವರು. ನಮ್ರತಾ ಬಿಬಿಎಂ ವಿದ್ಯಾರ್ಥಿನಿ. ದೀಪಿಕಾ ಬಿ.ಕಾಂ. ವಿದ್ಯಾರ್ಥಿನಿ. ಪಬ್‌ನಲ್ಲಿ ಮಹಿಳೆಯರ ಮೇಲಿನ ದಾಳಿ ಬಗ್ಗೆ ಅವರನ್ನು ಕೇಳಿದಾಗ ಹೇಳಿದರು.

'ಪಬ್‌ಗೆ ಲೈಸನ್ಸ್ ಕೊಟ್ಟಿದ್ದಾರೆ. ಹುಡುಗಿಯರು ಅವರ ಇಷ್ಟದಂತೆ ಹೋಗಿದ್ದಾರೆ. ಅವರಿಗೆ (ರಾಮಸೇನೆ) ಹೊಡೆಯುವ ಹಕ್ಕಿಲ್ಲ. ಯಾರಿಗೂ ಇಲ್ಲ. ಬೇಕಿದ್ದರೆ ತಿಳುವಳಿಕೆ ಹೇಳಬಹುದಿತ್ತು'. ನಮ್ರತಾ ಮಾತಿಗೆ ದೀಪಿಕಾ ಕೂಡ ದನಿಗೂಡಿಸಿದರು.

ಸಹೋದರತ್ವ ಸಹಬಾಳ್ವೆ ಬೇಕು

'ನಮಗೆ ಅಲ್ಪಸಂಖ್ಯಾತರನ್ನು ರಕ್ಷಿಸುವ ಸರ್ಕಾರ ಬೇಕು. ಜನರಿಗೆ ಉತ್ತಮವಾಗಿ ಸ್ಪಂದಿಸುವ ಸರ್ಕಾರ ಬೇಕು. ವಿನಾಕಾರಣ ಕ್ರೋಧ ಭಾವನೆ ಹುಟ್ಟಿಕೊಂಡಿದೆ. ನಮಗೆ ಸಹೋದರತ್ವ ಸಹಬಾಳ್ವೆ ಬೇಕು. ಅಂತಹ ಪರಿಸ್ಥಿತಿ ನಿರ್ಮಾಣ ಮಾಡುವ ಸರ್ಕಾರ ಬರಬೇಕು. ನೀವು ಇರಬಾರದು. ನಾವು ಮಾತ್ರ ಇರಬೇಕು. ಅವರು ಕೀಳು, ನಾವು ಮೇಲೂ ಎನ್ನುವುದು ಇರಬಾರದು. ಇದೆಲ್ಲಾ ರಾಜಕೀಯ ಕುತಂತ್ರ. ಜನರಿಗೆ ಅದು ಬೇಕಾಗಿಲ್ಲ. ಎಲ್ಲಾ ರುಚಿ ನೋಡಿ ಆಗಿದೆ. ಹೊಸದೊಂದು ಶಕ್ತಿ ಉದಯಿಸಿದೆ. (ತೃತೀಯ ಪರ್ಯಾಯ)ಕಷ್ಟ ಉಂಟು. ನೋಡುವಾ ಬದಲಾವಣೆ ಸಾಧ್ಯವಾ ಅಂತ?'



– ಎಡ್ವರ್ಡ್ ಲೋಬೋ, ಬಡಗಿ, ಕಪ್ಪನಗರ, ತೊಕ್ಕೊಟ್ಟು

ಒಂದು ತತ್ವಬದ್ಧ ಹೋರಾಟ

ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಗುಜರಾತಿನಿಂದ ಬಂದ ಸುದ್ದಿಗಳಲ್ಲಿ ಒಂದು ಗಮನ ಸೆಳೆಯುವಂತದ್ದೆ. ಒಂದು ಖ್ಯಾತ ನೃತ್ಯಪಟು ಮಲ್ಲಿಕಾ ಸಾರಾಬಾಯಿ ಅವರು ಬಿಜೆಪಿ ಮುಖಂಡ, ಪ್ರಧಾನಿ ಅಭ್ಯರ್ಥಿ ಎಲ್.ಕೆ.ಅಡ್ವಾಣಿಯ ಎದುರು ಗಾಂಧಿನಗರ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ.



ಮಲ್ಲಿಕಾ ಸಾರಾಬಾಯಿ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಮುಖ್ಯವಾದ ವಿಚಾರ ಎಂದರೆ ಅವರು ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಅಡಿಯಲ್ಲಿ ಗುಜರಾತ್‌ನಲ್ಲಿ ನಡೆದ ಭೀಕರ ಕೋಮು ಹಿಂಸಾಚಾರ, ಅಲ್ಪಸಂಖ್ಯಾತರ, ಮಾರಣಹೋಮವನ್ನು ಹಾಗೂ ಬಿಜೆಪಿಯ ಕೋಮುವಾದಿ ರಾಜಕಾರಣವನ್ನು ವಿರೋಧಿಸಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಜಾತ್ಯಾತೀತ ತತ್ವವನ್ನು ಎತ್ತಿ ಹಿಡಿಯುವುದಕ್ಕಾಗಿ ಅವರು ಸ್ಪರ್ಧಿಸುತ್ತಿದ್ದಾರೆ.

ಅಂದಹಾಗೆ ಮಲ್ಲಿಕಾ ಸಾರಾಬಾಯಿ ಅವರು ಖ್ಯಾತ ಅಣು ವಿಜ್ಞಾನಿ ವಿಕ್ರಮ್ ಸಾರಾಬಾಯಿ ಅವರ ಮಗಳು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸಿಪಿಐ(ಎಂ) ಇವರ ಸ್ಪರ್ಧೆಯನ್ನು ಬೆಂಬಲಿಸಿದೆ.

ಮೈಸೂರು : ಹೊಸ ಮುಖದ ಹುಡುಕಾಟದಲ್ಲಿ

15ನೇ ಲೋಕಸಭಾ ಚುನಾವಣೆಯ ವೇಳೆಗೆ ಮೈಸೂರು ಲೋಕಸಭಾ ಕ್ಷೇತ್ರ ಪುನರ್‌ಸಂಘಟಿತವಾಗಿದ್ದು ಕೃಷ್ಣಾನಗರ ಮಂಡ್ಯಕ್ಕೆ, ಹೆಗ್ಗಡದೇವನಕೋಟೆ ಚಾಮರಾಜನಗರಕ್ಕೆ ಸೇರಿ ಹೋಗಿದ್ದು ಉಡುಪಿ ಲೋಕಸಭಾ ಕ್ಷೇತ್ರದಲ್ಲಿದ್ದ ಕೊಡಗು ಮೈಸೂರು ಕ್ಷೇತ್ರಕ್ಕೆ ಬಂದಿದೆ. ಜಾತ್ಯಾತೀತ ಜನತಾದಳದಿಂದ ಜೀವಿಜಯ, ಕಾಂಗ್ರೆಸ್‌ನಿಂದ ಹೆಚ್.ವಿಶ್ವನಾಥ ಬಿಜೆಪಿಯಿಂದ ಹಾಲಿ ಸಂಸದ ಸಿ.ಎ.ವಿಜಯಶಂಕರ್ ಸ್ಪರ್ಧಿಸುತ್ತಿದ್ದಾರೆ. ಇಡೀ ಜಿಲ್ಲೆಯಾದ್ಯಂತ ಆಪರೇಷನ್ ಕಮಲದ ಹೆಸರಿನಲ್ಲಿ ಕೆಸರನ್ನು ಎರಚಿರುವ ಬಿಜೆಪಿ ಚುನಾವಣೆ ಸಂದರ್ಭದಲ್ಲಿ ತೀವ್ರ ಗೊಂದಲವನ್ನು ಹುಟ್ಟುಹಾಕಿದೆ. ಮೂರೂ ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ಚುನಾವಣಾ ಪ್ರಚಾರ ಆರಂಭಿಸಿದ್ದು ವಿಧಾನಸಭಾ ಕ್ಷೇತ್ರವಾರು ಕಾರ್ಯಕರ್ತರ ಸಭೆಗಳನ್ನು ನಡೆಸುತ್ತಿದ್ದಾರೆ. ಜಾತಿವಾರು ಲೆಕ್ಕಾಚಾರಗಳು ಆರಂಭವಾಗಿವೆ. ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಕುರುಬ ಸಮುದಾಯಕ್ಕೆ ಸೇರಿದ್ದು ಜನತಾದಳದಿಂದ ಸ್ಪರ್ಧಿಸಿರುವ ಜೀವಿಜಯ ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಮೂರು ಜನ ಅಭ್ಯರ್ಥಿಗಳು ಕ್ಷೇತ್ರಕ್ಕೆ ಚಿರಪರಿಚಿತರು. ಬಹುವರ್ಷಗಳ ನಂತರ ಒಕ್ಕಲಿಗ ಸಮುದಾಯದವರೊಬ್ಬರಿಗೆ ಚುನಾವಣೆಗೆ ಸ್ಪರ್ಧಿಸಲು ಅವಕಾಶ ದೊರಕಿರುವುದು ಹಾಗೂ ದೇವೇಗೌಡ, ಕುಮಾರಸ್ವಾಮಿಯವರು ಈ ಸಮುದಾಯದ ಮತಗಳ ಮೇಲೆ ಹಿಡಿತ ಹೊಂದಿರುವುದು ಜೆಡಿ(ಎಸ್)ಗೆ ಅನುಕೂಲಕರ ಅಂಶವಾಗಿದ್ದರೆ, ಮಂಗಳೂರು ಕ್ಷೇತ್ರದಿಂದ ಬೇರ್ಪಟ್ಟ ಕೊಡಗಿನವರೇ ಅಭ್ಯರ್ಥಿಯಾಗಿರುವುದು ಜೀವಿಜಯ ಅವರಿಗೆ ಅನುಕೂಲಕರ ಅಂಶವಾಗಿವೆ. ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಹೆಚ್.ವಿಶ್ವನಾಥ್‌ಗೆ ಪಕ್ಷದ ಒಳವಲಯದಲ್ಲೇ ತೀವ್ರ ವಿರೋಧ ವ್ಯಕ್ತವಾಗಿದೆ. ಅವರು ಪ್ರತಿನಿಧಿಸುತ್ತಿದ್ದ ಕೃಷ್ಣರಾಜನಗರ ವಿಧಾನಸಭಾ ಕ್ಷೇತ್ರವು ಈಗ ಮಂಡ್ಯ ಲೋಕಸಭಾ ವ್ಯಾಪ್ತಿಗೆ ಸೇರಿದೆ. ಬಿಜೆಪಿ ಅಭ್ಯರ್ಥಿಯು ಮೂರನೇ ಬಾರಿ ಕಣಕ್ಕಿಳಿದಿದ್ದು ತಮ್ಮ ಪಕ್ಷದ ಕಾರ್ಯಕರ್ತರನ್ನು ಹತ್ತಿರ ಸೇರಿಸುವುದಿಲ್ಲ ಎನ್ನುವ ಆಪಾದನೆಗೆ ಒಳಗಾಗಿದ್ದಾರೆ. ಅವರಿಗೂ ಈ ಬಾರಿ ಸ್ಪರ್ಧೆ ಕಷ್ಟವಾಗಲಿದೆ. ಕಳೆದ ಅವಧಿಯಲ್ಲಿ ತಮ್ಮೆಲ್ಲ ಸಮಯವನ್ನು ಮೈಸೂರು ವಿಮಾನ ನಿಲ್ದಾಣ ವಿಚಾರದಲ್ಲೇ ಕಳೆದ ಇವರು ಜಿಲ್ಲೆಯ ಸಮಸ್ಯೆಗಳಿಗೆ ಸ್ಪಂದಿಸಿದ್ದೇ ಇಲ್ಲ. ತೀವ್ರ ಆರ್ಥಿಕ ಬಿಕ್ಕಟ್ಟಿನಿಂದಾಗಿ ಮೈಸೂರು ನಗರದಲ್ಲಿ ಕೈಗಾರಿಕೆಗಳು ಲೇಆಫ್, ವೇತನ ಕಡಿತಗಳಂಥ ಕ್ರಮಗಳನ್ನು ಅನುಸರಿಸುತ್ತಿದ್ದು ನೂರಾರು ಜನ ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಹುಣಸೂರಿನವರೇ ಆದ ವಿಜಯಶಂಕರ್ ಸಣ್ಣ ತಂಬಾಕು ಬೆಳೆಗಾರರ ಹಿತಾಸಕ್ತಿಯನ್ನು ಕಾಪಾಡುವಲ್ಲಿ ವಿಫಲರಾಗಿದ್ದಾರೆ ಎನ್ನುವ ದೂರಿದ್ದು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಈಗ ಅವರೇ ಸಂಘಟಿತರಾಗುತ್ತಿದ್ದಾರೆ. ಚುನಾಯಿತ ಸದಸ್ಯರನ್ನು ಈಗ ಸಾರಾಸಗಟಾಗಿ ಖರೀದಿಸಲು ಹೊರಟಿರುವ ಬಿಜೆಪಿ 14ನೇ ಲೋಕಸಭೆಯಲ್ಲಿ ವಿರೋಧ ಪಕ್ಷವಾಗಿ ಸಮರ್ಥವಾಗಿ ಕಾರ್ಯನಿರ್ವಹಿಸದೆ ಸಂತ್ರಸ್ತ ಜನರಿಗೆ ಪರ್ಯಾಯ ಒದಗಿಸಲು ಸಾಧ್ಯವಾಗದ ತನ್ನ ಸೈದ್ಧಾಂತಿಕ ದಿವಾಳಿಕೋರತನವನ್ನು ಮುಚ್ಚಿಡಲು ಕೋಮುಭಾವನೆಗಳನ್ನು ಕೆರಳಿಸುವಂತಹ ದುಷ್ಕೃತ್ಯಕ್ಕೆ ಮುಂದಾಗಿದೆ. ಮೈಸೂರು ನಗರದ ಕ್ಯಾತಮಾರನಹಳ್ಳಿಪ್ರದೇಶದಲ್ಲಿ ಇತ್ತೀಚೆಗೆ ನಡೆದ ಕೋಮುಗಲಭೆಯ ಸಂದರ್ಭದಲ್ಲಿ ಬಿಜೆಪಿ ಶಾಸಕರೊಬ್ಬರು ಪ್ರಚೋದನಕಾರಿಯಾಗಿ ಮಾತನಾಡಿದ್ದೇ ಸನ್ನಿವೇಶ ಪ್ರಕ್ಷುಬ್ಧವಾಗಲು ಕಾರಣವಾಯಿತು ಎಂದು ಆ ಪ್ರದೇಶದ ಜನರೇ ಹೇಳುತ್ತಿರುವುದು ಬಿಜೆಪಿಯ ಬಂಡವಾಳವನ್ನು ಬಯಲು ಮಾಡಿದೆ. ಇದು ಪಕ್ಷ ತಲುಪಿರುವ ಹತಾಶೆಯ ಸೂಚನೆಯಾಗಿದೆ. ಸಮರ್ಪಕ ವಿದ್ಯುತ್, ನೀರು, ಪಡಿತರ ನೀಡದ ಯಡಿಯೂರಪ್ಪ ಸರ್ಕಾರದ ವಿರುದ್ಧದ ಜನಾಭಿಪ್ರಾಯಕ್ಕೆ ಅನುಗುಣವಾಗಿ ಮೈಸೂರು ಲೋಕಸಭಾ ಕ್ಷೇತ್ರದ ಮತದಾರರೂ ತಮ್ಮ ನಿರ್ಣಾಯಕ ತೀರ್ಪನ್ನು ನೀಡಲಿದ್ದಾರೆ. ತ್ರಿಕೋನ ಸ್ಪರ್ಧೆಯಿದ್ದರೂ ಜಾತ್ಯಾತೀತ ಜನತಾದಳದ ಅಭ್ಯರ್ಥಿ ಜೀವಿಜಯ ಸ್ವಲ್ಪ ಶ್ರಮ ವಹಿಸಿದರೂ ಗೆಲುವು ಅಸಾಧ್ಯವೇನಲ್ಲ.

ವರದಿ : ಎನ್.ವಿಜಯಕುಮಾರ್

ಸಂಘರ್ಷಾತ್ಮಕ ಹೋರಾಟಕ್ಕೆ ಕರೆ

ಪುಟ 12 ರಿಂದ

ಕುಡಿಯುವ ನೀರು, ಒಳಚರಂಡಿ, ರಸ್ತೆ, ವಿದ್ಯುತ್ ಮುಂತಾದ ಮೂಲ ಸೌಕರ್ಯಗಳನ್ನು ಉದ್ದೇಶ ಪೂರ್ವಕ ವಾಗಿ ಕಡೆಗಣಿಸಲಾಗಿದೆ.

ಶಿಕ್ಷಣ-ಉದ್ಯೋಗ ವಂಚನೆಯಾಗಿದ್ದರೆ, ಕೆಲಸಗಳಲ್ಲಿ ಭದ್ರತೆ ಇಲ್ಲದ ಕೆಲಸಗಳಲ್ಲಿ ತೊಡಗಿರುವ ಅಲ್ಪಸಂಖ್ಯಾತರು ಅತ್ಯಂತ ಹೀನಾಯ ಸ್ಥಿತಿಯಲ್ಲಿದ್ದಾರೆ. ಕರಾವಳಿ ಪ್ರದೇಶಗಳಲ್ಲಿ, ದೂರದ ಅರಬ್ ಪ್ರದೇಶಗಳಿಂದ ಗಂಡಸರು ಬಂದು ಮಹಿಳೆಯರನ್ನು ಮದುವೆ ಆಗಿ 5-6 ಮಕ್ಕಳು ಆದ ನಂತರ ಹೆಂಡತಿ-ಮಕ್ಕಳನ್ನು ಬಿಟ್ಟು ಹೋಗುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಈ ರೀತಿಯೂ 25-40 ವರ್ಷದೊಳಗಿನ ಮುಸ್ಲಿಂ ಮಹಿಳೆಯರು -ಮಕ್ಕಳು ಬೀದಿ ಪಾಲಾಗಿರುವುದನ್ನು ನೋಡುತ್ತಿದ್ದೇವೆ. ಇಂಥವರನ್ನು ಬೀಡಿ ಕಾರ್ಖಾನೆಯ ಮಾಲೀಕರು, ಊರಿನ ಯಜಮಾನರು, ಕಿಡಿಗೇಡಿ ಯುವಕರು ಹಲವಾರು ರೀತಿಯಲ್ಲಿ ಶೋಷಿಸುತ್ತಿದ್ದಾರೆಂದು, ಅಲ್ಪಸಂಖ್ಯಾತ ಪ್ರತಿನಿಧಿ ಸಂಗಾತಿಗಳು ಚರ್ಚಿಸಿದರು. ಮುಂದಿನ ದಿನಗಳಲ್ಲಿ ಸಾಚಾರ್ ವರದಿಯಂತೆ ರಾಜ್ಯ-ಕೇಂದ್ರ ಸರ್ಕಾರಗಳು ಬಡ ಅಲ್ಪಸಂಖ್ಯಾತರನ್ನು ಸಬಲೀಕರಿಸಲು ಯೋಜಿತ ಕಾರ್ಯ ಯೋಜನೆಗಳನ್ನು ರೂಪಿಸಿ ಜಾರಿಗೆ ತರಬೇಕೆಂದು ಒತ್ತಾಯಿಸಿ ಚಳುವಳಿ ಸಮಾವೇಶ ರೂಪಿಸಬೇಕೆಂದು ಸಲಹೆ ಇತ್ತರು.

ಯುವತಿಯ ಮೇಲೆ ತೀವ್ರಗೊಳ್ಳುತ್ತಿರುವ ದಾಳಿ:

ಆಧುನಿಕ ಯುಗದಲ್ಲೂ ಮಹಿಳೆಯರು ಮನೆಯಲ್ಲೇ ಇರಬೇಕು. ಇವಳು ಪುರಷರ ದಾಹಕ್ಕೆ, ಮಕ್ಕಳನ್ನು ಹೆರುವ, ಕುಟುಂಬದ ಸಮಾಜದ ಸೇವಕಳಂತಿರಬೇಕೆಂದು ತಾಕೀತು ದಿನೇ ದಿನೇ ಹೆಚ್ಚುತ್ತಿದೆ. ಇತ್ತೀಚೆಗೆ ಶ್ರೀರಾಮಸೇನೆ ಯುವತಿಯರ ಮೇಲೆ ನಡೆಸಿದ ಗೂಂಡಾಗಿರಿ, ಹಲ್ಲೆ ಇಂತಹ ಘಟನೆಗಳು ಒಂದಲ್ಲಾ ಒಂದು ಕಡೆ ದಿನ ನಿತ್ಯ ಬೇರೆ ಬೇರೆ ವಿಧಾನಗಳಲ್ಲಿ ನಡೆಯುತ್ತಿವೆ. ಮಹಿಳೆಯರನ್ನು ಎಲ್ಲಾ ಕ್ಷೇತ್ರಗಳಲ್ಲೂ ಸ್ವಾವಲಂಬಿಗಳಾಗಿ ಬದುಕಲು ಬೇಕಾದ ಸಮಾನ ಅವಕಾಶ ನೀಡದ ಕಾರಣ ಹಲವಾರು ರೀತಿಯ ದಾಳಿಗೆ ಒಳಗಾಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಎಲ್ಲಾ ವಿಧದಲ್ಲೂ ದಾಳಿಗೆ ಒಳಗಾಗುತ್ತಿರುವ ಮಹಿಳೆಯರು ಡಿವೈಎಫ್ಐ ಸಂಘಟನೆಯನ್ನು ವಿಸ್ತರಿಸಲು ಪ್ರಜಾಸತ್ತಾತ್ಮಕ ವಿಧಾನವನ್ನು ಅನುಸರಿಸಬೇಕೆಂದು ಹಾಗೂ ಮುಂದಿನ ದಿನಗಳಲ್ಲಿ ಯುವತಿಯರು ಹೆಚ್ಚಿನ ಆದ್ಯತೆ ನೀಡಿ ಆತ್ಮವಿಶ್ವಾಸಗಳಿಗೆ ಅವರನ್ನು ಮುಂಚೂಣಿಗೆ ತರಬೇಕೆಂಬ ಒತ್ತಾಸೆಯನ್ನು ಯುವತಿಯರ ಉಪ ಸಮಿತಿಯ ಪ್ರತಿನಿಧಿಗಳು ವ್ಯಕ್ತಪಡಿಸಿದರು.

ಸಂಘಟನೆ ಬಲಿಷ್ಠಗೊಳಿಸಲು ವಿಸ್ತರಿಸಲು ನಿರ್ಧಾರ

ಜನಾಂಗೀಯ ದ್ವೇಷ ಸೃಷ್ಟಿಸಿ ಅಮಾನವೀಯ ಮೌಢ್ಯತೆಗಳನ್ನು ಬಿತ್ತುತ್ತಿರುವ ಬಿಜೆಪಿ ವಿರುದ್ಧ ಜನ ಸಾಮಾನ್ಯರ ಸಮಸ್ಯೆಗಳಿಗೆ, ಸಂಕಷ್ಟ ಪರಿಹಾರ ಕಂಡುಕೊಳ್ಳಲು ಯುವಜನರನ್ನು ಒಗ್ಗೂಡಿಸಬೇಕಾದರೆ ಡಿವೈಎಫ್ಐ ಸಂಘಟನೆಯನ್ನು ಆದ್ಯತೆ ಅನುಸಾರ ಘಟಕ-ತಾಲ್ಲೂಕು-ಜಿಲ್ಲಾ ಸಮಿತಿಗಳನ್ನು ನಿರ್ದಿಷ್ಟವಾಗಿ ಗುರುತಿಸಿಕೊಂಡು ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕೆ ಯೋಜಿತವಾಗಿ ಯೋಜನೆ ರೂಪಿಸಿ ಜಾರಿಗೊಳಿಸಬೇಕು.

ವಿಶ್ವಾಸ: ಕರ್ನಾಟಕದಾದ್ಯಂತ ಈಗಿರುವ ಸಂಘಟನೆಯ ಬಲದ ಆಧಾರದಲ್ಲಿ ಒಂದೇ ಬಾರಿಗೆ ಸಂಘಟನೆಯನ್ನು ವಿಸ್ತರಿಸಲು ಸಾಧ್ಯವಿಲ್ಲ. ಜೊತೆಗೆ ಜನಸಾಮಾನ್ಯರ ನಿರ್ದಿಷ್ಟ ಸಮಸ್ಯೆಗಳನ್ನು ಎತ್ತಿಕೊಂಡು ಚಳುವಳಿ ರೂಪಿಸಲು ಕೆಳಮಟ್ಟದಲ್ಲಿ ಸಂಘಟನೆಯನ್ನು ಬೇರೂರಿಸದೆ ಸಾಧ್ಯವಿಲ್ಲ. ಹೀಗಾಗಿ ಮೊದಲಿಗೆ ಯಾವ ಜಿಲ್ಲೆ ತಾಲ್ಲೂಕುಗಳಲ್ಲಿ ಎಡ ಪ್ರಜಾಸತ್ತಾತ್ಮಕ ಪ್ರಗತಿಪರ ಸಂಘಟನೆಗಳು ಬಲಗೊಂಡಿವೆಯೋ ಅಂತಹ ಪ್ರದೇಶಗಳಲ್ಲಿ ಯುವಜನ ಸಂಘಟನೆಯನ್ನು ಬಲಗೊಳಿಸಿ ಜನತೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಲ್ಲಿ ನೆರೆಯ ಪ್ರದೇಶಗಳಿಗೆ ಆ ಮುಖಾಂತರ ಸಂಘಟನೆಯನ್ನು ವಿಸ್ತರಿಸಲು ಸಾಧ್ಯ. ಹೀಗಾಗಿ ಮುಂದಿನ ದಿನಗಳಲ್ಲಿ ಆದ್ಯತೆ ತಾಲ್ಲೂಕು-ಜಿಲ್ಲೆಗಳನ್ನು ಗುರುತಿಸಿ ಬಲಿಷ್ಠಗೊಳಿಸುವುದು ಆ ಮೂಲಕ ಇತರೆ ಜಿಲ್ಲೆಗಳಿಗೆ ಸಂಘಟನೆಯನ್ನು ವಿಸ್ತರಿಸುವುದು ಸೂಕ್ತವೆಂದು ಸಮ್ಮೇಳನ ಕರೆ ನೀಡಿದೆ.

ಬಲಿಷ್ಠ ಹೋರಾಟ-ಸಂಘಟನಾತ್ಮಕ ಚಳುವಳಿಗೆ ಡಿವೈಎಫ್ಐ ಮುನ್ನಡೆ

19 ಜಿಲ್ಲೆಗಳಿಂದ 47 ಯುವತಿಯರು ಸೇರಿದಂತೆ 292 ಪ್ರತಿನಿಧಿಗಳು ಪಾಲ್ಗೊಂಡಿದ್ದ 9ನೇ ಯುವಜನ ಸಮ್ಮೇಳನ ಮಾರ್ಚ್ 23-25, 2009ರಂದು ಹಾಸನದ ಜಿಲ್ಲೆಯಲ್ಲಿ ಕಾಂ: ಹರಿಕಿಷನ್‌ಸಿಂಗ್ ಸುರ್ಜೀತ್ ನಗರ ಹಾಗೂ ಕಾಂ: ಮಹಮ್ಮದ್ ರಫೀಕ್ ವೇದಿಕೆಯಲ್ಲಿ ನಡೆದ ಸಮ್ಮೇಳನ ಮುಂದಿನ ದಿನಗಳಲ್ಲಿ ಬಲಿಷ್ಠ ಹೋರಾಟ ಹಾಗೂ ಸಂಘರ್ಷಾತ್ಮಕ ಚಳುವಳಿ ರೂಪಿಸಲು ಈ ಕೆಳಕಂಡ ರೀತಿಯ ಗುರಿಯನ್ನು ಹೊಂದಿದೆ.

ಲೋಕಸಭಾ ಚುನಾವಣೆಯಲ್ಲಿ ಜನವಿರೋಧಿ ಬಿಜೆಪಿ-ಕಾಂಗ್ರೆಸ್‌ನ್ನು ಸೋಲಿಸುವುದು ಜನಪರ ಪರ್ಯಾಯ ಶಕ್ತಿಗಳನ್ನು ಬೆಂಬಲಿಸುವುದು. ನಿರುದ್ಯೋಗದ ವಿರುದ್ಧ ಉದ್ಯೋಗಭತ್ಯೆಗಾಗಿ ವ್ಯಾಪಕ ಚಳುವಳಿ ರೂಪಿಸುವುದು ಕೋಮುವಾದ-ಭಯೋತ್ಪಾದನೆ ವಿರುದ್ಧ ಬಲಿಷ್ಠ ಹೋರಾಟ. ಜಾತಿ-ಅಸ್ಪೃಶ್ಯತೆ ಆಚರಣೆ ವಿರುದ್ಧ ಕ್ರಿಯಾತ್ಮಕವಾಗಿ ಸಾಮೂಹಿಕ ದೇವಸ್ಥಾನ ಪ್ರವೇಶ, ಸಾಮೂಹಿಕ ಯೋಜನಾ ಕೂಟ ಮುಂತಾದ ಕಾರ್ಯಕ್ರಮಗಳು, ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಜಾರಿಗಾಗಿ ವ್ಯಾಪಾಕ ಹೋರಾಟ ರೂಪಿಸುವುದು. ನಾಗರೀಕ ಸಮಸ್ಯೆಗಳಾದ ವಸತಿ, ನಿವೇಶನ, ಪಡಿತರ ಸಾರ್ವತ್ರಿಕರಣಕ್ಕಾಗಿ ಸ್ಥಳೀಯ ಮಟ್ಟದ ಹೋರಾಟ ರೂಪಿಸುವುದು. ಪ್ರಾದೇಶಿಕ ಅಸಮಾನತೆ ವಿರುದ್ಧ ರೈಲ್ವೆ, ರಸ್ತೆ, ಕೈಗಾರಿಕಾ ಶಿಕ್ಷಣ ಸಮಸ್ಯೆಗಳ ಕುರಿತ ವ್ಯಾಪಕ ಹೋರಾಟ ರೂಪಿಸುವುದು. ಮುಂತಾದ ಸಮಸ್ಯೆಗಳನ್ನು ನಿರ್ದಿಷ್ಟವಾಗಿ ಗುರುತಿಸಿ ಚಳುವಳಿ ರೂಪಿಸುವುದು.

ಸಂಘಟನೆ ಬಲವರ್ಧನೆಗೆ ಆದ್ಯತೆ ತಾಲ್ಲೂಕು-ಜಿಲ್ಲೆಗಳೇ ಬುನಾದಿ


ಮುಂದಿನ ಮೂರು ವರ್ಷಗಳಲ್ಲಿ 25 ಜಿಲ್ಲೆಗಳಿಗೆ ಸಂಘಟನೆಯನ್ನು ವಿಸ್ತರಿಸಲು 100 ತಾಲ್ಲೂಕುಗಳಲ್ಲಿ ಸಂಘಟನೆಯನ್ನು ಬಲಿಷ್ಠಗೊಳಿಸಲು 2 ಲಕ್ಷ ಸದಸ್ಯತ್ವ ಗುರಿಹೊಂದಲು 100 ಘಟಕಗಳನ್ನು ಕ್ರಿಯಾಗೊಳಿಸಲು ಮೊದಲಿಗೆ 30 ತಾಲ್ಲೂಕುಗಳನ್ನು ಗುರುತಿಸಿ ಸ್ಥಳೀಯವಾಗಿ ನಿರುದ್ಯೋಗಿ ಯುವಕರಿಗೆ ಉದ್ಯೋಗಕ್ಕಾಗಿ ಆಗ್ರಹಿಸಿ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತೆ ಯೋಜನೆ' ಸಮಗ್ರ ಜಾರಿಗಾಗಿ ವ್ಯಾಪಕ ಚಳುವಳಿ ರೂಪಿಸುವುದು. ಇದಕ್ಕೆ ಪೂರಕವಾಗಿ ಜನಪರ ಸಂಘಟನೆಗಳನ್ನು ಒಗ್ಗೂಡಿಸಿ ಐಕ್ಯತೆಯ ಹೋರಾಟ ರೂಪಿಸುವುದು. ಹೀಗಾಗಿ ಮುಂದಿನ ದಿನಗಳಲ್ಲಿ ಸಂಘಟನಾತ್ಮಕವಾಗಿ ಸಂಘಟನೆಯ ಧೋರಣೆಯ ಆಧಾರದಲ್ಲಿ ನಿರಂತರ ಕಾರ್ಯ ಚಟುವಟಿಕೆಗಳನ್ನು ರೂಪಿಸಿ ಸಂಘಟನೆ ಬಲವರ್ಧನೆಗೆ ಮುಂದಾಗಲು ಮಹತ್ತರ ಗುರಿಯನ್ನು ಸಮ್ಮೇಳನ ಗುರುತಿಸಿಕೊಂಡಿತು.

'ಆಹಾರದ ಹಕ್ಕು ನಿರಾಕರಿಸಲಾಗದು'

ಜನರ ಆಹಾರ ಪದ್ಧತಿಯನ್ನು ನಿರಾಕರಿಸುತ್ತಿರುವವರು ಈ ದೇಶದ ಸಂಸ್ಕೃತಿಯನ್ನು ವಿರೋಧಿಸಿದಂತೆ, ಬಹು ಸಂಖ್ಯಾತರ ಆಹಾರ ಪದ್ಧತಿಯನ್ನ ವಿಫಲಗೊಳಿಸುವ ತಂತ್ರ ಖಂಡನೀಯ.

ಗೋ ಸಂರಕ್ಷಣೆಯ ಹೆಸರಿನಲ್ಲಿ ಗೋ ಮಾಂಸವನ್ನು ಆಹಾರವಾಗಿ ತಿನ್ನುವವರ ಮೇಲೆ ನಿರಂತರ ದಾಳಿಗಳನ್ನು ಸಂಘ ಪರಿವಾರದವರು ನಡೆಸುತ್ತಲೇ ಬಂದಿದ್ದಾರೆ. ಗೋ ಮಾಂಸದಲ್ಲಿ ಹೆಚ್ಚು ಪ್ರೋಟೀನ್ ಇರುವುದರಿಂದ ದೇಶದಲ್ಲಿ 68 ಕೋಟಿಗೂ ಹೆಚ್ಚು ಜನರು ಆಹಾರವಾಗಿ ಸೇವಿಸುತ್ತಿದ್ದಾರೆ ಮತ್ತು ವಿದೇಶಗಳಿಗೂ ಕೂಡ ರಫ್ತು ಮಾಡಲಾಗುತ್ತಿದೆ. ಈ ದೇಶದಲ್ಲಿ ಹಸುಗಳನ್ನು, ಕುರಿಗಳು, ಕೋಳಿಗಳು, ಹಂದಿಗಳು, ಒಂಟೆಗಳು, ಮೀನುಗಳು ಇನ್ನೂ ಅನೇಕ ಪ್ರಾಣಿಗಳನ್ನು ಶ್ರೇಷ್ಠ ಎಂದು ಪೂಜಿಸುತ್ತಿದ್ದು ಇವುಗಳು ಶ್ರೇಷ್ಠವಾಗಿವೆ ಎಂದು ಜನರು ಆಹಾರವಾಗಿ ಸೇವಿಸುತ್ತಿದ್ದಾರೆ.

ಭಾರತ ದೇಶದಲ್ಲಿ ಒಬ್ಬರಿಗೆ ಒಂದೊಂದು ರೀತಿಯ ಆಹಾರ ಪದ್ಧತಿ ಇದೆ. ಭೌಗೋಳಿಕ ವಾತಾವರಣಕ್ಕೆ ತಕ್ಕಂತೆ ಜನರು ಆಹಾರವನ್ನು ಬೆಳೆಸುತ್ತಾ, ಬಳಸುತ್ತಾ, ಬಂದಿದ್ದಾರೆ. ಇಂತಹ ಸಂದರ್ಭದಲ್ಲಿ ಜಾತಿ ಪದ್ಧತಿಯ ಕಾರ್ಯದಿಂದ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿದ ದಲಿತ ಮತ್ತು ಅಲ್ಪ ಸಂಖ್ಯಾತರ ಮೇಲೆ ನಿರಂತರ ದಾಳಿ ದಬ್ಬಾಳಿಕೆಗಳು ನಡೆಸುತ್ತಿರುವುದರ ಜೊತೆಗೆ ಇವರ ಆಹಾರ ಪದ್ಧತಿಯ ಮೇಲೆ ದಾಳಿಗಳನ್ನು ನಿರಂತರ ಮಾಡುವುದರ ಮೂಲಕವಾಗಿ ಈ ದೇಶದಲ್ಲಿ ಏಕ ಪದ್ಧತಿಯ ಆಹಾರ ಸೇವೆಯನ್ನು ಜಾರಿಗೊಳಿಸಲು ಹಿಂದೂ ಧರ್ಮ ರಕ್ಷಣೆಯ ಹೆಸರಿನಲ್ಲಿ ಸಂಘ ಪರಿವಾರವು ನಡೆಸುತ್ತಾ



ಬಂದಿದೆ.

ಈ ದೇಶದಲ್ಲಿ ಮನು ಸಂಸ್ಕೃತಿಯನ್ನು ಜಾರಿ ತರಲು ಮತ್ತು ಮನುಸ್ಮೃತಿಯನ್ನು ಎಲ್ಲರೂ ಬಿಡಬೇಕು ಎನ್ನುವುದು ಆರ್‌ಎಸ್ ಎಸ್ ವಾದ ಹಾಗೂ ಮನುಸ್ಮೃತಿಯನ್ನು ಈ ದೇಶದ ಸಂವಿಧಾನವಾಗಿ ಜಾರಿಗೊಳಿಸಲು ತುದಿಗಾಲಲ್ಲಿ ನಿಲ್ಲುವುದರ ಜೊತೆಗೆ ಮಾನವ ಸಮಾಜದ ಅಭಿವೃದ್ಧಿಯನ್ನು ಪಡೆಯಲು ನಿರಂತರ ಪ್ರಯತ್ನ ನಡೆಯುತ್ತಿದೆ.

ಆಹಾರ ಪದ್ಧತಿಯು ಮನುಷ್ಯನ ಮೂಲಭೂತವಾದ ವೈಯಕ್ತಿಕ ವಿಚಾರವಾಗಿದೆ. ಎಲ್ಲರೂ ಕ್ರಿಯಾತ್ಮಕವಾಗಿ ಆಹಾರವನ್ನು ನಿರಂತರ ತಿನ್ನಬೇಕಾಗಿದೆ. ಯಾರಿಗೂ ಆಹಾರದ ಪದ್ಧತಿಯ ಮೇಲೆ ಬಲಾತ್ಕಾರವಾಗಿ ತಿನ್ನಬೇಡಿ ಎನ್ನುವ ಹಕ್ಕು ಯಾರಿಗೂ ಇಲ್ಲ. ಪರಂಪರಗತವಾಗಿ ನಡೆದುಕೊಂಡು ಬಂದ ಆಹಾರ ಪದ್ಧತಿಯನ್ನು ಮುಂದುವರಿಸಬೇಕಾಗಿದೆ.

ಡಾ: ಬಿ.ಆರ್.ಅಂಬೇಡ್ಕರ್ ಅವರು ಭಾರತ ದೇಶದ ಎಲ್ಲಾ ಶೋಷಿತ ಜನರ ಧ್ವನಿಯಾಗಿದ್ದವರು. ಮನುಷ್ಯನನ್ನು ಮನುಷ್ಯ ಎಂದು ಕಾಣದೆ ಇರುವ ಹಿಂದೂ ಧರ್ಮದಲ್ಲಿನ ಅಸ್ಪೃಶ್ಯತೆ ಆಚರಣೆಯನ್ನು ಕಂಡು ಅಂಬೇಡ್ಕರ್ ಅವರು ಬೌದ್ಧ ಧರ್ಮಕ್ಕೆ ಸೇರಲು ಕರೆ ನೀಡಿದರೂ ಮತ್ತು ಬಂಡವಾಳಿಗರು, ನಮ್ಮ ವ್ಯವಸ್ಥೆಯ ಶತ್ರುಗಳೆಂದು ಕರೆದಿದ್ದಾರೆ.

ಡಾ: ಬಿ.ಆರ್.ಅಂಬೇಡ್ಕರ್ ಅವರ 118ನೇ ಜನ್ಮದಿನಾಚರಣೆ ಅಂಗವಾಗಿ ಭಾರತದ ಆಹಾರ ಪದ್ಧತಿ ಹಾಗೂ ಅಂಬೇಡ್ಕರ್ ವಿಚಾರದ ಬಗ್ಗೆ ಸಂವಾದವು ದಿನಾಂಕ:14-04-09ರಂದು ಬೆಂಗಳುರಿನ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ) ಬೆಂಗಳೂರು ಜಿಲ್ಲಾ ಸಮಿತಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಎಸ್.ವೈ.ಗುರುಶಾಂತ್, ಸಂಪಾದಕರು, ಜನಶಕ್ತಿ ಕನ್ನಡ ವಾರಪತ್ರಿಕೆ, ಮಾವಳ್ಳಿಶಂಕರ್, ರಾಜ್ಯ ಪ್ರಧಾನ ಸಂಚಾಲಕರು, ಡಿ.ಎಸ್.ಎಸ್. (ಅಂಬೇಡ್ಕರ್ ವಾದ), ಬಿ.ರಾಜಶೇಖರ ಮೂರ್ತಿ, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ, ಡಾ: ವಿಜುಕೃಷ್ಣನ್, ದೆಹಲಿ, ಪಿ.ನಾಗರಾಜ್, ಡಿವೈಎಫ್‌ಐ ಬೆಂಗಳೂರು ಜಿಲ್ಲಾ ಅಧ್ಯಕ್ಷರು, ಸಫಿಯುಲ್ಲಾ ಸಾಹೇಬ್, ಕಾರೋಫಿ, ಆಚಾರ್ಯ, ಇವರುಗಳು ಈ ಮೇಲಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ದಯಾನಂದ ಡಿವೈಎಫ್‌ಐ ಬೆಂಗಳೂರು ಜಿಲ್ಲಾ ಪದಾಧಿಕಾರಿಗಳು, ರಘುರಾಮ್ ಡಿವೈಎಫ್‌ಐ ಜಿಲ್ಲಾ ಸಮಿತಿ ಸದಸ್ಯರು, ಹುಳ್ಳಿಪ್ರಕಾಶ್, ಡಿವೈಎಫ್‌ಐ ರಾಜ್ಯ ಸಮಿತಿ ಸದಸ್ಯರು ಮತ್ತು ಇತರರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಂತರ ದನದ ಮಾಂಸದ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು.

ವರದಿ: ಹುಳ್ಳಿಪ್ರಕಾಶ್

ಮೂರನೇ ಪರ್ಯಾಯ ಶಕ್ತಿಗಳಾದ ಸಿಪಿಐ(ಎಂ) ಸಿಪಿಐ ಹಾಗೂ ಜಾತ್ಯಾತೀತ ಜನತಾದಳಕ್ಕೆ ಮತ ನೀಡಲು ಮನವಿ

ದೇಶದ ಸಾಮಾನ್ಯ ಜನರ ಹಿತಚಿಂತನೆ ಮಾಡಿ ಅವರಿಗೆ ದಕ್ಕಬೇಕಾದ ಕನಿಷ್ಠ ಸೌಲಭ್ಯಗಳಿಂದಲೂ ವಂಚಿತರನ್ನಾಗಿ ಮಾಡುತ್ತಿರುವ ಕಾಂಗ್ರೆಸ್ ಹಾಗೂ ಬಿಜೆಪಿ ಸರ್ಕಾರಗಳನ್ನು ಜನತೆ ತಿರಸ್ಕರಿಸಿ ಜನತೆಯು ಎಡಪರ್ಯಾಯ ಶಕ್ತಿಗಳಿಗೆ ಬೆಂಬಲಿಸಿ ಮತ ನೀಡಬೇಕೆಂದು ಕಾಂ: ವಿಜೆಕೆ ನಾಯರ್, ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ತಿಳಿಸಿದರು.

18-04-09ರಂದು ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು. ದೇಶ ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸುತ್ತಿರುವಾಗಲೂ ಪಶ್ಚಿಮಬಂಗಾಳದ ಎಡರಂಗ ಸರ್ಕಾರದಲ್ಲಿ ಕೆಲವು ಕಾರ್ಖಾನೆಗಳು ಮುಚ್ಚಿವೆ. ಈ ಕಾರ್ಖಾನೆಗಳಿಂದ ಕೆಲಸ ಕಳೆದುಕೊಂಡ ಕಾರ್ಮಿಕರಿಗೆ ಸರ್ಕಾರವು 500 ರೂ. ಪರಿಹಾರ ಧನ ನೀಡುತ್ತಿದೆ.

ಕೇರಳದಲ್ಲಿ ಬಜೆಟ್‌ನಲ್ಲಿ ಕೊರತೆಯಿಂದ ನಮ್ಮ ರಾಜ್ಯದಲ್ಲಿರುವಂತೆ ಕೂಡಿದ್ದರೂ 2 ರೂಪಾಯಿಗೆ ಅಕ್ಕಿ ದೊರಕುವಂತೆ ಪಡಿತರ ಚೀಟಿಯಲ್ಲಿ ವ್ಯವಸ್ಥೆ ಮಾಡಿ ಸಾರ್ವತ್ರೀಕರಣಗೊಳಿಸಿದೆ. ವ್ಯವಸ್ಥಿತ ಹೊಸ ಧೋರಣೆ ಎಡರಂಗದ ಸರ್ಕಾರದಿಂದ ಮಾತ್ರ ಸಾಧ್ಯ.

ರಾಜ್ಯದಲ್ಲಿ ಸಿಪಿಐ(ಎಂ), ಸಿಪಿಐ ಹಾಗೂ ಜನತಾದಳ(ಜಾತ್ಯಾತೀತ) ಪಕ್ಷಗಳಿಗೆ ಜನತೆ ಮತ ನೀಡಿ ಗೆಲ್ಲಿಸಬೇಕೆಂದು ಮನವಿ ಮಾಡಿದ ವಿಜೆಕೆಯವರು ಜನತಾದಳ(ಜಾತ್ಯಾತೀತ) ಸ್ಪರ್ಧಿಸದ ಐದು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಹೊರತುಪಡಿಸಿ ಪಕ್ಷೇತರ ಅಭ್ಯರ್ಥಿಗಳಿಗೆ ಮತ ನೀಡುವಂತೆ ಕರೆ ನೀಡಿದ್ದಾರೆ. ಈ ಐದು ಕ್ಷೇತ್ರಗಳಲ್ಲಿ ಸಮರ್ಥರಾದ, ಜನಪರವಾಗಿ ಕೆಲಸ ನಿರ್ವಹಿಸುವ ಅಭ್ಯರ್ಥಿಗಳಿಗೆ ಮತ ನೀಡಬೇಕೆಂದು ಅವರು ತಿಳಿಸಿದರು.

ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿಯವರು ಮಾತನಾಡಿ ಈ ಸಲದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳ ನೀತಿ-ಧೋರಣೆ ಒಂದೇ ಆಗಿದೆ. ಎರಡೂ ಪಕ್ಷಗಳ ಪ್ರಣಾಳಿಕೆಗಳು ಇದು ನಮ್ಮ ಪಕ್ಷ ಹೇಳಿದ ಪ್ರಣಾಳಿಕೆಗಳೆಂದೂ ದೂಷಿಸಿಕೊಳ್ಳುತ್ತಿವೆ. ಉದಾರೀಕರಣ ನೀತಿಗೆ ಗಂಟುಬಿದ್ದಿರುವ ಈ ಪಕ್ಷಗಳ ಪ್ರಣಾಳಿಕೆಯಲ್ಲಿ ರೈತರ ಆತ್ಮಹತ್ಯೆ, ಮುಚ್ಚಿರುವ ಕೈಗಾರಿಕೆ ಬಗ್ಗೆ ಚಕಾರವಿಲ್ಲ. ಭೂ ಸುಧಾರಣಾ ಪ್ರಶ್ನೆಯೇ ಇಲ್ಲ. ರೈತರಿಗೆ ಭೂ ವಿತರಣೆ ಕುರಿತು ಚಕಾರವೆತ್ತಿಲ್ಲ. ರೇಷನ್ ಪದ್ಧತಿ ಸಾರ್ವತ್ರಿಕರ ಬಗ್ಗೆ ಪ್ರಣಾಳಿಕೆಯಲ್ಲಿ ಇಲ್ಲ.

ಉದಾರೀಕರಣ ನೀತಿಯಿಂದ ಭಯೋತ್ಪಾದನೆ ಮತ್ತು ಕೋಮುಗಲಭೆ ಹೆಚ್ಚಾಗುತ್ತಿದೆ. ಕಾಂಗ್ರೆಸ್ ವಿಫಲತೆಯಿಂದ ಬಿಜೆಪಿ ಬೆಳೆಯುತ್ತಿವೆ. ಕಾಂಗ್ರೆಸ್ ಮತ್ತು ಬಿಜೆಪಿ ಪ್ರಣಾಳಿಕೆಯಲ್ಲಿ ಅಣು ಒಪ್ಪಂದ ರದ್ದತಿ ಅಥವಾ ಬದಲಾವಣೆ ಕುರಿತು ಸೇರಿಸಿಲ್ಲ. ಆದ್ದರಿಂದ ಈ ಎರಡು ಪಕ್ಷಗಳ ಪ್ರಣಾಳಿಕೆಗಳು ಜನರ ವಿರೋಧಿ ಆಗಿರುವುದರಿಂದ ಎಡಪರ್ಯಾಯ ಮೂರನೇ ಶಕ್ತಿ ಪಕ್ಷಗಳಾದ ಸಿಪಿಐ(ಎಂ) ಸಿಪಿಐ ಹಾಗೂ ಜಾತ್ಯಾತೀತ ಜನತಾದಳ ಪಕ್ಷಗಳಿಗೆ ಮತ ನೀಡಬೇಕೆಂದು ಅವರು ಜನತೆಯಲ್ಲಿ ಭಿನ್ನವಿಸಿಕೊಂಡರು.

ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

- ಕೆ.ಶಾಂತಕುಮಾರಿ

ಅನಂತಕುಮಾರ್ ಆಸ್ತಿ ಶೇ.433 ಹೆಚ್ಚಳ

ಕಳೆದ ಚುನಾವಣೆ ಸಂದರ್ಭದಲ್ಲಿ ಅಭ್ಯರ್ಥಿಗಳು ಸಲ್ಲಿಸಿದ ಆಸ್ತಿ ವಿವರಗಳಿಗೂ, ಈ ಬಾರಿ ಚುನಾವಣೆಯಲ್ಲಿ ಸಲ್ಲಿಸಿದ ಆಸ್ತಿ ವಿವರಗಳಿಗೆ ಹೋಲಿಕೆ ಮಾಡಿದಾಗ ಕೆಲ ಅಭ್ಯರ್ಥಿಗಳ ಆಸ್ತಿಯ ಮೊತ್ತದಲ್ಲಿ ಬಾರಿ ಏರಿಕೆಯಾಗಿರುವುದು ಕಂಡು ಬಂದಿದೆ.

ಸಂಸದರಾಗಿ ಮರು ಆಯ್ಕೆ ಬಯಸಿರುವ ಏಳು ಸಂಸದರ ಆದಾಯ ಶೇ.266.22 ರಷ್ಟು ಏರಿಕೆಯಾಗಿದೆ. ಈ ಪೈಕಿ ಕೋಲಾರದ ಕೆ.ಹೆಚ್.ಮುನಿಯಪ್ಪ ಶೇ.739.20 ಆಸ್ತಿಗಳಿಸುವ ಮೂಲಕ ಮೊದಲಿಗರಾಗಿದ್ದರೆ, ಕಾರವಾರ ಸಂಸದ ಅನಂತಕುಮಾರ್ ಹೆಗಡೆ ಆಸ್ತಿ ಕಳೆದ 5 ವರ್ಷಗಳಲ್ಲಿ ಶೇಕಡಾ 433.93ರಷ್ಟು ಹೆಚ್ಚಾಗಿದೆ. ಬೆಂಗಳೂರು ದಕ್ಷಿಣ ಕ್ಷೇತ್ರದ ಅನಂತಕುಮಾರ್ ಆಸ್ತಿಯಲ್ಲಿ ಶೇ.74.20, ಕನಕಪುರ ಸಂಸದೆ ತೇಜಸ್ವಿನಿ ರಮೇಶ್ 339.16, ಬೆಳಗಾವಿಯ ಸುರೇಶ್ ಅಂಗಡಿ ಶೇ.249 ಹೆಚ್ಚಳವಾಗಿದೆ.

2008ರಲ್ಲಿ ನಡೆದ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿ, ಇದೀಗ ಲೋಕಸಭೆಗೆ ಸ್ಪಧಿಸುತ್ತಿರುವ 13 ಅಭ್ಯರ್ಥಿಗಳ ಆಸ್ತಿ ಕಳೆದ ಒಂದು ವರ್ಷದ ಅವಧಿಯಲ್ಲಿ ಶೇ.39ರಷ್ಟು ಹೆಚ್ಚಾಗಿದೆ. ಈ ಪೈಕಿ ಅತಿ ಹೆಚ್ಚು ಶ್ರೀಮಂತರಾದವರು ಮಾಜಿ ಮುಖ್ಯಮಂತ್ರಿ ಎನ್. ಧರ್ಮಸಿಂಗ್. ಈ ಅವಧಿಯಲ್ಲಿ ಅವರ ಆಸ್ತಿ 1386ರಷ್ಟು ಹೆಚ್ಚಿದೆ. ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಅವರ ಆಸ್ತಿ ಮೊತ್ತ 96 ಲಕ್ಷ ರೂಪಾಯಿ ಇದ್ದಿದ್ದು, ಇದೀಗ 14.24 ಲಕ್ಷ ರೂಪಾಯಿ ಆಗಿದೆ.

ಕೃಪೆ : ಕರಾವಳಿ ಅಲೆ

JANASHAKTHI KANNADA VARA PATHRIKE APRIL26, 2009 Price : Rs. 5/- No. KARKAN/2006/17926 Postal Reg. No. RNP/KA/BGS/2078/2007

15ನೇ ಸಾರ್ವತ್ರಿಕ ಚುನಾವಣೆಗಳು ಆರಂಭ



ಎಪ್ರಿಲ್ 16ರಂದು 17 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 124 ಲೋಕಸಭಾ ಚುನಾವಣಾ ಕ್ಷೇತ್ರಗಳಲ್ಲಿ ಮತದಾನದೊಂದಿಗೆ ದೇಶದ 15 ನೇ ಸಾರ್ವತ್ರಿಕ ಚುನಾವಣೆಗಳು ಆರಂಭಗೊಂಡಿವೆ. ಈ ಚುನಾವಣೆಗಳು ಒಟ್ಟು ಐದು ಹಂತಗಳಲ್ಲಿ ನಡೆಯಲಿದ್ದು ಮತಗಣನೆ ಮೇ 16ರಂದು ನಡೆಯಲಿದೆ. ಆಂಧ್ರ ಪ್ರದೇಶ, ಒರಿಸ್ಸಾ ಮತ್ತು ಸಿಕ್ಕಿಂ ರಾಜ್ಯಗಳ ವಿಧಾನ ಸಭೆಗಳಿಗೂ ಜತೆಗೇ ಚುನಾವಣೆಗಳು ನಡೆಯುತ್ತಿವೆ. ಎಪ್ರಿಲ್ 23ರಂದು 141 ಕ್ಷೇತ್ರಗಳಲ್ಲಿ, ಎಪ್ರಿಲ್ 30ರಂದು 107 ಕ್ಷೇತ್ರಗಳಲ್ಲಿ, ಮೇ7ರಂದು 85 ಕ್ಷೇತ್ರಗಳಲ್ಲಿ ಹಾಗು ಮೇ13ರಂದು 86 ಲೋಕಸಭಾ ಕ್ಷೇತ್ರಗಳಲ್ಲಿ ಮತದಾನ ನಡೆಯುತ್ತದೆ.

ಕರ್ನಾಟಕದಲ್ಲಿ ಎರಡು ಹಂತಗಳಲ್ಲಿ, ಎಪ್ರಿಲ್ 23ರಂದು 17 ಕ್ಷೇತ್ರಗಳಲ್ಲಿ ಹಾಗೂ ಎಪ್ರಿಲ್ 30ರಂದು ಉಳಿದ 11 ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ.

ಈ ಚುನಾವಣೆಗಳು ದೇಶದ ಒಟ್ಟು 35 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ 22 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 164 ಕ್ಷೇತ್ರಗಳಲ್ಲಿ ಒಂದು ಹಂತದಲ್ಲಿ, 8ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 163 ಕ್ಷೇತ್ರಗಳಲ್ಲಿ ಎರಡು ಹಂತಗಳಲ್ಲಿ, ಎರಡು ರಾಜ್ಯಗಳ(ಪಶ್ಚಿಮ ಬಂಗಾಳ ಮತ್ತು ಮಹಾರಾಷ್ಟ್ರ) 90 ಕ್ರೇತ್ರಗಳಲ್ಲಿ ಮೂರು ಹಂತಗಳಲ್ಲಿ, ಒಂದು ರಾಜ್ಯದಲ್ಲಿ (ಬಿಹಾರ) ನಾಲ್ಕು ಹಂತಗಳಲ್ಲಿ ಹಾಗೂ ಉಳಿದ ಎರಡು ರಾಜ್ಯಗಳಲ್ಲಿ (ಉತ್ತರ ಪ್ರದೇಶ ಮತ್ತು ಜಮ್ಮು-ಕಾಶ್ಮೀರ)ದ 86 ಕ್ಷೇತ್ರಗಳಲ್ಲಿ ಐದು ಹಂತಗಳಲ್ಲಿ ನಡೆಯುತ್ತಿದೆ. ವಿವರ ಹೀಗಿದೆ:

	ಒಟ್ಟು ಕ್ಷೇತ್ರ	ಹಂತಗಳು	ಎಪ್ರಿಲ್ 16	ಎಪ್ರಿಲ್ 23	ಎಪ್ರಿಲ್ 30	ಮೇ 7	ಮೇ 13
ಆಂಧ್ರಪ್ರದೇಶ	42	2	22	20	-	-	-
ಅಸ್ಸಾಂ	20	1	20	-	-	-	-
ಝಾರ್ಖಂಡ್	14	2	6	8	-	-	-
ಒರಿಸ್ಸಾ	21	2	10	11	-	-	-
ಮಹಾರಾಷ್ಟ್ರ	48	3	13	25	10	-	-
ಬಿಹಾರ	40	4	13	13	11	3	-
ಜಮ್ಮು-ಕಾಶ್ಮೀರ	6	5	1	1	1	1	2
ಉತ್ತರ ಪ್ರದೇಶ	80	5	16	17	15	18	14
ಛತ್ತೀಸಗಡ	11	1	11	-	-	-	-
ಅರುಣಾಚಲ ಪ್ರದೇಶ	2	1	2	-	-	-	-
ಅಂಡಮಾನ್-ನಿಕೋಬಾರ್	1	1	1	-	-	-	-
ಲಕ್ಷದ್ವೀಪ	1	1	1	-	-	-	-
ಮೇಘಾಲಯ	2	1	2	-	-	-	-
ಮಿಝೋರಾಂ	1	1	1	-	-	-	-
ನಾಗಾಲ್ಯಾಂಡ್	1	1	1	-	-	-	-
ಮಣಿಪುರ	2	2	1	1	-	-	-
ಕರ್ನಾಟಕ	28	2	-	17	11	-	-
ಗೋವಾ	2	1	-	2	-	-	-
ತ್ರಿಪುರ	2	1	-	2	-	-	-
ಮಧ್ಯಪ್ರದೇಶ	29	2	-	13	16	-	-
ಪಶ್ಚಿಮ ಬಂಗಾಳ	42	3	-	-	14	17	11
ಗುಜರಾತ	26	1	-	-	26	-	-
ದಾದ್ರ-ನಗರ್ ಹವೇಲಿ	1	1	-	-	1	-	-
ದಮಣ್ -ದೀವ್	1	1	-	-	1	-	-
ಸಿಕ್ಕಿಂ	1	1	-	-	1	-	-
ದಿಲ್ಲಿ	7	1	-	-	-	7	-
ಹರ್ಯಾಣಾ	10	1	-	-	-	10	-
ರಾಜಸ್ತಾನ	25	1	-	-	-	25	-
ಪಂಜಾಬ್	13	2	-	-	-	4	9
ತಮಿಳುನಾಡು	39	1	-	-	-	-	39
ಉತ್ತರಾಖಂಡ	5	1	-	-	-	-	5
ಹಿಮಾಚಲ ಪ್ರದೇಶ	4	1	-	-	-	-	4
ಪುದುಚೇರಿ	1	1	-	-	-	-	1
ಚಂಡೀಗಡ	1	1	-	-	-	-	1
ಒಟ್ಟು	543		124	141	107	85	86



ಸಣ್ಣ ಕಥೆ

ನಾನೆಲ್ಲಿಗೆ ಹೋಗಲಿ....?

ನ್ಯಾಯಾಲಯವು ಕಕ್ಷಿದಾರರು, ವಕೀಲರು, ಪೊಲಿಸರಿಂದ ತುಂಬಿ ತುಳುಕುತ್ತಿತ್ತು. ಇಬ್ಬರು ಕಾನ್‌ಸ್ಟೆಬಲ್‌ಗಳು ಮಹಿಳೆಯೊಬ್ಬಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಅವಳು ಪಟ್ಟಣದ ಯಾವುದೋ ವಸತಿಗೃಹವೊಂದರಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದಳೆಂದು ವಸತಿಗೃಹದ ಮೇಲೆ ದಾಳಿ ಮಾಡಿದ ಪೊಲೀಸರು ಪುರುಷರನ್ನು ಕೈಬಿಟ್ಟು ಈಕೆಯ ಮೇಲೆ ಕೇಸ್ ದಾಖಲಿಸಿದ್ದರು.

ಆಕೆಗೆ ನ್ಯಾಯಾಧೀಶರು ದಂಡ ವಿಧಿಸಿದರು. ಆಕೆ ತನ್ನಲ್ಲಿಗೆ ಪೈಸೆ ಪೈಸೆಯನ್ನು ಲೆಕ್ಕ ಹಾಕಿ ದಂಡ ತುಂಬಿದಳು. ಪೊಲೀಸರು ಆಕೆಯನ್ನು ಬಿಡುಗಡೆಗೊಳಿಸಿದರು. ಆಕೆ ಪೊಲೀಸರನ್ನು ಮತ್ತೆ ಕೇಳಿದರು "ಈಗ ನಾನೆಲ್ಲಿಗೆ ಹೋಗಲಿ...?"

ನ್ಯಾಯಾಲಯದ ಗೋಡೆಯ ಮೇಲಿನ ಗಾಂಧಿಯ ಫೋಟೋದ ಕಣ್ಣಿಂದ ನೀರ ಹನಿ ಬಿದ್ದಂತೆ ಭಾಸವಾಯಿತು.

ಬಿ.ಶ್ರೀನಿವಾಸ



ಹಚ್ಚುವ ಹಣತೆಗಳನು

ನೆಚ್ಚುವ ಬೆಳಕುಗಳನು
ಬನ್ನಿರೋ ಬಂಧುಗಳೇ
ಎನ್ನಿರೋ 'ಬಾಂಧವರೆ'

ಭಯೋತ್ಪಾದನಾ ಬಾಂಬು ಬೆಂಕಿಯೊಳು
ಬೆಂದು ಬೆಂಡಾದ ಬೆಂಗಳೂರಿನಲಿ
ನೊಂದು ನಲುಗಿದ ಅಹಮದಾಬಾದಿನಲಿ
ಮಿಂದು ಮುದುಡಿದ ದೆಹಲಿಯಲಿ
ಬಿದ್ದು ಬಳಲಿದ ಬಾಂಬೆಯಲಿ
ಹಚ್ಚುವ ಹಣತೆಗಳನು

ನೆಚ್ಚುವ ಬೆಳಕುಗಳನು
ಗುಡಿಗಳ ಗೋಣು ಮುರಿಯುತಲಿರುವ
ಚರ್ಚುಗಳ ಚರ್ಮ ಸುಲಿಯುತಲಿರುವ
ಮಸೀದಿಗಳ ಮಾರಿಗೆ ಮಸಿ ಬಳಿಯುತಲಿರುವ
ಕೋಮುವಾದಿಗಳ ಕರಾಳ ಮೈ ಮನಸುಗಳಲಿ
ಹಚ್ಚುವ ಹಣತೆಗಳನು
ನೆಚ್ಚುವ ಬೆಳಕುಗಳನು
ಬನ್ನಿರೋ ಬಂಧುಗಳೆ
ಎನ್ನಿರೋ 'ಬಾಂಧವರೆ'.

ಪ್ರೊ .ಡಿ.ಬಿ.ಬಡಿಗೇರ,
ಹರಪನಹಳ್ಳಿ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH